ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಏಪ್ರಿಲ್ 21 ಭಾನುವಾರ 2024

ಸಂಪುಟ: 45 | ಸಂಚಿಕೆ: 6 | ಪುಟಗಳು: 12

₹4

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

ರಾಜ್ಯದ ರೈತ ವಿರೋಧಿ ಕಾಂಗ್ರೆಸ್ ಸರ್ಕಾರಕ್ಕೆ ಜನರಿಂದ ತಕ್ಕ ಪಾಠ


ಚಿಕ್ಕಬಳ್ಳಾಪುರ, ಬೆಂಗಳೂರು ಪ್ರಚಾರ ಸಭೆಯಲ್ಲಿ ಪ್ರಧಾನಿ ಮೋದಿ ವಿಶ್ವಾಸ



ಬೆಂಗಳೂರು, ಏ. 20(ಕೆಎಂಶಿ)– ಕರ್ನಾಟಕದಲ್ಲಿನ ರೈತ ವಿರೋಧಿ ಕಾಂಗ್ರೆಸ್ ಸರ್ಕಾರಕ್ಕೆ ರಾಜ್ಯದ ಮತದಾರರು ಈ ಬಾರಿಯ ಲೋಕಸಭಾ ಚುನಾವಣೆಯಲ್ಲಿ ತಕ್ಕ ಶಿಕ್ಷೆ ನೀಡಲಿದ್ದಾರೆ ಎಂಬ ವಿಶ್ವಾಸವಿದೆ ಎಂದು ಪ್ರಧಾನಮಂತ್ರಿ ಮೋದಿ ತಿಳಿಸಿದ್ದಾರೆ.

ಚಿಕ್ಕಬಳ್ಳಾಪುರ ಮತ್ತು ಬೆಂಗಳೂರು ಮೊದಲ ಹಂತದ ಲೋಕಸಭಾ ಚುನಾವಣಾ ಪ್ರಚಾರ ಭಾಷಣದಲ್ಲಿ ಮಾತನಾಡಿದ ಅವರು, ಕೇಂದ್ರದ ಎನ್‌ಡಿಎ ಸರ್ಕಾರ ಕಿಸಾನ್ ಸಮ್ಮಾನ್ ನಿಧಿ ಯೋಜನೆಯಡಿ ರೈತರಿಗೆ ನೀಡುತ್ತಿರುವ ವಾರ್ಷಿಕ ಆರು ಸಾವಿರ ರೂ.ಗಳ ಜೊತೆಗೆ ಅಂದು ರಾಜ್ಯದಲ್ಲಿದ್ದ ಬಿಜೆಪಿ ಸರ್ಕಾರ ನಾಲ್ಕು ಸಾವಿರ ರೂ. ಹೆಚ್ಚಿಗೆ ಸೇರಿಸಿ ಒಟ್ಟು 10 ಸಾವಿರ ರೂ. ನೀಡುತ್ತಿತ್ತು, ಆದರೆ ಕಾಂಗ್ರೆಸ್ ಆಡಳಿತಕ್ಕೆ ಬರುತ್ತಿದ್ದಂತೆ ನಾಲ್ಕು ಸಾವಿರ ರೂ.ಗಳನ್ನು ನಿಲ್ಲಿಸಿತು, ಜನರಿಗೆ ಕಾಂಗ್ರೆಸ್ ಹೇಗೆ ಮೋಸ ಮಾಡುತ್ತದೆ ಎಂಬುದಕ್ಕೆ ಇದು ಸ್ಪಷ್ಟ ಉದಾಹರಣೆ ಎಂದರು. ಕೇಂದ್ರ ಸರ್ಕಾರ ಕಳೆದ ಕೆಲವು ವರ್ಷಗಳಿಂದ ದೇಶದ ಬಡವರಿಗೆ ಉಚಿತ ಆಹಾರಧಾನ್ಯ ನೀಡುತ್ತಿದ್ದು, ಈ ಯೋಜನೆ ಇನ್ನೂ ಐದು ವರ್ಷ ಮುಂದುವರೆಯಲಿದೆ. ● 6ನೇ ಪುಟಕ್ಕೆ

ಖಾಲಿ ಚೊಂಬನ್ನು ಅಕ್ಷಯ ಪಾತ್ರೆ ಮಾಡಿದ ಮೋದಿ



ಚಿಕ್ಕಬಳ್ಳಾಪುರ, ಏ.20– ಹತ್ತು ವರ್ಷದ ಆಡಳಿತದಲ್ಲಿ ರಾಷ್ಟ್ರದ ಸಂಪತ್ತು ಲೂಟಿ ಮಾಡಿದ ಕಾಂಗ್ರೆಸ್ ಸರ್ಕಾರ ಬೊಕ್ಕಸ ಬರಿದು ಮಾಡಿ 2014ರಲ್ಲಿ ನರೇಂದ್ರ ಮೋದಿ ಅವರ ಕೈಗೆ ಖಾಲಿ ಚೊಂಬು ಕೊಟ್ಟಿತ್ತು. ಮುಂದಿನ ಹತ್ತು ವರ್ಷಗಳಲ್ಲಿ ತಮ್ಮ ಆಡಳಿತದಲ್ಲಿ ಪ್ರಧಾನಿ ನರೇಂದ್ರ ಮೋದಿ ಆ ಖಾಲಿ ಚೊಂಬನ್ನು ತುಂಬಿ ಅಕ್ಷಯ ಪಾತ್ರೆ ಮಾಡಿದರು ಎಂದು ಮಾಜಿ ಪ್ರಧಾನಿಗಳೂ ಆದ ಜೆಡಿಎಸ್ ವರಿಷ್ಠ ಎಚ್.ಡಿ.ದೇವೇಗೌಡ ಬಣ್ಣಿಸಿದ್ದಾರೆ. ಆ ಅಕ್ಷಯ ಪಾತ್ರೆ ● 6ನೇ ಪುಟಕ್ಕೆ

ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ ರಾಜ್ಯದಲ್ಲಿ ಬರ ಫಿಕ್ಸ್...!

● ಮಾಜಿ ಮುಖ್ಯಮಂತ್ರಿ ಕುಮಾರಸ್ವಾಮಿ ವಾಗ್ದಾಳಿ ● ಬನ್ನೂರಲ್ಲಿ ಎನ್‌ಡಿಎ ಅಭ್ಯರ್ಥಿ ಬಾಲರಾಜ್ ಪರ ಪ್ರಚಾರ ● ಗ್ಯಾರಂಟಿ ಹೆಸರಲ್ಲಿ ಸರ್ಕಾರ ಜನರ ಪಿಕ್‌ಪಾಕೆಟ್ ಮಾಡುತ್ತಿದೆ



ತಿ.ನರಸೀಪುರ ತಾಲೂಕು ಬನ್ನೂರಲ್ಲಿ ನಡೆದ ಬೃಹತ್ ಪ್ರಚಾರ ಸಭೆಯಲ್ಲಿ ಮಾಜಿ ಸಿಎಂ ಹೆಚ್.ಡಿ.ಕುಮಾರಸ್ವಾಮಿ ಮಾತನಾಡಿದರು.

ತಿ.ನರಸೀಪುರ, ಏ.20– ನರೇಂದ್ರ ಮೋದಿಯವರ ಜನಪರ ಆಡಳಿತದಿಂದ ದೇಶ ಆರ್ಥಿಕವಾಗಿ ವಿಶ್ವದಲ್ಲೇ 5ನೇ ಸ್ಥಾನದಲ್ಲಿದ್ದು, ಮುಂಬರುವ ದಿನಗಳಲ್ಲಿ ಅಮೆರಿಕಾ, ಚೈನಾ ಬಳಿಕ 3 ಸ್ಥಾನಕ್ಕೇರಲಿದೆ ಎಂದು ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ತಿಳಿಸಿದರು.

ಬನ್ನೂರಿನ ಡೈರಿ ಆವರಣದಲ್ಲಿ ಆಯೋಜಿಸಿದ್ದ ಬೃಹತ್ ಪ್ರಚಾರ ಸಭೆ ಉದ್ಘಾಟಿಸಿ ಮಾತನಾಡಿದ ಅವರು, ಪ್ರಸಕ್ತ ಲೋಕಸಭಾ ಚುನಾವಣೆ ದೇಶದ ಭದ್ರತೆ, ಆರ್ಥಿಕ ಸುಧಾರಣೆ ತರುವ ಕಾರ್ಯಕ್ರಮಗಳಿಗೆ ಉತ್ತಮ ನಾಯಕತ್ವವನ್ನು ದೇಶಕ್ಕೆ ನೀಡಬೇಕೆಂಬ ಹಿನ್ನೆಲೆಯಲ್ಲಿ ನಡೆಯುತ್ತಿದ್ದು, ಪ್ರಸ್ತುತ ಮೋದಿಯವರು ದೇಶದ ಭದ್ರತೆ ಕಾಪಾಡಲು ಸೂಕ್ತವಾದ ವ್ಯಕ್ತಿ ಎಂಬ ಭಾವನೆ ಇಡೀ ದೇಶದಲ್ಲಿ ಚರ್ಚೆಯಾಗುತ್ತಿದೆ. ಈಗಾಗಲೇ ಮೋದಿಯವರು 2 ಬಾರಿ ಪ್ರಧಾನಿಯಾಗಿ ದೇಶದ ಅಭಿವೃದ್ಧಿಗೆ ಪೂರಕ ಯೋಜನೆಗಳನ್ನು ಅನುಷ್ಠಾನಕ್ಕೆ ತಂದಿದ್ದಾರೆ. ಜೊತೆಗೆ ಜನಸಾಮಾನ್ಯರ ತಲಾ ಆದಾಯ ಹೆಚ್ಚಿಸಲು ಶ್ರಮಿಸಿದ್ದಾರೆ. ಹೀಗಾಗಿ ಮೋದಿಯವರ ಸಾಮರ್ಥ್ಯವನ್ನು ಇಡೀ ವಿಶ್ವವೇ ಗಮನಿಸುವಂತಾಗಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ ಬರಗಾಲ ಫಿಕ್ಸ್: ರಾಜ್ಯದಲ್ಲಿ 136 ಸ್ಥಾನ ಪಡೆದು ಆಡಳಿತ ನಡೆಸುತ್ತಿರುವ ಕಾಂಗ್ರೆಸ್ ಸರ್ಕಾರ ಯಾವಾಗ ಅಧಿಕಾರಕ್ಕೆ ಬರುತ್ತದೋ ಆ ವರ್ಷ ರೈತರ ಬದುಕು ಸಂಕಷ್ಟಕ್ಕೆ ಒಳಗಾಗುತ್ತದೆ. ಕಾಂಗ್ರೆಸ್ ಅಧಿಕಾರಕ್ಕೆ ಬರುವ ಜೊತೆಗೆ ಬರಗಾಲವನ್ನು ಜೊತೆಗೆ ತರುತ್ತದೆ. ಅವರಿಗೆ ಹೃದಯ ಶುದ್ಧವಿಲ್ಲ. ಅಧಿಕಾರಕ್ಕೆ ಬರುತ್ತಿದ್ದಂತೆ ಹಣ, ಅಧಿಕಾರದ ● 6ನೇ ಪುಟಕ್ಕೆ

ಕೆಬಿಜೆಯವರ ಭೂಮಂತ್ರ...



ನರೇಂದ್ರ ಮೋದಿ: ಭಾರತದ ನವೋದಯ ಪ್ರಧಾನಿ

■ ಪುಟ–4

ಮೈಸೂರಿನ ಚಾಮುಂಡೇಶ್ವರಿ ಕ್ಷೇತ್ರದಲ್ಲಿ ಯದುವೀರ್ ಬಿರುಸಿನ ಪ್ರಚಾರ

ವಿವಿಧ ಗ್ರಾಮಗಳಲ್ಲಿ ರೋಡ್ ಶೋ ಮೂಲಕ ಮತಯಾಚನೆ



ಮೈಸೂರಿನ ಚಾಮುಂಡೇಶ್ವರಿ ಕ್ಷೇತ್ರದಲ್ಲಿ ಶನಿವಾರ ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಯದುವೀರ್ ರೋಡ್ ಶೋ ಮೂಲಕ ಮತಯಾಚಿಸಿದರು. ಚಾಮುಂಡೇಶ್ವರಿ ಕ್ಷೇತ್ರದ ಶಾಸಕ ಜಿ.ಟಿ.ದೇವೇಗೌಡರನ್ನು ಚಿತ್ರದಲ್ಲಿ ಕಾಣಬಹುದು.

ಮೈಸೂರು, ಏ.20(ಬಿಎಲ್‌ಯು)– ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಶನಿವಾರ ಮೈಸೂರಿನ ಚಾಮುಂಡೇಶ್ವರಿ ಕ್ಷೇತ್ರದಲ್ಲಿ ಭರ್ಜರಿ ರೋಡ್ ಶೋ ನಡೆಸಿ, ಮತ ಯಾಚಿಸಿದರು. ಬಿಜೆಪಿ, ಜೆಡಿಎಸ್ ನಡುವೆ ಮೈತ್ರಿ ಏರ್ಪಟ್ಟಿರುವ ಕಾರಣ ಚಾಮುಂಡೇಶ್ವರಿ ಕ್ಷೇತ್ರದ ಜೆಡಿಎಸ್ ಶಾಸಕ ಜಿ.ಟಿ. ದೇವೇಗೌಡರು ಯದುವೀರ್‌ಗೆ ಸಾಥ್ ನೀಡಿದರು.

ಚಾಮುಂಡೇಶ್ವರಿ ಕ್ಷೇತ್ರದಲ್ಲಿ ಯದುವೀರ್ ಇಂದು ಬಿರುಸಿನ ಪ್ರಚಾರ ನಡೆಸಿದರು. ಬೆಳಿಗ್ಗೆ 8 ಗಂಟೆಗೆ ಆರಂಭವಾದ ರೋಡ್ ಶೋ ರಾತ್ರಿ ತನಕ ನಿರಂತರವಾಗಿ ನಡೆಯಿತು. ಚಾಮುಂಡೇಶ್ವರಿ ಕ್ಷೇತ್ರದ ಹತ್ತಾರು ಗ್ರಾಮಗಳಿಗೆ ಭೇಟಿ ನೀಡಿದ ಯದುವೀರ್ ತಮ್ಮನ್ನು ಬೆಂಬಲಿಸುವಂತೆ ಮನವಿ ಮಾಡಿದರು. ನಾಗವಾಲದಿಂದ ಆರಂಭವಾದ ಮತ ಪ್ರಚಾರ ಮಾಣಿಕ್ಯಪುರ, ಮಾದಹಳ್ಳಿ, ಬೀರಿಹುಂಡಿ, ಜಟ್ಟಿಹುಂಡಿ, ಗಣಗರಹುಂಡಿ, ನಂಜರಾಯನಹುಂಡಿ, ನಗರ್ತಹಳ್ಳಿ, ಲಿಂಗಾಬುದಿಪಾಳ್ಯ, ರಮಾಬಾಯಿನಗರ, ● 6ನೇ ಪುಟಕ್ಕೆ

ಎಲ್ಲೂ ಕಾಂಗ್ರೆಸ್‌ಗೆ ಶಕ್ತಿ ಇಲ್ಲ: ಜಿಟಿಡಿ


ಕರ್ನಾಟಕದಲ್ಲಿ ಮಾತ್ರವಲ್ಲದೆ ದೇಶದಲ್ಲೇ ಕಾಂಗ್ರೆಸ್ ಪಕ್ಷಕ್ಕೆ ಶಕ್ತಿ ಇಲ್ಲ ಎಂದು ಚಾಮುಂಡೇಶ್ವರಿ ಕ್ಷೇತ್ರದ ಶಾಸಕ ಜಿ.ಟಿ.ದೇವೇಗೌಡರು ಟೀಕಿಸಿದರು.

ಚಾಮುಂಡೇಶ್ವರಿ ಕ್ಷೇತ್ರದಲ್ಲಿ ಇಂದು ಯದುವೀರ್ ಪರ ಪ್ರಚಾರ ನಡೆಸಿದ ಸಂದರ್ಭದಲ್ಲಿ ಮಾತನಾಡಿದ ಅವರು, ಇತಿಹಾಸದಲ್ಲಿ ಇದೇ ಮೊದಲ ಬಾರಿಗೆ ಕಾಂಗ್ರೆಸ್ ಅತ್ಯಂತ ಕಡಿಮೆ ಕ್ಷೇತ್ರದಲ್ಲಿ ಸ್ಪರ್ಧೆ ಮಾಡಿದೆ. ಹೀಗಿರುವಾಗ ಸ್ಪಷ್ಟ ಬಹುಮತದೊಂದಿಗೆ ಹೇಗೆ ಅಧಿಕಾರದ ಚುಕ್ಕಾಣಿ ಹಿಡಿಯುತ್ತಾರೆ ಎಂದು ಪ್ರಶ್ನಿಸಿದರು. ಇಂಡಿಯಾ ಮೈತ್ರಿಕೂಟದಲ್ಲಿದ್ದ ಮಮತಾ ಬ್ಯಾನರ್ಜಿ ಅವರೇ ಕಾಂಗ್ರೆಸ್‌ಗೆ ಮತ ಹಾಕಬೇಡಿ ಎಂದು ಹೇಳಿದ್ದಾರೆ. ಇದರಿಂದ ಇಡೀ ದೇಶದಲ್ಲಿ ಕಾಂಗ್ರೆಸ್ ವಿರೋಧಿ ಅಲೆ ಇದೆ ಎಂದು ಆರೋಪಿಸಿದರು. ಪಂಚ ಗ್ಯಾರಂಟಿ ಕೊಟ್ಟಿದ್ದೇವೆ ಎಂದು ಮತ ಕೇಳುತ್ತಿದ್ದಾರೆ. ಈಗ ಮತ್ತಷ್ಟು ಗ್ಯಾರಂಟಿ ನೀಡುತ್ತೇವೆ ಎಂದು ಗ್ಯಾರಂಟಿ ಕಾರ್ಡ್ ನೀಡುತ್ತಿದ್ದಾರೆ. ಆದರೆ ಕಾಂಗ್ರೆಸ್ ಗ್ಯಾರಂಟಿ ನಂಬಬೇಡಿ. ರಾಜ್ಯದಲ್ಲಿ ಕಾಂಗ್ರೆಸ್ ಪಕ್ಷ ಅಧಿಕಾರಕ್ಕೆ ಬಂದ ನಂತರ ಆಗಿರುವ ಅವ್ಯವಸ್ಥೆ ಬಗ್ಗೆ ಅವಲೋಕನ ಮಾಡಿ ಎಂದು ಸಲಹೆ ನೀಡಿದರು. ಈ ಮೊದಲು 10 ಸಾವಿರಕ್ಕೆ ಪಂಪ್‌ಸೆಟ್ ಹಾಕಿಸಬಹುದಿತ್ತು. ಆದರೆ ಈಗ ಒಂದು ಟ್ರಾನ್ಸ್‌ಫಾರ್ಮರ್ ಹಾಕಿಸಬೇಕೆಂದರೆ 4 ಲಕ್ಷ ವೆಚ್ಚವಾಗುತ್ತದೆ. ಅಗತ್ಯ ವಸ್ತುಗಳ ಬೆಲೆ ಗಗನಕ್ಕೇರಿದೆ. ಮನೆ, ಭೂಮಿ ಸೇರಿದಂತೆ ಹಲವು ರೀತಿಯ ತೆರಿಗೆ ದುಬಾರಿಯಾಗಿದೆ. ಆದ ಕಾರಣ ಕಾಂಗ್ರೆಸ್ ಗ್ಯಾರಂಟಿ ಮಾತಿಗೆ ಮರುಳಾಗಬೇಡಿ. ● 6ನೇ ಪುಟಕ್ಕೆ

ಮಂಡ್ಯ ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಸ್ಟಾರ್ ಚಂದ್ರು ಪರ ಮತಯಾಚನೆ

ಸರ್ಕಾರ ಪತನ ಬರೀ ಹಗಲುಗನಸು...

ಕೆ.ಆರ್.ನಗರ ಪ್ರಚಾರ ಸಭೆಯಲ್ಲಿ ಮಾಜಿ ಪ್ರಧಾನಿ ದೇವೇಗೌಡರ ಕುಟುಂಬದ ವಿರುದ್ಧ ಮುಖ್ಯಮಂತ್ರಿ ಸಿದ್ದರಾಮಯ್ಯ ವಾಗ್ದಾಳಿ



ಕೆ.ಆರ್.ನಗರದ ಪುರಸಭೆ ಬಯಲು ರಂಗಮಂದಿರದ ಆವರಣದಲ್ಲಿ ಶನಿವಾರ ನಡೆದ ಬಹಿರಂಗ ಚುನಾವಣಾ ಪ್ರಚಾರ ಸಭೆಯನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಉದ್ಘಾಟಿಸಿದರು.

ಕೆ.ಆರ್.ನಗರ, ಏ.20–ಲೋಕಸಭಾ ಚುನಾವಣೆ ಬಳಿಕ ರಾಜ್ಯ ಸರ್ಕಾರ ಪತನವಾಗಲಿದೆ ಎಂದು ಮಾಜಿ ಪ್ರಧಾನಿ ಹೆಚ್.ಡಿ. ದೇವೇಗೌಡ, ಮಾಜಿ ಸಿಎಂ ಕುಮಾರಸ್ವಾಮಿ ಹಗಲುಗನಸು ಕಾಣುತ್ತಿದ್ದಾರೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ಪಟ್ಟಣದ ಪುರಸಭೆ ಬಯಲು ರಂಗಮಂದಿರದ ಆವರಣದಲ್ಲಿ ಶನಿವಾರ ನಡೆದ ಬಹಿರಂಗ ಚುನಾವಣಾ ಪ್ರಚಾರ ಸಭೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿ ವೆಂಕಟರಮಣೇಗೌಡ (ಸ್ಟಾರ್‌ಚಂದ್ರು) ಪರ ಮತಯಾಚಿಸಿ ಮಾತನಾಡಿದ ಅವರು, ಮಾಜಿ ಪ್ರಧಾನಿ ಹೆಚ್.ಡಿ. ದೇವೇಗೌಡರ ಕುಟುಂಬದವರಿಗೆ ಅವರ ಮನೆಯವರನ್ನು ಬಿಟ್ಟರೆ ನನ್ನನ್ನೂ ಸೇರಿದಂತೆ ಒಕ್ಕಲಿಗರನ್ನು ಕಂಡರೆ ಆಗುವುದಿಲ್ಲ. ಅದರಲ್ಲೂ ಒಕ್ಕಲಿಗರು ಅಧಿಕಾರದಲ್ಲಿದ್ದರೆ ಹೊಟ್ಟೆ ಉರಿದುಕೊಂಡು ಬಾಯಿ ಬಡಿದುಕೊಳ್ಳುತ್ತಾರೆ ಎಂದರು. ಕಾಂಗ್ರೆಸ್ ಸರ್ಕಾರ ರಾಜ್ಯದಲ್ಲಿ ಅಧಿಕಾರದಲ್ಲಿ ಇರುವವರೆಗೂ ಪಂಚ ಗ್ಯಾರಂಟಿ ಯೋಜನೆಗಳು ಯಾವುದೇ ಕಾರಣಕ್ಕೂ ನಿಲ್ಲುವುದಿಲ್ಲ ಜತೆಗೆ ಮುಂಬರುವ ವಿಧಾನಸಭಾ ಚುನಾವಣೆಯಲ್ಲಿಯೂ ಜನರ ಬೆಂಬಲದಿಂದ ಮತ್ತೆ ನಾವೇ ಅಧಿಕಾರಕ್ಕೆ ಬರಲಿದ್ದು ಆ ಯೋಜನೆಗಳು ನಿರಂತರವಾಗಿ ಜಾರಿಯಲ್ಲಿ ಇರುತ್ತವೆ ಎಂದು ಭರವಸೆ ನೀಡಿದರು. ತಮ್ಮ ಕುಟುಂಬದ ರಕ್ಷಣೆಗಾಗಿ ಬಿಜೆಪಿಯೊಂದಿಗೆ ಹೊಂದಾಣಿಕೆ ಮಾಡಿಕೊಂಡಿರುವ ಜೆಡಿಎಸ್‌ನವರು ಕಳೆದ ವಿಧಾನಸಭಾ ಚುನಾವಣೆಯಲ್ಲಿ ನಮ್ಮ ಪಕ್ಷದ ನಾಯಕ ರಾಹುಲ್ ಗಾಂಧಿಯವರು ಜೆಡಿಎಸ್ ಬಿಜೆಪಿಯ ಬಿ ಟೀಂ ಎಂದು ಟೀಕಿಸಿದಾಗ ನಮ್ಮ ಮೇಲೆ ಹರಿಹಾಯುತ್ತಿದ್ದರು ಈಗ ಈ ಇಬ್ಬರಿಗೂ ಸಂಬಂಧ ಹೇಗೆ ಕುದುರಿತು ಎಂದು ಪ್ರಶ್ನಿಸಿದರು.

ಬಿಜೆಪಿಯೊಂದಿಗೆ ಮೈತ್ರಿ ಮಾಡಿಕೊಂಡಿರುವ ಜೆಡಿಎಸ್‌ನವರು ಬೆಂಗಳೂರು ಗ್ರಾಮಾಂತರ ಸೇರಿದಂತೆ ಎಲ್ಲಾ ಕಡೆಯು ತಮ್ಮ ಕುಟುಂಬದವರನ್ನೇ ಸ್ಪರ್ಧಾ ಕಣಕ್ಕಿಳಿಸಿದ್ದು ಕೋಲಾರ ಲೋಕಸಭಾ ಕ್ಷೇತ್ರ ಮೀಸಲಾಗದಿದ್ದರೆ ಅಲ್ಲಿಯೂ ತಮ್ಮವರನ್ನೇ ನಿಲ್ಲಿಸುತ್ತಿದ್ದರು ಎಂದು ಲೇವಡಿ ಮಾಡಿದರಲ್ಲದೆ, ಅಧಿಕಾರದ ಆಸೆಗಾಗಿ ತಮ್ಮ ಅಳಿಯನಿಗೂ ಬಿಜೆಪಿಯಿಂದ ಟಿಕೆಟ್ ಕೊಡಿಸಿದ್ದಾರೆ ಎಂದರು. ಕಳೆದ ಹತ್ತು ವರ್ಷಗಳಿಂದ ದೇಶದಲ್ಲಿ ಅಧಿಕಾರದಲ್ಲಿರುವ ಮೋದಿ ನೇತೃತ್ವದ ಕೇಂದ್ರ ಸರ್ಕಾರ ರೈತರು ಮತ್ತು ಜನಸಾಮಾನ್ಯರಿಗೆ ಏನು ಅನುಕೂಲ ಮಾಡಿದೆ ಎಂದು ಉತ್ತರಿಸಬೇಕೆಂದ ಮುಖ್ಯಮಂತ್ರಿಗಳು, ಡಾ.ಮನ ಮೋಹನ್‌ಸಿಂಗ್ ಅವರು ಪ್ರಧಾನ ಮಂತ್ರಿಗಳಾಗಿದ್ದಾಗ ರೈತರ ಸಾಲಮನ್ನಾ ಮಾಡುವುದರ ಜತೆಗೆ ಆಗ ನಾನು ಸಹ 50 ಸಾವಿರ ರೂಗಳವರೆಗೆ 8100 ಕೋಟಿ ಸಾಲಮನ್ನಾ ಮಾಡಿದ್ದೆ ಎಂದು ನುಡಿದರು.

ಸುಳ್ಳಿನ ರಾಜಕಾರಣ ● 6ನೇ ಪುಟಕ್ಕೆ

ಮೈಸೂರು ಮಿತ್ರ

ಡಾ.ರಾಜ್ ಜಯಂತಿ: ಏ.23ರಿಂದ ಚಲನಚಿತ್ರ ಗೀತೆ ಗಾಯನ ನೆನಪಿನೋತ್ಸವ



ಮೈಸೂರು,ಏ.20(ಜಿಎ)–ಡಾ.ರಾಜ್‌ಕುಮಾರ್ ಅವರ 96ನೇ ಜಯಂತಿ ಅಂಗವಾಗಿ ರಾಜಕುಮಾರ್ ಕಲಾ ಸೇವಾ ಟ್ರಸ್ಟ್ ವತಿಯಿಂದ ನಾದಬ್ರಹ್ಮ ಸಂಗೀತ ಸಭಾಂಗಣದಲ್ಲಿ ಏ.23ರಿಂದ 30ರವರೆಗೆ ಪ್ರತಿ ದಿನ ಸಂಜೆ 5ರಿಂದ ರಾತ್ರಿ 9.30ರವರೆಗೆ ಚಲನಚಿತ್ರ ಗೀತೆ ಗಾಯನದ ನೆನಪಿನೋತ್ಸವ ಆಯೋಜಿಸಲಾಗಿದೆ ಎಂದು ಟ್ರಸ್ಟ್ ಸ್ಥಾಪಕ ಬಿ.ಎಸ್.ಜಯರಾಮರಾಜು ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಏಳು ದಿನಗಳ ಉತ್ಸವದಲ್ಲಿ 300 ಗೀತೆಗಳನ್ನು ವಿವಿಧ ಗಾಯಕರು ಹಾಡುವರು. ಏ.23ರಂದು ಪಿ.ಬಿ.ಶ್ರೀನಿವಾಸ್ ಅವರು ರಾಜಕುಮಾರ್ ಚಿತ್ರಗಳಿಗೆ ಹಾಡಿದ ಹಾಡುಗಳನ್ನು ಹಾಡಲಾಗುವುದು. ಏ.24ರಂದು ರಾಜ್‌ಕುಮಾರ್ ಜನ್ಮದಿನದ ಪ್ರಯುಕ್ತ 10 ಮಂದಿ ಹಿರಿಯ ಕಲಾವಿದರಿಗೆ ಸನ್ಮಾನ ಆಯೋಜಿಸಲಾಗಿದೆ ಎಂದರು. ಸುದ್ದಿಗೋಷ್ಠಿಯಲ್ಲಿ ಟ್ರಸ್ಟ್ ಗಾಯಕ ಸುಧೀಂದ್ರ, ಬಾಲುಪ್ರಕಾಶ, ಸರ್ವಮಂಗಳಾ, ಲತಾ ಬಾಲಕೃಷ್ಣ ಉಪಸ್ಥಿತರಿದ್ದರು.

ಇಂದು ಗಾಯಕ ಪಿ.ಬಿ.ಶ್ರೀನಿವಾಸ್ ನೆನಪಿನೋತ್ಸವ



ಮೈಸೂರು, ಏ.20(ಜಿಎ)–ಮೈಸೂರಿನ ಎಸ್.ಎಂ.ಮ್ಯೂಸಿಕ್ ವತಿಯಿಂದ ನಾದಬ್ರಹ್ಮ ಸಭಾಂಗಣದಲ್ಲಿ ಏ.21ರಂದು ಸಂಜೆ 5ಕ್ಕೆ ಗಾಯಕ ಪಿ.ಬಿ.ಶ್ರೀನಿವಾಸ್ ನೆನಪಿನೋತ್ಸವ ಆಯೋಜಿಸಲಾಗಿದೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಸಂಗೀತ ಕಲಾವಿದ ಗಾಡ್ವಿನ್ ಪಾಲ್ ಈ ವಿಷಯ ತಿಳಿಸಿ, ಕಾರ್ಯಕ್ರಮದಲ್ಲಿ ಗಾಯಕ ಎಸ್.ಎಚ್.ಶಾಂತಕುಮಾರ್ ಮತ್ತು ತಂಡದ 15 ಗಾಯಕರು ಪಿ.ಬಿ.ಶ್ರೀನಿವಾಸ್ ಗಾಯನದ 25 ಹಾಡುಗಳನ್ನು ಪ್ರಸ್ತುತಪಡಿಸುವರು. ಉತ್ಸವದ ಆಯೋಜನೆಯಲ್ಲಿ ಮಹಾಲಕ್ಷ್ಮಮ್ಮ, ತುಮಕೂರಿನ ಸಿದ್ಧಿ ವಿನಾಯಕ ಸೇವಾ ಟ್ರಸ್ಟ್ ಸಹಕಾರ ನೀಡಿದ್ದಾರೆ. ಎಲ್ಲರಿಗೂ ಉಚಿತ ಪ್ರವೇಶವಿದೆ ಎಂದರು. ಸುದ್ದಿಗೋಷ್ಠಿಯಲ್ಲಿ ಗಾಯಕಿ ರಾಜೇಶ್ವರಿ ಇದ್ದರು.

ತುಳಸಿದಾಸಪ್ಪ ನಿವಾಸಕ್ಕೆ ಕಾಂಗ್ರೆಸ್ ಮುಖಂಡರ ಭೇಟಿ



ಮೈಸೂರು ನಗರ ಕಾಂಗ್ರೆಸ್ ಸೇವಾದಳ ಪದಾಧಿಕಾರಿಗಳು ಹಾಗೂ ಶಾಸಕ ಕೆ.ಹರೀಶ್‌ಗೌಡ ನೇತೃತ್ವದಲ್ಲಿ ಮಾಜಿ ಸಂಸದ ತುಳಸಿದಾಸಪ್ಪ ಅವರ ನಿವಾಸಕ್ಕೆ ಭೇಟಿ ನೀಡಿ, ಪತ್ನಿ ಸರೋಜಮ್ಮ ತುಳಸಿದಾಸ್ ಅವರನ್ನು ಗೌರವಿಸಿದರು.

ಮೈಸೂರು ಏ.20(ಎಸ್‌ಪಿಎನ್)– ಮಾಜಿ ಸಂಸದ ದಿವಂಗತ ತುಳಸಿದಾಸಪ್ಪ ಅವರ ನಿವಾಸಕ್ಕೆ ಮೈಸೂರು ನಗರ ಕಾಂಗ್ರೆಸ್ ಸೇವಾದಳ ಹಾಗೂ ಮೈಸೂರು ನಗರ ಕೋ–ಆಪರೇಟಿವ್ ಘಟಕದ ಪದಾಧಿಕಾರಿಗಳು ಹಾಗೂ ಶಾಸಕ ಕೆ.ಹರೀಶ್‌ಗೌಡ ನೇತೃತ್ವದಲ್ಲಿ ಭೇಟಿ ನೀಡಿ, ಪತ್ನಿ ಸರೋಜಮ್ಮ ತುಳಸಿದಾಸಪ್ಪ ಅವರನ್ನು ಗೌರವಿಸಿದ್ದಾರೆ.

ಶಾಸಕ ಕೆ.ಹರೀಶ್ ಗೌಡ ಮಾತನಾಡಿ, ಮಾಜಿ ಸಂಸದ ದಿ.ತುಳಸಿದಾಸಪ್ಪನವರು 1967–1980ರವರೆಗೆ ಮೈಸೂರು ಲೋಕಸಭಾ ಕ್ಷೇತ್ರದ ಸಂಸದರಾಗಿದ್ದರು. ಈ ವೇಳೆ ಮೈಸೂರಿನ ಅಭಿವೃದ್ಧಿಗೆ ಭಾರಿ ಕೊಡುಗೆ ನೀಡಿದ್ದಾರೆ. ಅವರ ಮನೆಗೆ ನಾನು ಸೇರಿದಂತೆ ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಅಭ್ಯರ್ಥಿ ಎಂ.ಲಕ್ಷ್ಮಣ ಸೇರಿದಂತೆ ಇತರೆ ಮುಖಂಡರು ಭೇಟಿ ನೀಡಿದ್ದೇವೆ. ಅವರು ಕಾಂಗ್ರೆಸ್ ಅಭ್ಯರ್ಥಿಗೆ ಆಶೀರ್ವದಿಸಿದ್ದಾರೆ. ಇಂದು ಮಾಜಿ ಸಂಸದ ತುಳಸಿ ದಾಸಪ್ಪನವರ 19ನೇ ಪುಣ್ಯಸ್ಮರಣೆ ಹಾಗಾಗಿ ಭೇಟಿ ನೀಡಿದ್ದೇವೆ ಎಂದರು. ಮೈಸೂರು ನಗರ ಕಾಂಗ್ರೆಸ್ ಅಧ್ಯಕ್ಷ ಆರ್.ಮೂರ್ತಿ ಇನ್ನಿತರರು ಹಾಜರಿದ್ದರು.

ಇಂದು 38ನೇ ಅಂತಾರಾಷ್ಟ್ರೀಯ ನಿರಂತರ ಕಲೆಮನೆ ಉತ್ಸವ



ಮೈಸೂರು, ಏ. 20–ಮೈಸೂರಿನ ಕುಮಾರ್ ಪ್ರದರ್ಶಕ ಕಲೆಗಳ ಕೇಂದ್ರದ ವತಿಯಿಂದ ಏ.21ರಂದು 38ನೇ ಅಂತಾರಾಷ್ಟ್ರೀಯ ನಿರಂತರ ಕಲೆಮನೆ ಉತ್ಸವದ ಅಂಗವಾಗಿ ವಿಶ್ವ ನೃತ್ಯ ದಿನಾಚರಣೆ ನಡೆಯಲಿದೆ. ಅಂದು ಮಧ್ಯಾಹ್ನ 2.30ಕ್ಕೆ ಸಂಸ್ಥೆಯ ಕಲೆಮನೆ ಸಭಾಂಗಣದಲ್ಲಿ ನಡೆಯುವ ವಿಶೇಷ ನೃತ್ಯ ಕಾರ್ಯಕ್ರಮದಲ್ಲಿ ರಾಷ್ಟ್ರ ಹಾಗೂ ಅಂತರರಾಷ್ಟ್ರೀಯ ಮಟ್ಟದಲ್ಲಿ ಖ್ಯಾತಿವೆತ್ತ ನೃತ್ಯ ಗುರುಗಳು ಅವರ ನೃತ್ಯ ತಂಡಗಳೊಂದಿಗೆ ಪಾಲ್ಗೊಳ್ಳಲಿದ್ದಾರೆ. ಈ ಎಲ್ಲಾ ಕಾರ್ಯಕ್ರಮಗಳಿಗೂ ಪ್ರವೇಶ ಉಚಿತವಾಗಿದೆ.

ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಮೈಸೂರಿನ ಕಲಾ ಸಿಂಧು ನೃತ್ಯ ಶಾಲೆಯ ಸ್ಥಾಪಕರು ಮತ್ತು ನಿರ್ದೇಶಕರಾದ ವಿದುಷಿ ಕೆ.ಗಾಯತ್ರಿ, ಬೆಂಗಳೂರು ವಿಶ್ವವಿದ್ಯಾನಿಲಯದ ನೃತ್ಯ ವಿಭಾಗದ ಅತಿಥಿ ಉಪನ್ಯಾಸಕರು, ನೃತ್ಯ ವಿದುಷಿ ಡಾ. ಬಿ.ವಿ.ಗೀತಾ, ಡಾ. ರಾಧಿಕಾ ರಂಜಿನಿ ಭಾಗವಹಿಸುವರು.

ನೃತ್ಯ ಕಾರ್ಯಕ್ರಮಗಳು: ಬೆಂಗಳೂರಿನ ಲಲಿತಾಶ್ರೀ ಅಕಾಡೆಮಿಯ ನೃತ್ಯ ವಿದುಷಿ ಹಾಗೂ ಗುರು ಸುಮಾ ಕೃಷ್ಣಮೂರ್ತಿ ಮತ್ತು ಶಿಷ್ಯರು ಇವರಿಂದ ಭರತನಾಟ್ಯ ಪ್ರದರ್ಶನ. ಸಿಂಗಾಪುರ್‌ನ ನಾಟ್ಯಂ ಮಾಲಿಕಾ ಸಂಸ್ಥೆಯ ಸ್ಥಾಪಕರು, ನಿರ್ದೇಶಕ ಗುರು ಮಾಲಿಕಾ ಪನ್ನೀಕರ್ ಅವರಿಂದ ಮೋಹಿನಿ ಅಟ್ಟಂ ನೃತ್ಯ ಪ್ರದರ್ಶನ, ಮೈಸೂರಿನ ನೂಪುರ ನೃತ್ಯಾಲಯದ ಸ್ಥಾಪಕ ಮತ್ತು ನಿರ್ದೇಶಕರಾದ ನೃತ್ಯ ಗುರು ದಿವ್ಯಾ ಪ್ರಶಾಂತ್ ಮತ್ತು ಶಿಷ್ಯರಿಂದ ಭರತನಾಟ್ಯ ಪ್ರದರ್ಶನ.

ಬೆಂಗಳೂರಿನ ಶ್ರೀ ದುರ್ಗಾ ಪರಮೇಶ್ವರಿ ನೃತ್ಯಾನಿಕೇತನದ ನೃತ್ಯ ವಿದುಷಿ ಹಾಗೂ ಗುರು ಸಲೋನಿ ಜಗದೀಶ್ ಮತ್ತು ಶಿಷ್ಯರಿಂದ ಭರತನಾಟ್ಯ ಪ್ರದರ್ಶನ. ಬೆಂಗಳೂರಿನ ಆನಂದಿ ನೃತ್ಯ ಶಾಲೆಯ ನೃತ್ಯ ವಿದುಷಿ ಹಾಗೂ ಗುರು ಶ್ವೇತಾ ರಾಘವೇಂದ್ರ ಮತ್ತು ಶಿಷ್ಯರಿಂದ ಭರತನಾಟ್ಯ ಪ್ರದರ್ಶನ ಹಾಗೂ ಮೈಸೂರಿನ ಕುಮಾರ್ ಪ್ರದರ್ಶಕ ಕಲೆಗಳ ಕೇಂದ್ರದ ವಿದ್ಯಾರ್ಥಿಗಳು ಭರತನಾಟ್ಯ ಪ್ರದರ್ಶನ ನೀಡುವರು.

ಕಾಂಗ್ರೆಸ್ ಎಸ್ಸಿ–ಎಸ್ಟಿ, ಅಲ್ಪಸಂಖ್ಯಾತರು, ಹಿಂದುಳಿದವರ ಬೆನ್ನೆಲುಬು

ಕೆಪಿಸಿಸಿ ಉಪಾಧ್ಯಕ್ಷ ವೇಣುಗೋಪಾಲ್

ಮೈಸೂರು, ಏ.20(ಜಿಎ)–ಕಾಂಗ್ರೆಸ್ ಪಕ್ಷ ಎಸ್‌ಸಿ, ಎಸ್‌ಟಿ, ಅಲ್ಪಸಂಖ್ಯಾತರು ಮತ್ತು ಹಿಂದುಳಿದವರ ಸಮುದಾಯದ ಬೆನ್ನೆಲುಬಾಗಿ ನಿಂತಿದೆ. ಆದ್ದರಿಂದ ಎಲ್ಲಾ ಸಮುದಾಯಗಳು ಲೋಕಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿಗಳಿಗೆ ಮತ ನೀಡಿ ಎಂದು ಕೆಪಿಸಿಸಿ ಉಪಾಧ್ಯಕ್ಷ ವೇಣುಗೋಪಾಲ್ ಮನವಿ ಮಾಡಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಎಲ್ಲಾ ವರ್ಗದವರ ಏಳಿಗೆಗೆ ಪಕ್ಷ ಏನು ಮಾಡಿದೆ ಎಂಬುದು ಎಲ್ಲರಿಗೂ ತಿಳಿದಿದೆ. ಉಳುವವನೇ ಭೂಮಿ ಒಡೆಯ ಎಂಬ ನೀತಿ, ಈ ಸಮುದಾಯದ ವಿದ್ಯಾರ್ಥಿಗಳಿಗೆ ಹಾಸ್ಟೆಲ್ ನಿರ್ಮಾಣ, ಶಿಶುವಿಹಾರ, ಟೆಂಡರ್ ಪದ್ಧತಿಯಲ್ಲಿ ಮೀಸಲಾತಿ ಮೊದಲಾದವುಗಳು ಅನುಕೂಲ ಕಲ್ಪಿಸಿವೆ. ಹೀಗಾಗಿ ಈ ಸಮುದಾಯದವರು ಈ ಬಾರಿಯ ಲೋಕಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷವನ್ನು ಬೆಂಬಲಿಸಿ ಎಂದರು.

ಈ ವರ್ಗದ ಜನಸಂಖ್ಯೆಗೆ ಅನುಗುಣವಾಗಿ ಪಕ್ಷದ ಸರ್ಕಾರ ಹಣ ಹಂಚಿಕೆ ಮಾಡಿದೆ. ಗ್ಯಾರಂಟಿ ಯೋಜನೆಯಿಂದಲೂ ಅನುಕೂಲವಾಗಿದೆ. ಕೇಂದ್ರದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬಂದಲ್ಲಿ ಬಡ ಕುಟುಂಬಗಳಿಗೆ ವಾರ್ಷಿಕ 1 ಲಕ್ಷ, ರೈತರ ಸಾಲ ಮನ್ನಾ ಮೊದಲಾದ ಯೋಜನೆಗಳು ಜಾರಿಯಾಗಲಿವೆ. ಆದ್ದರಿಂದ ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಅಭ್ಯರ್ಥಿ ಎಂ.ಲಕ್ಷ್ಮಣ್ ಹಾಗೂ ಚಾಮರಾಜನಗರ ಕ್ಷೇತ್ರದ ಸುನಿಲ್ ಬೋಸ್ ಅವರ ಗೆಲುವಿಗೆ ಈ ಸಮುದಾಯದವರು ಶ್ರಮಿಸಬೇಕೆಂದು ಕರೆ ನೀಡಿದರು. ಪಕ್ಷದ ಪರಿಶಿಷ್ಟ ಜಾತಿ ವಿಭಾಗದ ಅಧ್ಯಕ್ಷ ಆರ್.ಧರ್ಮಸೇನಾ, ಮುಖಂಡರಾದ ವಿಜಯನಾಯ್ಕ, ಮೊಹ್ಸಿನ್ ಖಾನ್, ಕೆ.ರಮೇಶ್, ಸಿದ್ದಯ್ಯ ಮತ್ತಿತರರಿದ್ದರು.

ವಿದ್ಯಾರ್ಥಿನಿ ನೇಹಾ ಹತ್ಯೆ ಖಂಡಿಸಿ ಎಬಿವಿಪಿ ಪ್ರತಿಭಟನೆ

ಮೈಸೂರು, ಏ.20(ಜಿಎ)–ವಿದ್ಯಾರ್ಥಿನಿ ನೇಹಾ ಹಿರೇಮಠ್ ಹತ್ಯೆ ಖಂಡಿಸಿ, ಕೊಲೆ ಆರೋಪಿಗೆ ಗಲ್ಲು ಶಿಕ್ಷೆ ವಿಧಿಸಬೇಕೆಂದು ಒತ್ತಾಯಿಸಿ ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್(ಎಬಿವಿಪಿ) ವತಿಯಿಂದ ಮೈಸೂರಿನ ಗನ್‌ಹೌಸ್ ವೃತ್ತದ ಬಳಿ ಶನಿವಾರ ಪ್ರತಿಭಟನೆ ನಡೆಸಲಾಯಿತು.

ಹುಬ್ಬಳ್ಳಿಯ ಬಿವಿಬಿ ಕಾಲೇಜು ಕ್ಯಾಂಪಸ್‌ನಲ್ಲಿ ನೇಹಾ ಹಿರೇಮಠ್ ಅವರನ್ನು ಫಯಾಜ್ ಎಂಬಾತ ಅಮಾನುಷವಾಗಿ ಕೊಲೆ ಮಾಡಿದ್ದಾನೆ. ಜ್ಞಾನದ ದೇಗುಲವಾದ ಕಾಲೇಜಿನಲ್ಲಿ ಹಾಡಹಗಲೇ ಭೀಕರ ಹತ್ಯೆ ಮಾಡಿರುವ ಘಟನೆ ವಿದ್ಯಾರ್ಥಿ ಸಮುದಾಯದಲ್ಲಿ ಭಯದ ವಾತಾವರಣ ಮೂಡಿಸಿದಂತಾಗಿದೆ. ಫಯಾಜ್ ಪ್ರೀತಿಯನ್ನು ವಿದ್ಯಾರ್ಥಿನಿ ನಿರಾಕರಿಸಿದಕ್ಕಾಗಿ ಆಕೆಯ ಹತ್ಯೆ ಮಾಡಿರುವುದು ಖಂಡನೀಯ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಯಾವುದೇ ಭಯವೂ ಇಲ್ಲದೆ ರಾಜಾರೋಷವಾಗಿ ಕಾಲೇಜಿನ ಒಳಗೆ ಬಂದು ವಿದ್ಯಾರ್ಥಿನಿಯನ್ನು ಕೊಲೆ ಮಾಡಿರುವುದರಿಂದ, ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಹೇಗಿದೆ ಎಂಬುದು ಜನರು ತಿಳಿದುಕೊಳ್ಳಬೇಕಿದೆ. ಪೊಲೀಸರು ಕೂಡಲೇ ಸೂಕ್ತ ತನಿಖೆಯನ್ನು ಕೈಗೊಂಡು, ಅಪರಾಧಿಗೆ ಕಠಿಣ ಶಿಕ್ಷೆ ಆಗುವಂತೆ ಮಾಡಿ ವಿದ್ಯಾರ್ಥಿನಿಯ ಕುಟುಂಬಕ್ಕೆ ನ್ಯಾಯ ಒದಗಿಸಬೇಕಾಗಿದೆ. ಹಾಗೇ ರಾಜ್ಯಾದ್ಯಂತ ಪೊಲೀಸರು ಶಾಲಾ–ಕಾಲೇಜುಗಳ ಬಳಿ ಮಫ್ತಿಯಲ್ಲಿ ಕಾರ್ಯನಿರ್ವಹಿಸಿ ಸಂಭಾವ್ಯ ಘಟನೆಗಳನ್ನು ತಡೆಯಲು ಪ್ರಯತ್ನಿಸಬೇಕು ಎಂದು ಒತ್ತಾಯಿಸಿದರು.



ಮೈಸೂರಿನ ಗನ್‌ಹೌಸ್ ವೃತ್ತದ ಬಳಿ ನೇಹಾ ಹಿರೇಮಠ್ ಹತ್ಯೆ ಖಂಡಿಸಿ, ಎಬಿವಿಪಿಯಿಂದ ಪ್ರತಿಭಟನೆ ನಡೆಸಲಾಯಿತು.

ರಾಜ್ಯ ಸರ್ಕಾರ ದಿನದಿಂದ ದಿನಕ್ಕೆ ಹದಗೆಡುತ್ತಿರುವ ಕಾನೂನು ಸುವ್ಯವಸ್ಥೆ ಬಗ್ಗೆ ಗಂಭೀರವಾಗಿ ಚಿಂತನೆ ನಡೆಸಿ ಕಾರ್ಯ ಪ್ರವೃತ್ತರಾಗಬೇಕು. ಇಂತಹ ಆರೋಪಿಗಳಿಗೆ ಕಠಿಣ ಶಿಕ್ಷೆ ನೀಡಬೇಕು, ಕಾನೂನಿನ ಭಯ ಇಲ್ಲದಾಗ ಮಾತ್ರ ಇಂತಹ ಘಟನೆಗಳು ನಡೆಯಲು ಸಾಧ್ಯ. ಕಾಲೇಜು ಕ್ಯಾಂಪಸ್‌ಗಳು ಸುರಕ್ಷತೆಯ ಕೇಂದ್ರಗಳಾಗಬೇಕು. ಪೊಲೀಸ್ ಇಲಾಖೆ ಗಮನ ಹರಿಸಬೇಕು ಹಾಗೂ ಉನ್ನತ ಮಟ್ಟದ ತನಿಖೆ ಮಾಡಬೇಕು. ಅಗತ್ಯ ಎಂದು ಕಂಡರೆ ಪ್ರಕರಣದ ತನಿಖೆಯನ್ನು ಸಿಬಿಐಗೆ ಹಸ್ತಾಂತರಿಸಬೇಕೆಂದು ಆಗ್ರಹಿಸಿದರು. ಪ್ರತಿಭಟನೆಯಲ್ಲಿ ಎಬಿವಿಪಿಯ ವಿಭಾಗ ಸಂಚಾಲಕ ಎಂ.ಶಿವು, ಜಿಲ್ಲಾ ಸಂಚಾಲಕ ಪ್ರಜ್ವಲ್, ನಗರ ಕಾರ್ಯದರ್ಶಿ ಐಶ್ವರ್ಯ, ಕಾರ್ಯಕರ್ತರಾದ ತ್ರಿವೇಣಿ, ಯಶಸ್ವಿನಿ, ದೀಪಿಕಾ, ಪೂಜಾ ನಮೃತ, ಪ್ರೀತಮ್, ಆದರ್ಶ, ಅಭಿಜ್ಞಾ ಮತ್ತು ವಿವಿಧ ಕಾಲೇಜುಗಳ ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು.

ಸೋಮವಾರಪೇಟೆ ಬಳಿ ಬೆಂಕಿ ಬಿದ್ದು ನೂರಾರು ಎಕರೆ ಹುಲ್ಲುಗಾವಲು ಭಸ್ಮ

ಸೋಮವಾರಪೇಟೆ, ಏ.20– ಬೆಂಕಿ ಬಿದ್ದ ಪರಿಣಾಮ ನೂರಾರು ಎಕರೆ ಹುಲ್ಲುಗಾವಲು ಪ್ರದೇಶ ಸುಟ್ಟು ಭಸ್ಮವಾಗಿರುವ ಘಟನೆ ತಾಲೂಕಿನ ಹಾರೆಂಗಲ್ ಬೆಟ್ಟ ಶ್ರೇಣಿಯಲ್ಲಿ ಸಂಭವಿಸಿದೆ.

ಹಿಂದೆಂದೂ ಕಾಣದಂತ ಬಿಸಿಲಿನ ಕಾರಣದಿಂದಾಗಿ ಒಣಗಿ ನಿಂತಿದ್ದ ಹುಲ್ಲುಗಾವಲು ಪ್ರದೇಶಕ್ಕೆ ಬೆಂಕಿ ತಗುಲಿದೆ. ಇದರಿಂದ ಇಡೀ ಪ್ರದೇಶ ಧಗಧಗನೆ ಹೊತ್ತಿ ಉರಿಯಲಾರಂಭಿಸಿತ್ತು.

ಬೆಂಕಿಯ ಜ್ವಾಲೆಯಿಂದ ಇಡೀ ಪ್ರದೇಶದಲ್ಲಿ ದಟ್ಟವಾದ ಹೊಗೆ ಆವರಿಸಿ ಆತಂಕದ ವಾತಾವರಣ ಸೃಷ್ಟಿಯಾಗಿತ್ತು. ಜೊತೆಗೆ ಬೆಂಕಿಯ ಕೆನ್ನಾಲಿಗೆ ಕಂಡು ಸಾರ್ವಜನಿಕರು ಮತ್ತು ಸುತ್ತಮುತ್ತಲಿನ ಗ್ರಾಮಸ್ಥರು ಭಯಭೀತರಾಗಿ ಶಾಸಕರು ಮತ್ತು ಪೊಲೀಸರಿಗೆ ವಿಷಯ ಮುಟ್ಟಿಸಿದರು.

ವಿಷಯ ತಿಳಿದ ಕೂಡಲೇ ಅಗ್ನಿಶಾಮಕ ಸಿಬ್ಬಂದಿ ಸ್ಥಳಕ್ಕೆ ದಾವಿಸಿ ಬೆಂಕಿ ನಂದಿಸಲು ಹರಸಾಹಸ ಪಡುತ್ತಿದ್ದಾರೆ. ಸುದ್ದಿ ತಿಳಿದ ಶಾಸಕ ಡಾ. ಮಂತರ್ ಗೌಡ, ಅರಣ್ಯ ಇಲಾಖೆ ಮತ್ತು ಪೊಲೀಸ್ ಇಲಾಖೆಯ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ ಬೆಂಕಿಗೆ ಕಾರಣವೇನು ಎಂದು ಪತ್ತೆ ಹಚ್ಚುವ ಪ್ರಯತ್ನದಲ್ಲಿದ್ದಾರೆ.

ಮೇ 3, ಸಾಮೂಹಿಕ ಉಪನಯನ

ಮೈಸೂರು: ಮೈಸೂರಿನ ಆದರ್ಶ ಸೇವಾ ಸಂಘವು ಮೇ 10ರಂದು ನಡೆಯಬೇಕಿದ್ದ ಸಾಮೂಹಿಕ ಉಪನಯನವನ್ನು ಮೇ 3ರಂದು ಮೈಸೂರಿನ ಶ್ರೀರಾಂಪುರದ ಮಧುವನ ಬಡಾವಣೆಯ ಮಹಾವೀರ ಭವನದಲ್ಲಿ ಏರ್ಪಡಿಸಲಾಗಿದೆ.

ನೇಹಾಗೆ ಪ್ರಜ್ಞಾವಂತ ನಾಗರಿಕ ವೇದಿಕೆಯಿಂದ ಶಾಂತಿ ಮಂತ್ರ ಪಠಣ ಸಲ್ಲಿಸಿ ಸಂತಾಪ

ಮೈಸೂರು, ಏ. 20– ಹುಬ್ಬಳ್ಳಿಯ ಕಾಲೇಜು ಕ್ಯಾಂಪಸ್‌ನಲ್ಲಿ ವಿದ್ಯಾರ್ಥಿನಿ ನೇಹಾ ಹಿರೇಮಠರ ಬರ್ಬರ ಹತ್ಯೆಯ ಘಟನೆಯಿಂದ ರಾಜ್ಯದ ಜನತೆ ತಲೆ ತಗ್ಗಿಸುವಂತಾಗಿದೆ ಎಂದು ಮೈಸೂರು ನಗರ ಮತ್ತು ಜಿಲ್ಲಾ ಬ್ರಾಹ್ಮಣ ಸಂಘದ ಅಧ್ಯಕ್ಷ ಡಿ.ಟಿ.ಪ್ರಕಾಶ್ ಹೇಳಿದ್ದಾರೆ.



ನಗರದ ಲಕ್ಷ್ಮಿಪುರಂನ ವಿಷ್ಣುವರ್ಧನ್ ರಸ್ತೆಯಲ್ಲಿರುವ ಪ್ರಜ್ಞಾವಂತ ನಾಗರಿಕ ವೇದಿಕೆಯ ಕಚೇರಿಯಲ್ಲಿ ಕೊಲೆಯಾದ ವಿದ್ಯಾರ್ಥಿನಿ ನೇಹಾ ಹಿರೇಮಠ ಅವರ ಭಾವಚಿತ್ರ ಹಿಡಿದು ಶಾಂತಿ ಮಂತ್ರ ಪಠಣ ಮಾಡಿ, ಸಂತಾಪ ಸಲ್ಲಿಸಿ ಮಾತನಾಡಿದ ಡಿ.ಟಿ.ಪ್ರಕಾಶ್ ಅವರು, ಈಕೆಯ ತಂದೆ ತಾಯಿಗೆ ಭವಿಷ್ಯದ ಗತಿ ಏನು ಎಂದು ದಿಕ್ಕು ತೋಚದ ಪರಿಸ್ಥಿತಿ ನಿರ್ಮಾಣವಾಗಿದೆ. ವಿದ್ಯಾರ್ಥಿನಿಯನ್ನು ಅಮಾನುಷವಾಗಿ ಕೊಲೆ ಮಾಡಿದ ಫಯಾಜ್‌ಗೆ ಗಲ್ಲು ಶಿಕ್ಷೆ ನೀಡಬೇಕು. ದೇಶದಲ್ಲಿ ಇತ್ತೀಚೆಗೆ ಹೆಣ್ಣು ಮಕ್ಕಳ ಮೇಲೆ ಇಂತಹ ಹೇಯ ಕೃತ್ಯಗಳು ಹೆಚ್ಚುತ್ತಿರುವುದು ಖಂಡನೀಯ. ಇಂತಹ ಪ್ರಕರಣಗಳಿಗೆ ಸರ್ಕಾರ ಪ್ರತ್ಯೇಕ ಕಠಿಣ ಕಾನೂನು ರೂಪಿಸಬೇಕು. ಬರ್ಬರವಾಗಿ ಹತ್ಯೆಯಾಗಿರುವ ಆ ಹೆಣ್ಣು ಮಗುವಿಗೆ ನ್ಯಾಯ ಒದಗಿಸುವ ನಿಟ್ಟಿನಲ್ಲಿ ಸರ್ಕಾರ ಎಚ್ಚರಗೊಳ್ಳಬೇಕು ಎಂದು ತಿಳಿಸಿದರು.

ಬಿಜೆಪಿ ಮುಖಂಡ ರಾಕೇಶ್ ಭಟ್ ಮಾತನಾಡಿ, ಪ್ರೀತಿ ಹೆಸರಿನಲ್ಲಿ ಹದಿಹರೆಯದ ಹಿಂದೂ ಹೆಣ್ಣು ಮಕ್ಕಳನ್ನು ಬಲೆಗೆ ಬೀಳಿಸಿ ಅವರನ್ನು ಮತಾಂತರ ಮಾಡುವ ಲವ್ ಜಿಹಾದ್ ದೇಶದಾದ್ಯಂತ ನಡೆಯುತ್ತಿದೆ. ಇದರ ಬಗ್ಗೆ ಪೋಷಕರು ಜಾಗೃತರಾಗಬೇಕಿದೆ ಎಂದು ಮನವಿ ಮಾಡಿದರು. ಈ ವೇಳೆ ಜೀವಧಾರ ರಕ್ತನಿಧಿ ಕೇಂದ್ರದ ನಿರ್ದೇಶಕ ಗಿರೀಶ್, ಆರ್.ಪರಮೇಶ್, ಅಜಯ್ ಶಾಸ್ತ್ರಿ, ಅಪೂರ್ವ ಸುರೇಶ್, ಸಂದೇಶ್, ಬೈರತಿ ಲಿಂಗರಾಜು, ಶ್ರೀನಿವಾಸ್, ದುರ್ಗಾ ಪ್ರಸಾದ್ ಹಾಗೂ ಇತರರು ಸಂತಾಪ ಸಭೆಯಲ್ಲಿದ್ದರು.

ಸರ್ಕಾರಿ ಸಿಪಿಸಿ ಪಾಲಿಟೆಕ್ನಿಕ್ ಕಾಲೇಜಲ್ಲಿ ಮತ ಜಾಗೃತಿ ಅಭಿಯಾನ

ಮೈಸೂರು,ಏ.20(ಆರ್‌ಕೆ)– ಚುನಾವಣಾ ದಿನ ಸಮೀಪಿಸುತ್ತಿದ್ದಂತೆಯೇ ನಾಗರಿಕರಲ್ಲಿ ಜಿಲ್ಲಾ ಸ್ವೀಪ್ ಸಮಿತಿ ಜಿಲ್ಲಾಡಳಿತ ಹಾಗೂ ವಿವಿಧ ಸಂಘಟನೆಗಳು ಮತ ಚಲಾಯಿಸುವಂತೆ ಅರಿವು ಮೂಡಿಸುತ್ತಿವೆ.

ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಹಾಗೂ ಸರ್ಕಾರಿ ಸಿಪಿಸಿ ಪಾಲಿಟೆಕ್ನಿಕ್ ಕಾಲೇಜು ಸಹಯೋಗದಲ್ಲಿ ಕಾಲೇಜು ಆವರಣದಲ್ಲಿ ಮತ ಜಾಗೃತಿ ಜಾಥಾ ಹಾಗೂ ಬೀದಿ ನಾಟಕ ಪ್ರದರ್ಶಿಸುವ ಮೂಲಕ ಪ್ರತಿಯೊಬ್ಬರೂ ತಪ್ಪದೇ ಏಪ್ರಿಲ್ 26ರಂದು ನಡೆಯಲಿರುವ ಲೋಕಸಭಾ ಸಾರ್ವತ್ರಿಕ ಚುನಾವಣೆಯಲ್ಲಿ ತಮ್ಮ ಸಾಂವಿಧಾನಿಕ ಹಕ್ಕು ಚಲಾಯಿಸುವಂತೆ ಅರಿವು ಮೂಡಿಸಿದರು.


ಜಾನಪದ ಕಲಾವಿದರಿಂದ ನೃತ್ಯ, ಜನಪದ ಗೀತೆ ಹಾಗೂ ಬೀದಿ ನಾಟಕ ಪ್ರದರ್ಶಿಸಿ ಮತದಾರರ ಗಮನ ಸೆಳೆಯಲಾಯಿತು. ಈ ಸಂದರ್ಭ ಸಿಪಿಸಿ ಸರ್ಕಾರಿ ಪಾಲಿಟೆಕ್ನಿಕ್ ಕಾಲೇಜು ವಿದ್ಯಾರ್ಥಿಗಳನ್ನುದ್ದೇಶಿಸಿ ಮಾತನಾಡಿದ ಜಿಲ್ಲಾ ಕಸಾಪ ಅಧ್ಯಕ್ಷ ಮಡ್ಡಿಕೆರೆ ಗೋಪಾಲ್, 18 ವರ್ಷ ಮೇಲ್ಪಟ್ಟ ಎಲ್ಲಾ ಅರ್ಹ ಮತದಾರರು ಏ.26ರಂದು ನಡೆಯಲಿರುವ ಚುನಾವಣಾ ಹಬ್ಬದಲ್ಲಿ ಪಾಲ್ಗೊಂಡು ತಪ್ಪದೇ ಮತ ಚಲಾಯಿಸುವ ಮೂಲಕ ದೇಶದ ಪ್ರಜಾಪ್ರಭುತ್ವವನ್ನು ಸದೃಢಗೊಳಿಸಬೇಕೆಂದರು.

ಸರ್ಕಾರಿ ಸಿಪಿಸಿ ಪಾಲಿಟೆಕ್ನಿಕ್ ಪ್ರಾಂಶುಪಾಲ ಎಂ.ಪ್ರಕಾಶ್, ವಿಶೇಷಾಧಿಕಾರಿ ದೊಡ್ಡಯ್ಯ, ಎನ್‌ಎಸ್‌ಎಸ್ ಅಧಿಕಾರಿ ಎಸ್.ಎಂ.ಮಧುಸೂದನ್, ಕೆ.ಶ್ರೀನಿವಾಸ, ಜಿಲ್ಲಾ ಕಸಾಪ ಕಾರ್ಯದರ್ಶಿ ಮ.ನ. ಲತಾಮೋಹನ್, ಡಾ.ಚೇಲೂರು ಚಂದ್ರಶೇಖರ್, ಜಂಟಿ ಕಾರ್ಯದರ್ಶಿ ಕೆ.ಕೆಂಪಣ್ಣ, ಪದಾಧಿಕಾರಿಗಳು, ಕಾಲೇಜಿನ ವಿದ್ಯಾರ್ಥಿಗಳು, ಉಪನ್ಯಾಸಕರು ಮತ ಜಾಗೃತಿ ಅಭಿಯಾನ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು. ನಂತರ ಅಶೋಕ ರಸ್ತೆ ಮೂಲಕ ಸೆಂಟ್ ಫಿಲೋಮಿನಾ ಚರ್ಚ್‌ವರೆಗೆ ಜಾಥಾ ನಡೆಸಿದ ಅವರು, ಚರ್ಚ್ ಆವರಣದಲ್ಲೂ ಜಾನಪದ ಗೀತೆಗಳ ಮೂಲಕ ಮತ ಜಾಗೃತಿ ಮೂಡಿಸಿದರು.

ಮುಕ್ತ ವಿವಿಯಲ್ಲಿ ಸ್ಪರ್ಧಾತ್ಮಕ ಪರೀಕ್ಷೆಗೆ ತರಬೇತಿ


ಮೈಸೂರು, ಏ.20–ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರದ ವತಿಯಿಂದ ಕರ್ನಾಟಕ ಲೋಕಸೇವಾ ಆಯೋಗದವರು ನಡೆಸಲಿರುವ ಕೆಎಎಸ್ ಮತ್ತು ಇತರ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ 50 ದಿನಗಳ ತರಬೇತಿಯನ್ನು ಮೈಸೂರಿನ ಕೇಂದ್ರ ಕಚೇರಿಯಲ್ಲಿ ನಡೆಸಲು ನಿರ್ಧರಿಸಲಾಗಿದ್ದು, ಆಸಕ್ತರು ಏ.30ರೊಳಗೆ ಬೆಳಗ್ಗೆ 10.00 ಗಂಟೆಯಿಂದ ಸಂಜೆ 4.30 ಗಂಟೆಯವರೆಗೆ ತಮ್ಮ ಹೆಸರನ್ನು ನೋಂದಾಯಿಸಿಕೊಳ್ಳಲು 0821–2515944 ದೂರವಾಣಿ ಸಂಖ್ಯೆಯನ್ನು ಸಂಪರ್ಕಿಸಬಹುದೆಂದು ಕರಾಮುವಿ ಕುಲಸಚಿವ ಪ್ರೊ.ಕೆ.ಬಿ.ಪ್ರವೀಣ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಇಂದು ಭಗವಾನ್ ಮಹಾವೀರ ಜಯಂತಿ



ಮೈಸೂರು, ಏ.20– ಲೋಕಸಭೆ ಚುನಾವಣಾ ನೀತಿ ಸಂಹಿತೆ ಜಾರಿಯಲ್ಲಿರುವುದರಿಂದ ಏ.21ರಂದು ಭಗವಾನ್ ಮಹಾವೀರ ಜಯಂತಿಯನ್ನು ಕರ್ನಾಟಕ ಕಲಾಮಂದಿರದ ಆವರಣದಲ್ಲಿರುವ ಸುಚಿತ್ರ ಗ್ಯಾಲರಿಯಲ್ಲಿ ಬೆಳಗ್ಗೆ 10.30 ಗಂಟೆಗೆ ಸರಳ ಹಾಗೂ ಸಾಂಕೇತಿಕವಾಗಿ ಆಚರಣೆ ಮಾಡಲಾಗುವುದು ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಡಾ.ಎಂ.ಡಿ. ಸುದರ್ಶನ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

21.04.2024 ಭಾನುವಾರ, ಮಳೆ ನಕ್ಷತ್ರ: ಅಶ್ವಿನಿ 13.04.2024ರಿಂದ 26.04.2024
ಕ್ರೋಧಿ ನಾಮ ಸಂವತ್ಸರ, ಉತ್ತರಾಯಣ, ವಸಂತ ಋತು, ಚೈತ್ರ ಮಾಸ, ಶುಕ್ಲ ಪಕ್ಷ,
ತಿಥಿ: ತ್ರಯೋದಶಿ, ನಕ್ಷತ್ರ: ಉತ್ತರಾ, ರಾಹುಕಾಲ: ಸಂಜೆ 4.30ರಿಂದ 6ರವರೆಗೆ

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ:** ಶೀತದ ತಲೆನೋವು, ತಲೆಭಾರ, ಮೂಗು ಕಟ್ಟುವುದು, ಇತರೆ ಸಮಸ್ಯೆಗಳಿಗೆ ಚಿಕಿತ್ಸಾ ಶಿಬಿರ, ಸ್ಥಳ: ಆಸ್ಪತ್ರೆ ಆವರಣ, ಲಲಿತಾದ್ರಿಪುರ ರಸ್ತೆ, ಬೆಳಗ್ಗೆ 9 ರಿಂದ.

■ **ರಾಮ್‌ಸನ್ಸ್ ಬೊಂಬೆ ಮನೆ:** ದಸರೆ ಬೊಂಬೆ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್ ಮುಖ್ಯ ರಸ್ತೆ, ಬೆಳಗ್ಗೆ 10 ರಿಂದ ಸಂಜೆ 7ರವರೆಗೆ

■ **ಕಾದಂಬರಿ ಏಜೆನ್ಸೀಸ್ ಮತ್ತು ವಿಕಲ ವಿಕಾಸ ಟ್ರಸ್ಟ್ :** ಮಕ್ಕಳ ಪುಸ್ತಕಗಳ ಪ್ರದರ್ಶನ ಮತ್ತು ಮಾರಾಟ, ಸ್ಥಳ: ನಂ.45, ಕೆ.ಆರ್. ಸರ್ಕಲ್, ದೇವರಾಜ ಅರಸು ರಸ್ತೆ, ಬೆಳಗ್ಗೆ 10 ರಿಂದ.

■ **ಉಷಾ ಸಾಹಿತ್ಯ ಮಾಲೆ, ಸಂವಹನ : ಪ್ರಕಾಶಕರು:** ಡಾ.ಎಚ್.ಎಸ್.ರುದ್ರೇಶ್ ಅವರ ಮೂರು ಪುಸ್ತಕಗಳ ಲೋಕಾರ್ಪಣೆ ಸಮಾರಂಭ, ಪುಸ್ತಕಗಳ ಲೋಕಾರ್ಪಣೆ: ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾನಿಲಯ ವಿಶ್ರಾಂತ ಕುಲಪತಿ ಡಾ. ಪದ್ಮಾಶೇಖರ್, ಅಧ್ಯಕ್ಷತೆ : ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ ನಿರ್ದೇಶಕರಾದ ಡಾ.ವಿಜಯಕುಮಾರಿ ಎಸ್.ಕರಿಕಲ್, ಕೃತಿಗಳನ್ನು ಕುರಿತು ಮಾತನಾಡುವವರು: ಜೆಎಸ್‌ಎಸ್ ಮಹಾವಿದ್ಯಾಪೀಠ ಪ್ರಕಟಣಾ ವಿಭಾಗದ ನಿರ್ದೇಶಕ ಪ್ರೊ.ಮೊರಬದ ಮಲ್ಲಿಕಾರ್ಜುನ, ಸಹ ಪ್ರಾಧ್ಯಾಪಕ ಪ್ರೊ.ಮೈಸೂರು ಕೃಷ್ಣಮೂರ್ತಿ, ಉಪಸ್ಥಿತರು: ಕೃತಿಗಳ ಲೇಖಕ ಡಾ.ಎಚ್.ಎಸ್.ರುದ್ರೇಶ್, ಪ್ರಕಾಶಕ ಡಿ.ಎನ್.ಲೋಕಪ್ಪ, ಸ್ಥಳ: ರೋಟರಿ ಪಶ್ಚಿಮ, ಕುವೆಂಪುನಗರ, ಕಾಮಾಕ್ಷಿ ಆಸ್ಪತ್ರೆ ರಸ್ತೆ, ಬೆಳಗ್ಗೆ 10.30ಕ್ಕೆ.

■ **ರಂಗಾಯಣ :** ರಂಗಾಯಣದ ಭಾರತೀಯ ರಂಗ ಶಿಕ್ಷಣ ಕೇಂದ್ರದ ವಿದ್ಯಾರ್ಥಿಗಳಿಂದ ವೃಕ್ಷರಾಜ ನಾಟಕ ಪ್ರದರ್ಶನ, ಸಾಹಿತ್ಯ ರಚನೆ : ಎಸ್. ರಾಮನಾಥ್, ನಿರ್ದೇಶನ : ಹೈಸ್ನಾಂ ತೋಂಬಾ, ಸ್ಥಳ: ಭೂಮಿಗೀತ ರಂಗಮಂದಿರ, ಮಧ್ಯಾಹ್ನ 3ಕ್ಕೆ

■ **ನಟನ ರಂಗಶಾಲೆ :** ರಂಗಭೂಮಿ ಡಿಪ್ಲೊಮಾ ವಿದ್ಯಾರ್ಥಿಗಳಿಂದ ಜ್ಞಾನಪೀಠ ಪ್ರಶಸ್ತಿ ಪುರಸ್ಕೃತರಾದ ಡಾ. ಚಂದ್ರಶೇಖರ ಕಂಬಾರ ಅವರ 'ಮಹಾಮಾಯಿ' ನಾಟಕ ಪ್ರದರ್ಶನ, ನಿರ್ದೇಶನ : ಮೇಘ ಸಮೀರ, ಸ್ಥಳ: ನಟನ ರಂಗಶಾಲೆ, ರಾಮಕೃಷ್ಣನಗರ, ಸಂಜೆ 6.30ಕ್ಕೆ.

■ **ಶ್ರೀ ಮಹಾವೀರ ಸೇವಾ ಸಂಸ್ಥಾನ್ :** 1008 ಭಗವಾನ್ ಶ್ರೀ ಮಹಾವೀರ ತೀರ್ಥಂಕರರ ಜಯಂತಿ ಮಹೋತ್ಸವ, ಶ್ರೀ ಮಹಾವೀರ ಅಹಿಂಸಾ ಪ್ರಶಸ್ತಿ ಪ್ರದಾನ ಸಮಾರಂಭ, ಸಾನ್ನಿಧ್ಯ : ಶ್ರೀ ಸಿದ್ಧಾಂತಕೀರ್ತಿ ಭಟ್ಟಾರಕ ಸ್ವಾಮೀಜಿ, ಪ್ರಶಸ್ತಿ ಪುರಸ್ಕೃತರು : ಆಟಿಸಂ ತಜ್ಞರಾದ ಶ್ರೀಮತಿ ಹೇಮಾಮಲಿನಿ ಜಯರಾಂ, ಅಧ್ಯಕ್ಷತೆ : ಶ್ರೀ ದಿಗಂಬರ ಜೈನ ಸಮಾಜದ ಅಧ್ಯಕ್ಷ ಎಂ.ಆರ್. ಸುನೀಲ್ ಕುಮಾರ್, ಆಹ್ವಾನಿತರು : ಉದ್ಯಮಿ ಎಂ.ಎ. ಸುಧೀರ್ ಕುಮಾರ್, ಎಂ.ಎಲ್. ಜೈನ್ ಬೋರ್ಡಿಂಗ್ ಹೋಂನ ಶ್ರೀಮತಿ ಜಯರತ್ನಮ್ಮ, ಪದ್ಮಶ್ರೀ ಜೈನ ಮಹಿಳಾ ಸಮಾಜದ ಅಧ್ಯಕ್ಷೆ ಶ್ರೀಮತಿ ಲತಾ ಸುದರ್ಶನ್, ಸ್ಥಳ: ಎಂ.ಎಲ್. ವರ್ಧಮಾನಯ್ಯ ಸ್ಮಾರಕ ಭವನ, ಚಂದ್ರಗುಪ್ತ ರಸ್ತೆ, ಸಂಜೆ 7ಕ್ಕೆ.

■ **ಶ್ರೀ ರಾಮಮಂದಿರ :** ಶ್ರೀ ರಾಮೋತ್ಸವ, ಬೆಳಗ್ಗೆ 8ಕ್ಕೆ ಶ್ರೀ ಕಾಶಿಯಾತ್ರಾ ಪೂರ್ವಕ ಸೀತಾರಾಮರ ಕಲ್ಯಾಣ, ಸಂಜೆ ಹೆಚ್.ಪಿ. ಕಿರಣ್ ಅವರಿಂದ ಕರ್ನಾಟಕ ಶಾಸ್ತ್ರೀಯ ಸಂಗೀತ ಮತ್ತು ಭಕ್ತಿ ಗೀತೆಗಳು, ರಾತ್ರಿ 9ಕ್ಕೆ ಉಯ್ಯಾಲೋತ್ಸವ, ಶಯನೋತ್ಸವ, ಸ್ಥಳ: ಶ್ರೀರಾಮಮಂದಿರ, ಜಯನಗರ.


■ **ಶ್ರೀರಾಮ ದೇವಸ್ಥಾನ :** ಶ್ರೀರಾಮ ನವಮಿ ಮಹೋತ್ಸವ, ಶ್ರೀರಾಮ ತಾರಕ ಹೋಮ ಹಾಗೂ ಶ್ರೀರಾಮ ಪಟ್ಟಾಭಿಷೇಕ, ಸ್ಥಳ: ಶ್ರೀರಾಮ ದೇವಸ್ಥಾನ, ಅರಮನೆ ಕೋಟೆ, ಉತ್ತರ ಬಾಗಿಲು.

■ **ಶ್ರೀ ರಾಮಕೃಷ್ಣ ಆಶ್ರಮ :** ಸ್ವಾಮಿ ಜ್ಞಾನಯೋಗಾನಂದ ಅವರಿಂದ ಶ್ರೀ ರಾಮಕೃಷ್ಣ ವಚನವೇದ ಕುರಿತು ಉಪನ್ಯಾಸ, ಸ್ಥಳ: ಆಶ್ರಮದ ಸಭಾಂಗಣ, ಯಾದವಗಿರಿ, ಸಂಜೆ 6ಕ್ಕೆ.

■ **ಶ್ರೀ ರಾಮಾಭ್ಯುದಯ ಸಭಾ ಪಬ್ಲಿಕ್ ಚಾರಿಟಬಲ್ ಟ್ರಸ್ಟ್ :** ಶ್ರೀ ರಾಮನವಮಿ ಪ್ರಯುಕ್ತ ಸಂಗೀತೋತ್ಸವ, ವಿದುಷಿ ಇಂದು ನಾಗರಾಜ್ ಮತ್ತು ವಿದುಷಿ ಲಕ್ಷ್ಮೀ ನಾಗರಾಜ್ ಅವರಿಂದ ಶಾಸ್ತ್ರೀಯ ಸಂಗೀತ, ವಿದ್ವಾನ್ ಜನಾರ್ದನ ಶ್ರೀನಾಥ್–ಪಿಟೀಲು, ವಿದುಷಿ ಅದಮ್ಯ–ಮೃದಂಗ, ವಿದ್ವಾನ್ ಶಮಿತ್ ಗೌಡ–ಘಟಂ, ಸ್ಥಳ: ಶ್ರೀಮತಿ ಆಲಮ್ಮನವರ ಛತ್ರ, ಕುಂಚಿಟಿಗರ ಸಂಘ, ಶ್ರೀರಾಮಪೇಟೆ, ಸಂಜೆ 6.30 ರಿಂದ.

■ **ಶ್ರೀ ರಾಮಸೇವಾ ಮಂಡಲಿ:** 71ನೇ ವರ್ಷದ ಶ್ರೀರಾಮೋತ್ಸವ, ವಿದ್ವಾನ್ ವೇದಜ್ಞ ನರಸಿಂಹ, ಸಿಂಗಪೂರ್ ಅವರಿಂದ ಪಿಟೀಲು ವಾದನ, ವಿದ್ವಾನ್ ರಾಧೇಶ್ ಅನಂತಾಚಾರ್–ಮೃದಂಗ, ವಿದ್ವಾನ್ ತುಮಕೂರು ವಿದ್ಯಾಶಂಕರ್–ಘಟಂ, ವಿದ್ವಾನ್ ಸುಮುದೂರ್ ಆನೂರು–ಖಂಜಿರ, ಸ್ಥಳ: ಶ್ರೀರಾಮ ಸೇವಾ ಮಂಡಲಿ, ವಿದ್ಯಾರಣ್ಯಪುರಂ, ಸಂಜೆ 6.30ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ – ಹೆಚ್. ಡಿ. ಜಯಪದ್ಮ ಕುಮಾರ್, 6.15 ಗೀತಾರಾಧನ, 6.35 ಮತ್ತು ಸಂಜೆ 6.10ಕ್ಕೆ ಒಡಹುಟ್ಟಿನ ನುಡಿಗಳು–ಕನ್ನಡದ ಒಡನಾಡಿ ಭಾಷೆಗಳ ಕುರಿತ ಬಾನುಲಿ ಸರಣಿ, ಲೇಖನ ಹಾಗೂ ಪ್ರಸ್ತುತಿ– ಡಾ. ತೀತೀರ ರೇಖಾ ವಸಂತ, 6.40 ಪದ ಸಂಸ್ಕೃತಿ, ಪ್ರಸ್ತುತಿ– ಪರಮೇಶ್ವರ ಎ. ಭಟ್, 6.50 ರೈತರಿಗೆ ಸಲಹೆ, 7.15 ಭಾವಗೀತೆಗಳು, 9.40 ನಮ್ಮ ಆರೋಗ್ಯ ಕಾರ್ಯಕ್ರಮ: ಹಿರಿಯ ನಾಗರಿಕರು ಮತ್ತು ಯುವಜನರಲ್ಲಿ ಕಂಡುಬರುವ ಶ್ರವಣ ಸಮಸ್ಯೆಗಳು ಮತ್ತು ಪರಿಹಾರ ಕುರಿತು ಮೈಸೂರಿನ ಅಖಿಲ ಭಾರತ ವಾಕ್–ಶ್ರವಣ ಸಂಸ್ಥೆಯ ಶ್ರವಣ ವಿಜ್ಞಾನ ವಿಭಾಗದ ಪ್ರೊಫೆಸರ್ ಮತ್ತು ಸಂಶೋಧನಾ ವಿಭಾಗದ ಡೀನ್ ಡಾ. ಮಂಜುಳಾ ಪಿ. ಅವರೊಂದಿಗೆ ಮಾತುಕತೆ. ಇವರೊಂದಿಗೆ ಭಾಗವಹಿಸುತ್ತಾರೆ – ಬೇದ್ರೆ ಮಂಜುನಾಥ್, 10.00 ಕೇಳಿ ಗಿಳಿಗಳೇ –ರೋಟರಿ ಶಾಲೆ, ವಾಜಮಂಗಲದ ಮಕ್ಕಳಿಂದ ಕಾರ್ಯಕ್ರಮ ವೈವಿಧ್ಯ, 10.30 ಮಕ್ಕಳ ಮಂಟಪ, ನಂದಗೋಕುಲ, ಪ್ರಸ್ತುತಿ–ಕೆ. ಬಿ. ಮೀನಾ, 11.00 ಮಿಶ್ರ ಮಾಧುರ್ಯ

ಮಧ್ಯಾಹ್ನ: 12.30 ದೇವರನಾಮ, 12.45 ಜನಪದ ಸಂಗೀತ – ರತ್ನಮ್ಮ ಮತ್ತು ಸಂಗಡಿಗರಿಂದ ಭೈರವನ ಹಾಡು, 1.00 ಮತಹಾಕೋಣ ಬನ್ನಿ–ಮತದಾನ ಜಾಗೃತಿ ಸರಣಿ : ಚಾಮರಾಜನಗರ ಜಿಲ್ಲಾ ಪಂಚಾಯತ್, ಉಪ ಕಾರ್ಯದರ್ಶಿಗಳು ಹಾಗೂ SVEEP ನೋಡಲ್ ಅಧಿಕಾರಿ ಪಿ. ಲಕ್ಷ್ಮಿ ಅವರೊಂದಿಗೆ ಸಂದರ್ಶನ. ಸಂದರ್ಶಕರು–ಡಾ. ಮೈಸೂರು ಉಮೇಶ್, 1.20 ಭಾವಗೀತೆ–ನಿಖಿಲ ಬಿ.ಎ., 2.35 ಕನ್ನಡ ಚಲನಚಿತ್ರ ಧ್ವನಿ ವಾಹಿನಿ 'ಆರಾಧನೆ', 3.40 ಯಕ್ಷಗಾನ ತಾಳ ಮದ್ದಲೆ, ಪ್ರಸಂಗ– ಶಲ್ಯಾವಸಾನ, ಪ್ರಸ್ತುತಿ– ವೇಣೂರಿನ ಶ್ರೀ ಮಹಾಲಿಂಗೇಶ್ವರ ಯಕ್ಷಗಾನ ಸಂಘದ ಕಲಾವಿದರು, 6.50 ಕೃಷಿರಂಗ– ತೋರಣ ಹೂರಣ, ಪ್ರಸ್ತುತಿ– ಎನ್. ಕೇಶವಮೂರ್ತಿ, ಆರ್. ಲೋಕೇಶ್ವರಿ, ಡಾ. ಮೈಸೂರು ಉಮೇಶ್–ಪರಾಗ–ಬೇಸಾಯದ ಬದುಕು ಸರಾಗ, ಕೃಷಿ ದರ್ಪಣ, 8.00 'ಹಾದಿಯಲ್ಲಿ ಕಂಡ ಮುಖ' –ಬಾನುಲಿ ಸರಣಿ, ಆನಂದೂರು ಕೊಪ್ಪಲಿನ ನಾಟಕದ ಮೇಷ್ಟ್ರು ವೆಂಕಟಸ್ವಾಮಪ್ಪ ಅವರೊಂದಿಗೆ ಸಂವಾದ, ಪ್ರಸ್ತುತಿ–ಅಬ್ದುಲ್ ರಶೀದ್, 10.00 ರವಿವಾಸರೀಯ ಅಖಿಲ ಭಾರತೀಯ ಸಂಗೀತ ಸಭಾ, ವಿದುಷಿ ಸುಮಿತ್ರ ಗುಹ – ಹಾಡುಗಾರಿಕೆ

ಮೈಸೂರು ಮಿತ್ರ
ಭಾನುವಾರ 21 ಏಪ್ರಿಲ್ 2024

ಮೈಸೂರಲ್ಲಿ ಮಹಿಳಾ ಸಬಲೀಕರಣ ಜಾಗೃತಿ ಕಾರ್ಯಕ್ರಮಕ್ಕೆ ತ್ರಿಶಿಕಾ ಕುಮಾರಿ ಚಾಲನೆ



ಮೈಸೂರಿನ ಶಾರದಾ ವಿಲಾಸ ಫಾರ್ಮಸಿ ಕಾಲೇಜು ಬಳಿಯ ಶ್ರೀರಾಮ ಸೇವಾ ಅರಸು ಮಂಡಳಿ ಸಭಾಂಗಣದಲ್ಲಿ ಏರ್ಪಡಿಸಿದ್ದ ಮಹಿಳಾ ಸಬಲೀಕರಣ ಮತ್ತು ಉದ್ಯಮಶೀಲತಾ ಜಾಗೃತಿ ಕಾರ್ಯಕ್ರಮದಲ್ಲಿ ಮೈಸೂರು-ಕೊಡಗು ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಪತ್ನಿ ತ್ರಿಶಿಕಾ ಕುಮಾರಿ ಒಡೆಯರ್ ಪಾಲ್ಗೊಂಡರು.

ಮೈಸೂರು, ಏ. 20(ಆರ್‌ಕೆ)-ಮಹಿಳಾ ಸಬಲೀಕರಣ ಮತ್ತು ವಾಣಿಜ್ಯೋದ್ಯಮದ ಅಭಿವೃದ್ಧಿಗಾಗಿ ಪೂರಕ ವಾತಾವರಣ ನಿರ್ಮಿಸುವ ಅಗತ್ಯವಿದೆ ಎಂದು ರಾಜ ವಂಶಸ್ಥ ಹಾಗೂ ಮೈಸೂರು-ಕೊಡಗು ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಪತ್ನಿ ತ್ರಿಶಿಕಾ ಕುಮಾರಿ ಒಡೆಯರ್ ಇಂದಿಲ್ಲಿ ಅಭಿಪ್ರಾಯಪಟ್ಟಿದ್ದಾರೆ. ಮೈಸೂರಿನ ಶಾರದಾ ವಿಲಾಸ ಫಾರ್ಮಸಿ ಕಾಲೇಜು ಬಳಿಯ ಶ್ರೀರಾಮ ಸೇವಾ ಅರಸು ಮಂಡಳಿ ಸಭಾಂಗಣದಲ್ಲಿ ಏರ್ಪಡಿಸಿದ್ದ ಮಹಿಳಾ ಸಬಲೀಕರಣ ಮತ್ತು ಉದ್ಯಮಶೀಲತಾ ಜಾಗೃತಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡುತ್ತಿದ್ದ ಅವರು, ಕರ್ನಾಟಕ ರಾಜ್ಯದಾದ್ಯಂತ ಮಹಿಳೆಯರ ಆತ್ಮವಿಶ್ವಾಸ ಮತ್ತು ಅವಕಾಶಗಳನ್ನು ವೃದ್ಧಿಸುವಲ್ಲಿ ಇಂತಹ ಕಾರ್ಯಕ್ರಮಗಳು ಪ್ರಮುಖ ಪಾತ್ರ ವಹಿಸುತ್ತವೆ ಎಂದರು. ನಾನು ರಾಜ್ಯದ ಮಹಿಳೆಯರ ಬೆಂಬಲಕ್ಕೆ ದೃಢವಾಗಿ ನಿಂತಿದ್ದೇವೆ. ಅವರಿಗೆ ಅಗತ್ಯ ಪರಿಕರ ಮತ್ತು ಜ್ಞಾನ ಒದಗಿಸುವ ಮೂಲಕ ಉಜ್ವಲ ಭವಿಷ್ಯ ರೂಪಿಸಬಹುದು. ಸರ್ಕಾರ ಮತ್ತು ಸಾರ್ವಜನಿಕರ ಸಹಯೋಗದಲ್ಲಿ ಎಲ್ಲರನ್ನೊಳಗೊಂಡ ಸದೃಢ ಸಮಾಜ ಸೃಷ್ಟಿಸಿ ಮಹಿಳೆಯರ ಸಮಗ್ರ ಅಭಿವೃದ್ಧಿಗೆ ಪ್ರಯತ್ನಿಸಬೇಕು ಎಂದು ಅವರು ತಿಳಿಸಿದರು. ಮುಖ್ಯ ಅತಿಥಿಗಳಾಗಿ ಪಾಲ್ಗೊಂಡಿದ್ದ ಸಿಎಸ್‌ಐಆರ್-ಎನ್‌ಐಎಸ್‌ಟಿ ಹಿರಿಯ ವಿಜ್ಞಾನಿ ವೆಂಕಟೇಶ್ ತುಳಸಿರಾಮನ್ ಮಾತನಾಡಿ, ಆಧುನಿಕ ಜಗತ್ತಿನ ಸಂಕೀರ್ಣತೆಗಳನ್ನು ಎದುರಿಸುತ್ತಿರುವ ಇಂದಿನ ದಿನಮಾನದಲ್ಲಿ ಮಹಿಳಾ ಸಬಲೀಕರಣಗೊಳಿಸಲು ವಿಜ್ಞಾನ ಮತ್ತು ತಂತ್ರಜ್ಞಾನದ ಪಾತ್ರವನ್ನು ಅಲ್ಲಗಳೆಯುವಂತಿಲ್ಲ. ಸಂಶೋಧನೆ ಮತ್ತು ಪರಿಹಾರ ಕಂಡುಹಿಡಿದು ಮಹಿಳೆಯರ ಸುಸ್ಥಿರ ಅಭಿವೃದ್ಧಿ ಕಾಣಬಹುದಾಗಿದೆ ಎಂದರು. ಸಣ್ಣ ಉದ್ಯಮಗಳ ಸಲಹೆಗಾರ ಅಭಿಷೇಕ್ ಮಾತನಾಡಿ, ಕೇವಲ ವ್ಯಾಪಾರ-ವಹಿವಾಟು ಸೃಷ್ಟಿಸುವುದಕ್ಕಾಗಿ ಮಹಿಳೆಯರ ಸಬಲೀಕರಣವಾಗಬೇಕೆಂಬ ಕಲ್ಪನೆ ಸರಿಯಲ್ಲ. ಬದಲಾಗಿ ಅದು ನಾವೀನ್ಯತೆ ಮತ್ತು ಬೆಳವಣಿಗೆಯ ಪರಿಸರ ವನ್ನು ಉತ್ತೇಜಿಸುವ ಸಲುವಾಗಿ ಮಹಿಳೆಯರು ಸಶಕ್ತರಾಗ ಬೇಕು. ಆ ಮೂಲಕ ಇಂದಿನ ಸ್ಪರ್ಧಾತ್ಮಕ ಮಾರುಕಟ್ಟೆಯಲ್ಲಿ ಯಶಸ್ವಿಯಾಗಲು ಉತ್ತೇಜನ ನೀಡಬೇಕು ಎಂದರು.

ಖ್ಯಾತ ಉದ್ಯಮಿ ಛಾಯಾ ನಂಜಪ್ಪ ಮಾತನಾಡಿ, ನಮ್ಮ ದೃಷ್ಟಿಕೋನವು ಎಲ್ಲರ ಒಳಗೊಳ್ಳುವಿಕೆ ಮತ್ತು ಸಬಲೀಕರಣದ ಮೇಲಿರಬೇಕು. ಸರ್ಕಾರದ ಯೋಜನೆಗಳ ಬಗ್ಗೆ ಮಾಹಿತಿ ನೀಡಿ ಮಹಿಳೆಯರು ಯಶಸ್ವಿ ಉದ್ಯಮಿಗಳಾಗಿ ಹೊರ ಹೊಮ್ಮಲು ದಾರಿ ತೋರಿಸಿಕೊಡಬೇಕೆಂದು ತಿಳಿಸಿದರು. ಫಾರ್ಮ್ ಸೆಕ್ಟರ್ ತಾಂತ್ರಿಕ ಅಧಿಕಾರಿ ಶುಭ ಪುಟ್ಟಸ್ವಾಮಿ, ಡಾ. ಇಂದುಕಲಾ ಅರಸ್, ಪ್ರಿಯದರ್ಶಿನಿ ಸೇರಿದಂತೆ ಹಲವು ಯಶಸ್ವಿ ಮಹಿಳಾ ಉದ್ಯಮಿಗಳು ಕಾರ್ಯ ಕ್ರಮದಲ್ಲಿ ಪಾಲ್ಗೊಂಡಿದ್ದರು.

ಹೊಸ ಕ್ರಿಮಿನಲ್ ಕಾನೂನುಗಳ ಬಗ್ಗೆ ಸಿಜೆಐ ಚಂದ್ರಚೂಡ್ ಶ್ಲಾಘನೆ

ನವದೆಹಲಿ, ಏ.20- ಹೊಸದಾಗಿ ಪರಿಚಯಿಸಲಾಗಿರುವ ಕ್ರಿಮಿನಲ್ ಕಾನೂನುಗಳು ಸಮಾಜದ ದಿಕ್ಕನ್ನು ಬದಲಿಸುತ್ತವೆ ಎಂದು ಸಿಜೆಐ ಚಂದ್ರಚೂಡ್ ಹೇಳಿದ್ದಾರೆ. ಕ್ರಿಮಿನಲ್ ಜಸ್ಟಿಸ್ ಸಿಸ್ಟಮ್ ಆಡಳಿತದಲ್ಲಿ ಭಾರತದ ಪ್ರಗತಿಪರ ಹಾದಿ ಕುರಿತು ನಡೆದ ಕಾರ್ಯಕ್ರಮದಲ್ಲಿ ಮಾತನಾಡಿದ ನ್ಯಾ.ಚಂದ್ರಚೂಡ್, ಭಾರತ ತನ್ನ ಕ್ರಿಮಿನಲ್ ನ್ಯಾಯಾಂಗ ವ್ಯವಸ್ಥೆಯಲ್ಲಿ ಮಹತ್ವದ ಬದಲಾವಣೆ ಕಾಣಲು ಸಿದ್ಧವಿದೆ, ನಾವು ಅದನ್ನು ಅಳವಡಿಸಿಕೊಂಡಲ್ಲಿ ಮಾತ್ರ ಅವುಗಳು ಯಶಸ್ವಿಯಾಗಲಿದೆ ಎಂದು ನ್ಯಾ.ಚಂದ್ರಚೂಡ್ ಅಭಿಪ್ರಾಯಪಟ್ಟಿದ್ದಾರೆ.

ನಕ್ಕರೆ ಅದೇ ಸ್ವರ್ಗ

ಪತ್ನಿ : (ಒಂದು ಸಣ್ಣ ಜಗಳದಲ್ಲಿ) "ನಿಮ್ಮನ್ನು ಮದುವೆಯಾದ ನಾನು ಮೂರ್ಖಳು"

ಪತಿ : "ಹೌದು ಡಿಯರ್ ನಿನ್ನನ್ನು ಪ್ರೀತಿಸುವ ಭರದಲ್ಲಿ ನಾನಿದನ್ನು ಗಮನಿಸಲೇ ಇಲ್ಲ!"

ಮೈಸೂರು ಮಿತ್ರ

ಭಾನುವಾರ, 21 ಏಪ್ರಿಲ್ 2024

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!

(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತವಾಹಿನಿ..........

ಈ ಜಗತ್ತಿನಲ್ಲಿ ಒಳಿತನ್ನು ಸಾಧಿಸಲು ಸಾಧ್ಯ ಎನ್ನುವ ನಂಬಿಕೆಯಿದ್ದರೆ, ಅದಕ್ಕೆ ಬೇಕಾದ ಎಲ್ಲಾ ಶಕ್ತಿಗಳೂ ತನ್ನಷ್ಟಕ್ಕೆ ತಾನೇ ಒದಗುತ್ತದೆ. –ಬೆಂಜಮಿನ್ ಫ್ರಾಂಕ್ಲಿನ್

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಬುದ್ಧಿವಂತನೇ ಬಲವಂತ

ನಿಮ್ಮ ಪತ್ರಗಳು

■ ಹೆಚ್‌ಡಿಕೆ ದಾರಿ ತಪ್ಪಿದ ಹೇಳಿಕೆ

ಮಾನ್ಯರೆ,

ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ತುಮಕೂರಿನ ತುರುವೆಕೆರೆಯಲ್ಲಿ ಅಭ್ಯರ್ಥಿ ವಿ.ಸೋಮಣ್ಣ ಪರ ಪ್ರಚಾರ ಕಾರ್ಯದಲ್ಲಿ ದಾರಿ ತಪ್ಪಿದ ಮಾತನ್ನಾಡಿ ತೆನೆ ಹೊತ್ತ ಮಹಿಳೆಯನ್ನೆ ದಿಕ್ಕು ತಪ್ಪಿಸಿದ್ದಾರೆ. ಈ ದಾರಿ ತಪ್ಪಿದ ಹೇಳಿಕೆಯಿಂದ ಮುಜುಗರಕ್ಕೀಡಾಗಿ ಪ್ರತಿಭಟನೆಯ ಜೊತೆಗೆ ಕೇಸನ್ನು ಎದುರಿಸಬೇಕಾಗಿದೆ. ಅತಿಯಾದ ಬುದ್ಧಿವಂತಿಕೆ ಮತ್ತು ಟೀಕೆಗಳು ಒಮ್ಮೊಮ್ಮೆ ದಾರಿ ತಪ್ಪುವ ಮಾತುಗಳನ್ನಾಡಿಸಿ ಬಿಡುತ್ತವೆ. ಇಲ್ಲಿ ಆಗಿರುವುದು ಹಾಗೇಯೇ. ಕಾಂಗ್ರೆಸ್ ಗ್ಯಾರಂಟಿ ಟೀಕಿಸುವ ಬರದಲ್ಲಿ ಅಪಾಯ ತಂದುಕೊಂಡಿದ್ದಾರೆ. ತಾಯಿಂದಿರು ಗ್ಯಾರಂಟಿ ಯೋಜನೆಯಿಂದ ದಾರಿ ತಪ್ಪಿದ್ದಾರೆ ಎಂದರೆ ಇದು ನಾನಾರ್ಥವನ್ನು ಕಲ್ಪಿಸುತ್ತದೆ. ಅದರ ಬದಲು ಕೃಷಿ ಇನ್ನಿತರ ಕೆಲಸಗಳಲ್ಲಿ ತೊಡಗಿಸಿಕೊಳ್ಳುವುದು ಕಡಿಮೆಯಾಗುತ್ತಿದೆ ಎನ್ನಬಹುದಿತ್ತು. ದಾರಿ ತಪ್ಪಿದ್ದಾರೆ ಎನ್ನುವ ಹೇಳಿಕೆ ಸರಿಯಲ್ಲ. ಇದರಿಂದ ಕುಮಾರಸ್ವಾಮಿ ಅಷ್ಟೇ ಅಲ್ಲ ಸೋಮಣ್ಣನವರ ಮೇಲೂ ಇದರ ಪ್ರಭಾವ ಬೀರದೆ ಇರದು. ಸದ್ಯ ಕಾಂಗ್ರೆಸ್‌ಗೆ ಕುಮಾರಸ್ವಾಮಿ ಹಣಿಯಲು ಹೊಸ ಅಸ್ತ್ರ ಸಿಕ್ಕಂತಾಗಿರುವುದು ಸುಳ್ಳಲ್ಲ. ಜನತೆ ಗ್ಯಾರಂಟಿ ಒಪ್ಪಿಕೊಂಡಿದ್ದಾರೆ ನೀವು ಗೆಲ್ಲಲು ಏನು ಮಾಡಬೇಕೆಂದು ಆಲೋಚಿಸಿ. ನಿರ್ಧರಿಸಿ. ಅದನ್ನು ಬಿಟ್ಟು ಮತದಾರರನ್ನೆ ಮೂದಲಿಸುವ ಚಟ ಒಳ್ಳೆಯ ಬೆಳವಣಿಗೆಯಲ್ಲ.

– ದಡದಹಳ್ಳಿ ರಮೇಶ್, ಚಂದಕವಾಡಿ ಹೋಬಳಿ, ಚಾಮರಾಜನಗರ ಜಿಲ್ಲೆ.

■ ಪ್ರಯಾಣಿಕರ ರಕ್ಷಣೆಗೆ ಶೆಡ್ ನಿರ್ಮಿಸಿ



ಮಾನ್ಯರೆ,

ಗುಂಡ್ಲುಪೇಟೆ ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣದ ಆವರಣದಲ್ಲಿ ಊಟಿ, ಕ್ಯಾಲಿಕಟ್, ಕಲ್ಪೆಟ್ಟ ಇನ್ನಿತರೇ ಅಂತಾರಾಜ್ಯಗಳಿಗೆ ಪ್ರತಿನಿತ್ಯ ತೆರಳುವ ಪ್ರಯಾಣಿಕರಿಗೆ ಕುಳಿತುಕೊಳ್ಳಲು, ನಿಂತುಕೊಳ್ಳಲು ಶೆಡ್ ವ್ಯವಸ್ಥೆ ಇಲ್ಲದೆ ಸುಡು ಬಿಸಿಲಿನಲ್ಲೇ ನಿಂತು ಬಸ್‌ಗಾಗಿ ಗಂಟೆಗಟ್ಟಲೆ ಕಾಯುವ ಪರಿಸ್ಥಿತಿ ಎದುರಾಗಿದೆ. ತಾಲೂಕು, ಇನ್ನಿತರೆ ಕಡೆಗಳಿಂದ ಬರುವ ಕೂಲಿ ಕಾರ್ಮಿಕರು, ಅಂತಾರಾಜ್ಯಗಳಿಗೆ ತೆರಳುವ ಪ್ರಯಾಣಿಕರು ತಮ್ಮ ಮಕ್ಕಳೊಂದಿಗೆ ಬಿಸಿಲು, ಮಳೆ ಎನ್ನದೇ ಗಂಟೆಗಟ್ಟಲೆ ನಿಂತು ಬಸ್‌ಗಾಗಿ ಕಾಯುತ್ತಿರುತ್ತಾರೆ. ಬೇಸಿಗೆಯಾದ್ದರಿಂದ ಸುಡು ಬಿಸಿಲು ಮತ್ತು ಮಳೆಯಲ್ಲೇ ಬಸವಳಿಯುವಂತಾಗಿದೆ. ತಾಪ ತಾಳಲಾರದೆ ಮಕ್ಕಳು, ವಯೋವೃದ್ಧರು ರಸ್ತೆ ಬದಿ ಇರುವ ಗಿಡ –ಮರಗಳ ಕೆಳಗೆ ಕುಳಿತು ವಿಶ್ರಾಂತಿ ಪಡೆಯುವಂತಾಗಿದೆ. ಮಳೆಗಾಲದಲ್ಲಿಯೂ ಇದೇ ಪರಿಸ್ಥಿತಿಯನ್ನು ಪ್ರಯಾಣಿಕರು ಎದುರಿಸುವಂತಾಗಿದೆ. ಆದ್ದರಿಂದ ಸಂಬಂಧಪಟ್ಟ ಅಧಿಕಾರಿಗಳು, ಜನಪ್ರತಿನಿಧಿಗಳು ಈ ಬಗ್ಗೆ ಕ್ರಮ ಕೈಗೊಂಡು ಪ್ರಯಾಣಿಕರ ಸುರಕ್ಷತೆಯ ಹಿತದೃಷ್ಟಿಯಿಂದ ಶೆಡ್ ನಿರ್ಮಿಸಿ ಅಥವಾ ಕೂಲಿಂಗ್ ಶೀಟ್ ಹಾಕಿಸಿ ಅಗತ್ಯ ವ್ಯವಸ್ಥೆ ಕಲ್ಪಿಸಬೇಕಿದೆ.

–ಕೆ.ಬಿ.ಶಿವರಾಜ್, ಕಂದೇಗಾಲ, ಗುಂಡ್ಲುಪೇಟೆ ತಾ.

■ ಮೈಸೂರಿನ ರಾಜಕಾರಣಕ್ಕೆ ಮತ್ತೆ ಮೆರುಗು ಬಂದಂತಾಗಿದೆ

ಮಾನ್ಯರೆ,

ಕರ್ನಾಟಕ ರಾಜಕಾರಣದಲ್ಲಿ ಮೈಸೂರು ಭಾಗದ ರಾಜಕೀಯವು ಬಹಳ ವಿಶೇಷವಾದದ್ದು. ಇಲ್ಲಿನ ಅನೇಕ ಹಿರಿಯ ನಾಯಕರುಗಳು ರಾಜ್ಯ ರಾಜಕಾರಣಕ್ಕೆ ತಮ್ಮದೆ ಆದ ಕೊಡುಗೆಗಳನ್ನು ನೀಡಿದ್ದಾರೆ. ಅವರುಗಳಲ್ಲಿ ಸಿದ್ದರಾಮಯ್ಯ ಹಾಗೂ ವಿ.ಶ್ರೀನಿವಾಸಪ್ರಸಾದ್ ಅವರು ಅಗ್ರ ಗಣ್ಯರಾಗಿದ್ದಾರೆ.

ಇತ್ತೀಚಿನ ರಾಜಕೀಯ ಬೆಳವಣಿಗೆಯಲ್ಲಿ ವಿ.ಶ್ರೀನಿವಾಸಪ್ರಸಾದ್ ಅವರ ರಾಜಕೀಯ ನಿವೃತ್ತಿಯ ಘೋಷಣೆಯ ನಂತರ, ಕೆಲವು ವರ್ಷಗಳಿಂದ ದೂರವಾಗಿದ್ದ ಸಿದ್ದರಾಮಯ್ಯ ಹಾಗೂ ಪ್ರಸಾದ್ ಅವರ ಭೇಟಿ ಮೈಸೂರು–ಚಾಮರಾಜನಗರ ರಾಜಕಾರಣಕ್ಕೆ ಮತ್ತೆ ಮೆರಗು ತಂದುಕೊಟ್ಟಿದೆ.

ಶೋಷಿತ ಸಮುದಾಯಗಳಿಂದ ಹೋರಾಟದ ಹಾದಿಯಲ್ಲಿ ಬೆಳೆದು ಬಂದ ಈ ಇಬ್ಬರು ರಾಜಕೀಯ ಮುತ್ಸದ್ಧಿ ನಾಯಕರ ಜೋಡಿ ಬಹಳ ಅಪರೂಪದಾಗಿತ್ತು. ಇವರಿಬ್ಬರು ಒಂದಾಗಿದ್ದ ಕಾಲ ಮೈಸೂರು ಭಾಗದ ರಾಜಕೀಯದಲ್ಲಿ ಸುವರ್ಣ ಯುಗದಂತಿತ್ತು. ಬದಲಾದ ರಾಜಕೀಯ ಸನ್ನಿವೇಶದಲ್ಲಿ ಈ ಇಬ್ಬರು ನಾಯಕರು ಪರಸ್ಪರ ದೂರ ಉಳಿಯುವಂತಾಗಿತ್ತು. ಆದರೆ ರಾಜಕೀಯದಲ್ಲಿ ಮೌಲ್ಯಗಳು ಕುಸಿಯುತ್ತಿರುವ ಈ ಸಮಯದಲ್ಲಿ ಈ ಇಬ್ಬರು ಜನನಾಯಕರುಗಳ ಮರು ಸಮಾಗಮ ಈ ಭಾಗದ ಜನರಲ್ಲಿ ಹೊಸ ಭರವಸೆಯನ್ನು ಮೂಡಿಸಿದೆ.

ಈ ಇಬ್ಬರ ಸ್ನೇಹ ಹೀಗೆಯೇ ಮುಂದುವರೆದು, ತಮ್ಮ ಮಾರ್ಗದರ್ಶನದಲ್ಲಿ ತಮ್ಮಂತಹ ಮೌಲ್ಯಾಧಾರಿತ ಹೊಸ ನಾಯಕರುಗಳನ್ನು ಮುಂದಿನ ಪೀಳಿಗೆಗೆ ಕೊಡುಗೆಯಾಗಿ ನೀಡಲೆಂದು ಮೈಸೂರು ಭಾಗದ ಜನತೆ ನಿರೀಕ್ಷೆಯಾಗಿದೆ.


–ಶಾಂತಾರಾಮ್ ಶೆಟ್ಟಿ, ವಿಜಯನಗರ, ಮೈಸೂರು

■ ಹುಬ್ಬಳ್ಳಿಯ ಘಟನೆ ಮೈಸೂರು ವಿವಿಗೆ ಎಚ್ಚರಿಕೆಯ ಘಂಟೆಯಾಗಲಿ

ಮಾನ್ಯರೆ,

ಇಡೀ ದೇಶದಲ್ಲೇ ಹೆಗ್ಗಳಿಕೆಯನ್ನು ಹೊಂದಿರುವ ಮೈಸೂರು ವಿಶ್ವವಿದ್ಯಾಲಯದ ಆವರಣಕ್ಕೆ ಎಲ್ಲಾ ಗೇಟ್‌ಗಳಲ್ಲೂ ಸೆಕ್ಯೂರಿಟಿ ಗಾರ್ಡ್‌ಗಳನ್ನು ನೇಮಿಸಿರುವುದು ನಿಜಕ್ಕೂ ಶ್ಲಾಘನೀಯ. ಆದರೆ ಒಂದು ಲೋಪ ಎದ್ದು ಕಾಣುತ್ತಿದೆ. ಭಾನುವಾರದಂತಹ ರಜಾ ದಿನಗಳಲ್ಲಿ ಈ ಸೆಕ್ಯೂರಿಟಿಯನ್ನು ಇನ್ನೂ ಬಿಗಿಯಾಗಿಸಬೇಕಿದೆ. ವಿಶೇಷವಾಗಿ ಜೇಸಿಇ ಇಂಜಿನಿಯರಿಂಗ್ ಕಾಲೇಜ್ ಎದುರಿಗಿರುವ ಗೇಟಿನಲ್ಲಿ ನಾನು ಗಮನಿಸಿದಂತೆ ಕೆಲವರು ರಾಜಾರೋಷವಾಗಿ ಒಳಗೆ ಹೋಗುತ್ತಿದ್ದರೆ, ಕೆಲವರಿಗೆ ಮಾತ್ರ ಪ್ರವೇಶವನ್ನು ನಿರ್ಬಂಧಿಸಲಾಗುತ್ತಿತ್ತು. ಅಲ್ಲಿರುವ ಸೆಕ್ಯೂರಿಟಿ ಗಾರ್ಡ್‌ಗೆ ನಾನು ಇದನ್ನು ಪ್ರಶ್ನಿಸಿದಾಗ ಅವರು ಇದಕ್ಕೆ ಬಂಡತನದ ಉತ್ತರ ನೀಡಿದರು. ನಿಮ್ಮ ವಿರುದ್ಧ ದೂರು ನೀಡುತ್ತೇನೆ ಎಂದಾಗ, ನೀವು ಯಾರಿಗೆ ಬೇಕಾದರೂ ದೂರನ್ನು ನೀಡಿ ನಾನು ನೋಡಿಕೊಳ್ಳುತ್ತೇನೆ ಎಂದು ಅಸಭ್ಯ ವರ್ತನೆ ತೋರಿದರು. ಅವರ ಮಾತಿನ ಅರ್ಥ ವಿಶ್ವವಿದ್ಯಾಲಯದ ಹಿರಿಯ ಅಧಿಕಾರಿಗಳು ಕೂಡ ಇದರಲ್ಲಿ ಶಾಮೀಲಾಗಿದ್ದಾರೆ ಎಂಬಂತಿತ್ತು. ಇತ್ತೀಚೆಗೆ ಹುಬ್ಬಳ್ಳಿಯಲ್ಲಿ ನಡೆದ ವಿದ್ಯಾರ್ಥಿನಿಯ ಕೊಲೆ ಪ್ರಕರಣವನ್ನು ಗಮನಿಸಿ ದರೆ ವಿಶೇಷವಾಗಿ ರಜಾ ದಿನಗಳಲ್ಲಿ ವಿದ್ಯಾರ್ಥಿಗಳ ಹಾಗೂ ವಿಶ್ವವಿದ್ಯಾಲಯಕ್ಕೆ ಸಂಬಂಧಪಟ್ಟ ವ್ಯಕ್ತಿಗಳ ಗುರುತಿನ ಚೀಟಿಯನ್ನು ಪರಿಶೀಲಿಸಿ ಪ್ರವೇಶ ನೀಡ ಬೇಕೆಂದು ವಿಶ್ವವಿದ್ಯಾಲಯದ ಹಿರಿಯ ಅಧಿಕಾರಿಗಳಲ್ಲಿ ವಿನಂತಿಸುತ್ತೇನೆ.

–ವೈಭವ ಬಾಡಕರ, ಜೀವಶಾಸ್ತ್ರ ಉಪನ್ಯಾಸಕರು, ಬೋಗಾದಿ, ಮೈಸೂರು



ಕೆಬಿಜಿಯವರ

ಭೂಮಂತ್ರ... ಭೂಮಂತ್ರ... ಭೂಮಂತ್ರ...

ನರೇಂದ್ರ ಮೋದಿ: ಭಾರತದ ನವೋದಯ ಪ್ರಧಾನಿ

ಲೋಕಸಭಾ ಚುನಾವಣೆ – 2024 ಈಗ ಶುರುವಾಗಿದೆ. ಮೊದಲನೇ ಹಂತದ ಮತದಾನವೂ ಮುಗಿದಿದೆ. ಇನ್ನೂ 6 ಹಂತ ಬಾಕಿ ಇವೆ. ಹಿಂತಿರುಗಿ ನೋಡಿದಾಗ, ಕಳೆದ 10 ವರ್ಷಗಳಲ್ಲಿ, ಇದು ಭಾರತಕ್ಕೆ ಸುವರ್ಣ ದಶಕವಾಗಿದೆ. ಇದರ ಶ್ರೇಯಸ್ಸು ಬಿಜೆಪಿ ನೇತೃತ್ವದ ಎನ್‌ಡಿಎ ಸರ್ಕಾರದ ಪ್ರಧಾನಿ ನರೇಂದ್ರ ದಾಮೋದರ ದಾಸ್ ಮೋದಿ ಅವರಿಗೆ ಸಲ್ಲಬೇಕು. ಮೋದಿಯವರ ಆಡಳಿತ ವೈಖರಿ, ದಿಟ್ಟ ನಿರ್ಧಾರಗಳು ಬಿಜೆಪಿಯ ವಿರೋಧ' ಪಕ್ಷದ' ಎಡ' ಉದಾರವಾದಿ ಸದಸ್ಯರ ಕೆರಳಿಸುತ್ತದೆ ಎಂದು ನನಗನಿಸುತ್ತಿದೆ.

ಸ್ವಾತಂತ್ರ್ಯ ನಂತರ 1947 ರಿಂದ 2014 ರವರೆಗೆ, ನರೇಂದ್ರ ಮೋದಿ ಅವರು ಪ್ರಧಾನಿಯಾಗಿ ಬರುವ ಮೊದಲು, ನಮ್ಮನ್ನು ಆಳಿದವರ ಕಾರ್ಯವೈಖರಿ ಬಿಂಬಿಸುವಂತಿರುವ, ಖಲೀಲ್ ಗಿಬ್ರಾನ್ ಹೇಳಿದ ನೀತಿ ಕಥೆಯೊಂದನ್ನು ನಾನಿಲ್ಲಿ ಪ್ರಸ್ತಾಪಿಸ ಬಯಸುತ್ತೇನೆ.

ಒಂದು ರಾತ್ರಿಯ ಸಮಯದಲ್ಲಿ, ಒಬ್ಬ ವ್ಯಕ್ತಿಯು ಕುದುರೆಯ ಮೇಲೆ ಸಮುದ್ರದ ಕಡೆಗೆ ಪ್ರಯಾಣಿಸುತ್ತಾ, ರಸ್ತೆ ಬದಿಯ ಒಂದು ತಂಗುದಾಣವನ್ನು ತಲುಪಿದನು. ಅಲ್ಲಿ, ಅವನು ಕೆಳಗಿಳಿದು ತನ್ನ ಕುದುರೆಯನ್ನು ಅಲ್ಲೇ ಪಕ್ಕದ ಮರಕ್ಕೆ ಕಟ್ಟಿ, ತಂಗುದಾಣವನ್ನು ಪ್ರವೇಶಿಸಿದನು. ಅವನಿಗೆ ಜನರ ಮೇಲೆ ವಿಶ್ವಾಸ. ರಾತ್ರಿ ವೇಳೆ ತಾನು ಹಾಗೂ ತನ್ನ ಕುದುರೆ ಸುರಕ್ಷಿತವಾಗಿರುತ್ತೇವೆ ಎಂಬ ನಂಬಿಕೆ ಇತ್ತು.

ಆದರೆ, ಮಧ್ಯರಾತ್ರಿ, ಎಲ್ಲರೂ ಮಲಗಿದ್ದಾಗ, ಒಬ್ಬ ಕಳ್ಳ ಬಂದು ಈ ಪ್ರಯಾಣಿಕನ ಕುದುರೆಯನ್ನು ಕದ್ದೊಯ್ದ.

ಬೆಳಿಗ್ಗೆ, ಆ ಮನುಷ್ಯ ಎಚ್ಚರಗೊಂಡು ತನ್ನ ಕುದುರೆ ಕಳ್ಳತನವಾಗಿರುವುದನ್ನು ತಿಳಿದು ತೀವ್ರ ದುಃಖಿತನಾದ. ಆಗ ಅವನ ಜೊತೆಯಲ್ಲಿ, ಅಲ್ಲಿಯೇ ತಂಗಿದ್ದವರು ಹೊರ ಬಂದು ಚಿಂತೆಗೀಡಾಗಿದ್ದ ಅವನ ಸುತ್ತಲೂ ನಿಂತು ಮಾತನಾಡ ತೊಡಗಿದರು.

ಮೊದಲನೆಯವನು ಹೇಳಿದನು, "ನಿಮ್ಮ ಕುದುರೆಯನ್ನು ಈ ತಂಗುದಾಣದ ಹೊರಗೆ ಕಟ್ಟುವುದು ಎಷ್ಟು ಮೂರ್ಖತನ."

ಇನ್ನು ಎರಡನೆಯವನು ಹೇಳಿದ, "ಕುದುರೆಯ ಕಾಲುಗಳನ್ನು ಜೋಡಿಸಿ ಕಟ್ಟದೆ ಬಿಟ್ಟಿದ್ದು ಇನ್ನೂ ದೊಡ್ಡ ಮೂರ್ಖತನ".

ಮುಂದುವರೆದು ಮೂರನೆಯವನು ಹೇಳಿದ, "ಕುದುರೆ ಮೇಲೆ ಸಮುದ್ರದತ್ತ ಪ್ರಯಾಣ ಮಾಡುವುದೂ ಮೂರ್ಖತನವಲ್ಲದೆ ಮತ್ತೇನು".

ಇದು ಸಾಲದು ಎನ್ನುವಂತೆ ನಾಲ್ಕನೆಯವನು ಮೂದಲಿಸಿ ಹೇಳುತ್ತಾನೆ, "ಸೋಮಾರಿಗಳು ಮತ್ತು ಮಂಕುದಿಣ್ಣೆ ಮನುಷ್ಯ ಮಾತ್ರ ಸ್ವಂತ ಕುದುರೆಗಳನ್ನಿಟ್ಟುಕೊಳ್ಳುವನು".

ಸಹಜವಾಗಿ, ಕಳ್ಳತನದಿಂದ ಸಂತ್ರಸ್ತನಾದ ಪ್ರಯಾಣಿಕನು ತನ್ನೊಂದಿಗೆ ತಂಗಿದ ಇತರ ಪ್ರಯಾಣಿಕರ ಟೀಕೆಗಳನ್ನು ಮತ್ತು ಪ್ರತಿಕ್ರಿಯೆಗಳನ್ನು ಕೇಳಿ ಆಶ್ಚರ್ಯ ಚಕಿತನಾದನು. **ಕೊನೆಗೆ ಅವನು ಅಳುತ್ತಾ, "ಓ ನನ್ನ ಸ್ನೇಹಿತರೇ, ನನ್ನ ಕುದುರೆ ಕಳ್ಳತನವಾದ ಕಾರಣ, ನೀವೆಲ್ಲರೂ ನನ್ನದೇ ತಪ್ಪುಗಳೆಂದು ಎತ್ತೇಳುತ್ತಿರುವಿರಿ. ಆದರೆ ವಿಚಿತ್ರವೆಂದರೆ ನನ್ನ ಕುದುರೆಯನ್ನು ಕದ್ದವನ ಬಗ್ಗೆ ನೀವು ಒಂದೇ ಒಂದು ಕಠೋರ ಮಾತನ್ನೂ ಹೇಳಲಿಲ್ಲ".**

ಮೇಲಿನ ನೀತಿಕಥೆಯಲ್ಲಿ, ಕ್ರಿಸ್ತಶಕ 10ನೇ ಶತಮಾನದ ಆರಂಭದಲ್ಲಿ, ಸನಾತನ ಧರ್ಮವಿದ್ದ ಭಾರತದೊಳಗಿನ ವಿವಿಧ ದೇಶಗಳ ರಾಜರು ಎಂದು ಆ ತಂಗುದಾಣದಲ್ಲಿದ್ದ ಪ್ರಯಾಣಿಕರನ್ನು ಕಲ್ಪಿಸಿಕೊಳ್ಳಿ. ಅವರ ಸಾಮ್ರಾಜ್ಯ ಕದ್ದ ಕುದುರೆ ಎಂದು ಭಾವಿಸೋಣ. 1947ರಲ್ಲಿ ಸ್ವಾತಂತ್ರ್ಯ ಪಡೆದ ನಂತರ, ಅಂದಿನಿಂದ 2014ರವರೆಗೆ ನಮ್ಮನ್ನು ಆಳಿದವರು (ಎಡ ಉದಾರವಾದಿಗಳು) ತಂಗುದಾಣದಲ್ಲಿದ್ದ ಸಹ ಪ್ರಯಾಣಿಕರೆನ್ನಿ. ಒಬ್ಬ ಭಾರತೀಯನಾಗಿ, ವಿಶೇಷವಾಗಿ ನೀವು ಹಿಂದೂ ಆಗಿದ್ದರೆ, ನಿಮ್ಮ ಭಾವನೆ ಏನು? ನೀವು ಈ ನೀತಿಕಥೆ ಯಲ್ಲಿ ಕುದುರೆ ಕಳೆದುಕೊಂಡ ಪ್ರಯಾಣಿಕನಂತೆ. ನಮ್ಮ 800 ವರ್ಷದ ಗುಲಾಮಗಿರಿಗೆ ನಾವೇ ಕಾರಣ ಎನ್ನುತ್ತಾರೆ ಈ ಎಡ ಉದಾರವಾದಿಗಳು (Left Liberals).

ಈ ಎಡ ಉದಾರವಾದಿಗಳು, ವಿದೇಶಿ ಆಕ್ರಮಣಕಾರರ ವಿರುದ್ಧ ಯುದ್ಧದಲ್ಲಿ ಸೋತ ಈ ದೇಶದ ಹಿಂದೂ ರಾಜರು ಮತ್ತು ಹಿಂದೂ ಜನರಲ್ಲಿ ತಪ್ಪು ಕಂಡುಹಿಡಿಯುತ್ತಾರೆ. ಭಾರತದ ಆಡಳಿತ ಪಕ್ಷಗಳು 2014ರವರೆಗೆ ಅದೇ ಕೆಲಸ ಮಾಡಿ ನಮ್ಮನ್ನೆಲ್ಲಾ ತಪ್ಪಿತಸ್ಥರ ಮನೋಭಾವಕ್ಕೆ ತಳ್ಳಿದ್ದರು. ವಿಚಿತ್ರವೆಂದರೆ, ಈ ಹಿಂದೂ ರಾಜರ ರಾಜ್ಯಗಳನ್ನು ಕದ್ದ ವಿದೇಶಿ ದಾಳಿಕೋರರ ಬಗ್ಗೆ ಎಡ ಉದಾರವಾದಿಗಳು ಮತ್ತು ಹಿಂದಿನ ಆಡಳಿತ ಪಕ್ಷಗಳಿಂದ ಒಂದೇ ಒಂದು ನಿಂದೆಯ ಮಾತಿಲ್ಲ. ಈಗಲೂ ಅವರನ್ನು ಹೊಗಳುವವರಿದ್ದಾರೆ. ಅವರ ನೆನಪಿಗಾಗಿ ರಸ್ತೆ, ಸಂಸ್ಥೆಗಳಿಗೆ ವಿದೇಶಿ ಆಕ್ರಮಣಕಾರರು ಇಟ್ಟಂತಹ ಹೆಸರನ್ನು ಇನ್ನೂ, ಸ್ವಾತಂತ್ರ್ಯ ಸಿಕ್ಕಿ 76 ವರ್ಷ ಆದ ನಂತರವೂ ಉಳಿಸಿಕೊಂಡಿದ್ದೇವೆ.

ಸ್ವತಂತ್ರ ಭಾರತದ ಆಡಳಿತಗಾರರು ಹಿಂದೂಗಳ ವಿರಾಸತ್ (ಪರಂಪರೆ) ಮೇಲೆ ನಡೆದ ದುಷ್ಕೃತ್ಯಗಳಲ್ಲಿ ರಾಜೀ ಮಾಡಿಕೊಂಡರು. ಹಾಗಾಗಿ ದಾಳಿಕೋರರಿಂದ ಧ್ವಂಸಗೊಂಡ ತಮ್ಮ ಪ್ರಮುಖ ದೇವಾಲಯಗಳನ್ನು ಮರಳಿ ಪಡೆಯಲು ಹಿಂದೂಗಳಿಗೆ ಸಾಧ್ಯವಾಗಲಿಲ್ಲ.

2014ರಿಂದ ಈ ಕೆಲಸ ಸ್ವಲ್ಪ ಮಟ್ಟಿಗೆ ಆಗಿದೆ ಅಷ್ಟೆ, ಆದರೂ ಭೂದಾಖಲೆಗಳಲ್ಲಿ ಬ್ರಿಟಿಷ್ ಮತ್ತು ಪರ್ಷಿಯನ್ ಹೆಸರುಗಳು ಇನ್ನೂ ಇವೆ. ಕ್ರಿಮಿನಲ್ ಮತ್ತು ಸಿವಿಲ್ ಕಾನೂನುಗಳಲ್ಲಿ ಮೊಘಲ್ ಮತ್ತು ವಸಾಹತುಶಾಹಿ ಬ್ರಿಟಿಷ್ ಪ್ರಭಾವವಿದೆ. ಇಂದು ಭಾರತವು, ಹಿಂದೂ ಬಹುಮತದೊಂದಿಗೆ, ಸ್ವತಂತ್ರ ಹಾಗೂ ಸಾರ್ವಭೌಮ ದೇಶವಾಗಿದೆ ಎಂಬ ಅಂಶವನ್ನು ದೃಢೀಕರಿಸಲು ಬದಲಾವಣೆಗಾಗಿ ಸೊಲ್ಲೆತ್ತುತ್ತಿತ್ತು. ತಮ್ಮ ಈ ಕೂಗಿಗೆ ಸ್ಪಂದಿಸುವವರಿಗೆ ಜನರು ಮತ ಹಾಕಿ ಅವರನ್ನು ಅಧಿಕಾರಕ್ಕೆ ತರಬೇಕಿತ್ತು. ಆದರೆ 2014ರವರೆಗೆ ಅದು ಸಾಧ್ಯವಾಗಲಿಲ್ಲ.

ದುರದೃಷ್ಟವಶಾತ್, 16 ವರ್ಷಗಳಿಗೂ ಹೆಚ್ಚು ಕಾಲ ಆಳಿದ ಮೊದಲ ಪ್ರಧಾನಿ ಪಂಡಿತ್ ಜವಾಹರಲಾಲ್ ನೆಹರು ಅವರು ತಮ್ಮದೇ ಕಾರಣಗಳಿಗಾಗಿ, ವಿದೇಶಿಯರು ನಾಶ ಮಾಡಿದ ದೇವಾಲಯಗಳನ್ನು ಪುನಃ ಪಡೆಯಲು ಪ್ರಯತ್ನಿಸಲಿಲ್ಲ.

ಸ್ವತಂತ್ರ ಭಾರತದ 2014ರವರೆಗಿನ ಆಡಳಿತಗಾರರು, ದೇಶದ ಬಹುಸಂಖ್ಯಾತ ಹಿಂದೂಗಳು ಅಲ್ಪಸಂಖ್ಯಾತರ ಮೇಲೆ ಹೊರೆ ಎಂದು ಪರಿಗಣಿಸಿದ್ದರು ಎಂಬ ಭಾವನೆ ಬರುತ್ತದೆ. ಆದಾಗ್ಯೂ, ಶಿಕ್ಷಣ ಸಂಸ್ಥೆ, ದೇವಾಲಯದ ನಿರ್ವಹಣೆ, ಅಪರಾಧ ಮತ್ತು ನಾಗರಿಕ ಕಾನೂನುಗಳ ವಿಷಯದಲ್ಲಿ ಬಹುಸಂಖ್ಯಾತರ ಮೇಲಿನ ಸರ್ಕಾರದ ತಾರತಮ್ಯ ನೀತಿ ಬೇಸರ ತಂದಿದೆ.



> **"ಚರಿತ್ರೆಯನ್ನು ಓದದವರು, ವಿಶೇಷವಾಗಿ ರಾಜಕಾರಣಿಗಳು, ತಮ್ಮ ಪೂರ್ವಿಕರು ಮಾಡಿದ ತಪ್ಪನ್ನೇ ಮಾಡಿ, ಪುನಃ ಗುಲಾಮಗಿರಿಗೆ ತಳ್ಳುವ ಅಪಾಯವಿರುತ್ತದೆ. ಚರಿತ್ರೆಯಿಂದ ನಾವೆಲ್ಲಾ ಪಾಠ ಕಲಿಯಬೇಕು. ಆಗ ಮಾತ್ರ ಭಾರತವು ಒಗ್ಗಟ್ಟಾಗಿ ಉಳಿಯುವುದು ಮತ್ತು ಆ ಮೂಲಕ ಇತಿಹಾಸವು ಮರುಕಳಿಸದಂತೆ ಬಲಿಷ್ಠವಾಗಿರಲು ಸಾಧ್ಯ.**

ಹಿಂದೂ ಬಹುಸಂಖ್ಯಾತ ಮತ್ತು ಮುಸ್ಲಿಂ ಬಹುಸಂಖ್ಯಾತ ಪ್ರಾಂತ್ಯಗಳು ಎಂಬ ಮತೀಯ ರಾಜಕೀಯ ತತ್ವದ ಮೇಲೆ 1947ರಲ್ಲಿ ಬ್ರಿಟಿಷ್–ಭಾರತವನ್ನು ವಿಭಜಿಸಲಾಯಿತು. ಭಾರೀ ಅವಕಾಶ ವಂಚಿತ ಭಾರತದ ಬಹುಸಂಖ್ಯಾತ ಹಿಂದೂಗಳು ತಮ್ಮ ವಿರಾಸತ್ (ಪರಂಪರೆ) ಅನ್ನು ಮರಳಿ ಪಡೆದುಕೊಳ್ಳಬಹುದೆಂದು ನಂಬಿದ್ದರು. ಆದರೆ ಅದು ಆಗಲೇ ಇಲ್ಲ. ಈಗ 2014 ರಿಂದ ಭಾರತ ಚೇತರಿಸಿಕೊಳ್ಳುತ್ತಿದೆ.

ಆಶ್ಚರ್ಯವೆಂದರೆ, ವಿಭಜಿತ ಭಾರತದ ಆಡಳಿತದ ಮುಂಚೂಣಿಯಲ್ಲಿದ್ದ ಹಿರಿಯ ಕಾಂಗ್ರೆಸ್ ನಾಯಕರು ಹಿಂದೂಗಳ ಆಕಾಂಕ್ಷೆಗಳನ್ನು ಪರಿಗಣಿಸುವಂತೆ ನೆಹರೂ ಅವರ ಮೇಲೆ ಪ್ರಭಾವ ಬೀರಿ ಅವರಿಗೆ ಮನವರಿಕೆ ಮಾಡಲು ಸಾಧ್ಯವಾಗಲಿಲ್ಲ ಎಂಬುದು ದುಃಖದ ಸಂಗತಿ. ಸ್ವಾತಂತ್ರ್ಯ ನಂತರ ಹಿಂದೂಗಳ ಪ್ರಶ್ನೆಯನ್ನು (ಸಮಸ್ಯೆಯನ್ನು) ಎದುರಿಸುವಲ್ಲಿ ಆಗಿನ ಆಡಳಿತಗಾರರು ತೋರಿದ ಅಸಡ್ಡೆಯ ಧೋರಣೆಯು ರಾಜಕೀಯ ಉದ್ದೇಶವನ್ನು ಹೊಂದಿತ್ತು ಎಂಬುದು ಈಗ ಬಹಿರಂಗವಾಗಿದೆ. (ಸ್ವಾತಂತ್ರ್ಯ ಪಡೆದ ಗಳಿಗೆಯಿಂದಲೇ ಒಂದು ವರ್ಗದ ತುಷ್ಟೀಕರಣ ಪ್ರಯತ್ನ ಇತ್ತು ಎಂಬುದನ್ನು ಮನವರಿಕೆ ಮಾಡಿಕೊಳ್ಳಿ). ಇದು ಆರಂಭದಿಂದಲೂ ಆಡಳಿತಾರೂಢ ಕಾಂಗ್ರೆಸ್ ಪಕ್ಷದ ವೋಟ್ ಬ್ಯಾಂಕ್ ಹಿಡನ್ ಅಜೆಂಡಾವಾಗಿದ್ದು, ಆಗ ಪ್ರಬಲ ವಿರೋಧ ಪಕ್ಷ ಇಲ್ಲದ ಕಾರಣ ಹಿಂದೂಗಳ ಪರ ಮಾತನಾಡುವವರೇ ಇರಲಿಲ್ಲ. ಈಗ ಮೋದಿ ಬಂದಿದ್ದಾರೆ. ನೋಡೋಣ.

ಸಾವಿರಾರು ವರ್ಷಗಳ ಕಾಲ ಸೋತಂತಹ, ತಿರಸ್ಕರಿಸಲ್ಪಟ್ಟಿದ್ದಂತಹ, ತುಳಿತಕ್ಕೊಳಗಾದ ಮತ್ತು ಅವಮಾನಕ್ಕೊಳಗಾದ ಹಿಂದೂಗಳು ಕಾಲಕ್ರಮೇಣ ಸ್ವಾತಂತ್ರ್ಯ ಪಡೆದಾಗ ತಮ್ಮ ಕಳೆದುಹೋದ ಪರಂಪರೆಯನ್ನು ಮರಳಿ ಪಡೆಯಲಿಚ್ಛಿಸುವುದು ಸಹಜ.

ಆದಾಗ್ಯೂ, ಜಾತಿ, ಮತ, ಧರ್ಮ ಮತ್ತು ಹಣದ ರಹಸ್ಯ ಕಾರ್ಯಸೂಚಿಗಳ ಆಧರಿತ ಚುನಾವಣಾ ರಾಜಕೀಯದಿಂದಾಗಿ, ಹಿಂದೂ ಬಹುಸಂಖ್ಯಾತರು ನವೋದಯ ಮತ್ತು ಪುನರುತ್ಥಾನದ ಹೊಸ ಯುಗವನ್ನು ಕಾಣದೆ ಸೊರಗುತ್ತಲೇ ಇದ್ದಾರೆ.

ಅದೃಷ್ಟವಶಾತ್, 2014ರ ಸಂಸತ್ ಚುನಾವಣೆಯಲ್ಲಿ ಭಾರತ ಮತ್ತು ಹಿಂದೂಗಳ ಪಾಲಿಗೆ ಪವಾಡವೇ ನಡೆದು ಹೋಯಿತು. ಎನ್‌ಡಿಎ ಪಾಲುದಾರ ಪಕ್ಷಗಳೊಂದಿಗೆ ಬಿಜೆಪಿ ಸಂಸತ್ತಿನಲ್ಲಿ ಸಂಪೂರ್ಣ ಬಹುಮತವನ್ನು ಪಡೆದುಕೊಂಡಿತು ಮತ್ತು ಭಗವದ್ಗೀತೆಯಲ್ಲಿ ಉಲ್ಲೇಖಿತವಾಗಿರುವ ಅವತಾರದಂತೆ ಪ್ರಧಾನಿ ನರೇಂದ್ರ ಮೋದಿ ಅವರನ್ನೂ ಪಡೆದರು. ಇದು ಹಿಂದೂ ವಿರಾಸತ್ ಅನ್ನು ಮರುಪಡೆಯಲು ಮತ್ತು ಭಾರತದ ಆರ್ಥಿಕ ಬೆಳವಣಿಗೆಯನ್ನು ತ್ವರಿತಗೊಳಿಸಲು ಸಹಾಯ ಮಾಡಿತು. ಇದೆಲ್ಲಾ ಸಾಧ್ಯವಾ ಎಂದು ಅನೇಕರು ಭಾವಿಸಿದ್ದರು. ಆದರೆ ಭಾರತ 75 ವರ್ಷದ ನಂತರ ಚೇತರಿಸಿಕೊಂಡಿತು. ಈ ಅಸಾಧ್ಯವನ್ನು ಸಾಧ್ಯವಾಗಿಸಿದ ವ್ಯಕ್ತಿ ನಮ್ಮ ಪ್ರಧಾನಿ ಮೋದಿ.

ದೇಶಕ್ಕೆ ಮತ್ತು ಅದರ ಜನರಿಗೆ, ಬಹುಸಂಖ್ಯಾತ ಮತ್ತು ಅಲ್ಪಸಂಖ್ಯಾತರಿಗೆ, ಇದರಿಂದ ಒಳ್ಳೆಯದಾಗಿದ್ದರೂ, ನಮ್ಮ ಪ್ರಜಾಪ್ರಭುತ್ವ ಮತ್ತು ಅದರ ಆರೋಗ್ಯಕರ ಬೆಳವಣಿಗೆಯ ಬಗ್ಗೆ ಆಲೋಚಿಸುವುದು ಮುಖ್ಯವಾಗಿದೆ. ಪ್ರಸ್ತುತ, ದೇಶದಾದ್ಯಂತ ರಾಜಕೀಯ ಪಕ್ಷಗಳು ತಮ್ಮ ತಮ್ಮ ರಾಜಕೀಯ ಸಿದ್ಧಾಂತಗಳನ್ನು ರಾಜೀ ಮಾಡಿಕೊಂಡಂತಿದೆ. ವಿಶೇಷವಾಗಿ ಕಾಂಗ್ರೆಸ್ ಪಕ್ಷ. **ಪ್ರಜಾಪ್ರಭುತ್ವ ಉಳಿಯಬೇಕಾದರೆ ನಮಗೆ ಪ್ರಬಲವಾದ ಪ್ರತಿಪಕ್ಷಗಳು ಬೇಕು. ಆದರೆ ಅದು ಇತ್ತೀಚಿನ ವರ್ಷದಲ್ಲಿ ಸಾಧ್ಯವಾಗಿಲ್ಲ. ಸದ್ಯ, ದೇಶದ ಅದೃಷ್ಟ, ಬಿಜೆಪಿಯಲ್ಲಿ ಸಿದ್ಧಾಂತವೂ ಇದೆ, ದೃಢ ನಾಯಕತ್ವವೂ ಇದೆ. ಕಾಂಗ್ರೆಸ್ ಪಕ್ಷದಲ್ಲೂ ಈಗಿನ ಈ ಕೊರತೆ ನೀಗಿದರೆ, ದೇಶಕ್ಕೆ, ಪ್ರಜಾಪ್ರಭುತ್ವಕ್ಕೆ ಒಳ್ಳೆಯದು.**

ಪ್ರಬುದ್ಧ ಪ್ರಜಾಪ್ರಭುತ್ವದ ಸಂಸತ್ತಿನಲ್ಲಿ ಪ್ರಬಲ ಪ್ರತಿಪಕ್ಷ ಇರಬೇಕು. ಈ ಕಾರಣಕ್ಕಾಗಿಯೇ ಪ್ರಧಾನಿ ನರೇಂದ್ರ ಮೋದಿಯವರು ಕೂಡ ಉತ್ತಮ ರಚನಾತ್ಮಕ ಪ್ರತಿಪಕ್ಷ ರಚನೆಯ ಆಶಯವನ್ನು ರಾಜ್ಯಸಭೆಯಲ್ಲಿ ವ್ಯಕ್ತಪಡಿಸಿದ್ದರು.

ಅದೃಷ್ಟವಶಾತ್, ಈಗ ನಡೆಯುತ್ತಿರುವ 2024ರ ಚುನಾವಣೆಯು ಸಂಕೀರ್ಣವಾಗಿರುವಂತೆ ತೋರುತ್ತಿಲ್ಲ. ಆದ್ದರಿಂದ, ಹೊಸ ಸಂಸತ್ತಿನಲ್ಲಿ ಹೊಸ ಆಡಳಿತ ಮತ್ತು ವಿರೋಧ ಪಕ್ಷಗಳ ಆರೋಗ್ಯಕರ ಮಿಶ್ರಣವನ್ನು ನಿರೀಕ್ಷಿಸಬಹುದು.

ಇದೆಲ್ಲದರ ನಡುವೆ ಕರ್ನಾಟಕದ ಸಂಸದರೊಬ್ಬರಿಂದ ಅಪಸ್ವರದ ಮಾತು ಕೇಳಿ ಬರುತ್ತಿದೆ. ಕರ್ನಾಟಕಕ್ಕೆ ತೆರಿಗೆಯ ಪಾಲನ್ನು ಕೇಂದ್ರ ನೀಡುತ್ತಿಲ್ಲ ಎಂಬ ಕ್ಷುಲ್ಲಕ ಕಾರಣಕ್ಕೆ ಸಂಸದ ಡಿ.ಕೆ.ಸುರೇಶ್, ಉತ್ತರ ಮತ್ತು ದಕ್ಷಿಣ ಎಂದು ದೇಶ ವಿಭಜನೆಯ ಬೀಜ ಬಿತ್ತಿದ್ದಾರೆ. ಈ ಸಂಸದರ ಬೆದರಿಕೆಯ ಬಗ್ಗೆ ಪ್ರಧಾನಿ ತೀವ್ರ ಅಸಮಾಧಾನ ವ್ಯಕ್ತಪಡಿಸಿದರು. ಮತ್ತು ರಾಜ್ಯಸಭೆಯಲ್ಲಿ ಅವರು, "ಏನು ಮಾತು ಅಂತ ಮಾತನಾಡುತ್ತಿರುವುದು? ರಾಷ್ಟ್ರವನ್ನು ಒಡೆಯುವಂತಹ ಈ ರೀತಿಯ ಪ್ರಲಾಪಗಳನ್ನು ನಿಲ್ಲಿಸಿ."

ರಾಜಕೀಯ ಪಕ್ಷಗಳಾದ್ಯಂತ ಇರುವ ನಮ್ಮ ಕೆಲವು ರಾಜಕಾರಣಿಗಳ ಮಾತುಗಳನ್ನು ಕೇಳಿದಾಗ, ಅವರು ಭಾರತದ ಇತಿಹಾಸವನ್ನು – ಪ್ರಾಚೀನ, ಆಧುನಿಕ ಮತ್ತು ಪ್ರಸ್ತುತವನ್ನು–ಓದುವುದು ಅಗತ್ಯವೆಂದು ತೋರುತ್ತದೆ. ಆಗ ಮಾತ್ರ ಭಾರತವನ್ನು ವಿದೇಶಿ ಆಕ್ರಮಣಕಾರರು ಮತ್ತು ವರ್ತಕರು ಹೇಗೆ ವಶಪಡಿಸಿಕೊಂಡರು ಮತ್ತು ಆಳಿದರು ಎಂಬುದು ಅವರಿಗೆ ತಿಳಿಯುತ್ತದೆ. ಚರಿತ್ರೆಯನ್ನು ಓದದವರು, ವಿಶೇಷವಾಗಿ ರಾಜಕಾರಣಿಗಳು, ತಮ್ಮ ಪೂರ್ವಿಕರು ಮಾಡಿದ ತಪ್ಪನ್ನೇ ಮಾಡಿ, ಪುನಃ ಗುಲಾಮಗಿರಿಗೆ ತಳ್ಳುವ ಅಪಾಯವಿರುತ್ತದೆ. ಚರಿತ್ರೆಯಿಂದ ನಾವೆಲ್ಲಾ ಪಾಠ ಕಲಿಯಬೇಕು. ಆಗ ಮಾತ್ರ ಭಾರತವು ಒಗ್ಗಟ್ಟಾಗಿ ಉಳಿಯುವುದು ಮತ್ತು ಆ ಮೂಲಕ ಇತಿಹಾಸವು ಮರುಕಳಿಸದಂತೆ ಬಲಿಷ್ಠವಾಗಿರಲು ಸಾಧ್ಯ.

ಕಾಂಗ್ರೆಸ್ ಸಂಸದ ಡಿ.ಕೆ. ಸುರೇಶ್ ಮತ್ತು ಕೆಲವು ಡಿಎಂಕೆ ನಾಯಕರು ನಮ್ಮ ದೇಶದ ಸನಾತನ ಧರ್ಮದ ಬಗ್ಗೆ, ಏಕತೆಯ ಬಗ್ಗೆ ಮಾತನಾಡುವಾಗ, ನನಗೆ ಡಾ. ಬಿ. ಆರ್. ಅಂಬೇಡ್ಕರ್ ಅವರ ಮಾತುಗಳು ನೆನಪಿಗೆ ಬರುತ್ತವೆ. ಬಾಂಬೆಯಲ್ಲಿ ಐವತ್ತರ ದಶಕದ ಆರಂಭದಲ್ಲಿ ಸಾರ್ವಜನಿಕ ಸಭೆಯಲ್ಲಿ ಬಾಂಬೆಯ ಅಂದಿನ ಮುಖ್ಯಮಂತ್ರಿ ಬಿ.ಜಿ.ಖೇರ್ **"ನಾನು ಮೊದಲು ಭಾರತೀಯ ನಂತರ ಮಹಾರಾಷ್ಟ್ರದವನು"** (I am an Indian first and Maharastrian last) ಎಂದು ಹೇಳಿ ತಮ್ಮ ಭಾಷಣವನ್ನು ಮುಗಿಸುತ್ತಾರೆ.

ನಂತರ, **ಡಾ. ಅಂಬೇಡ್ಕರ್** ಅವರು ಮಾತನಾಡುವ ಸರದಿ ಬಂದಾಗ, ಅವರು ಖೇರ್ ಅವರ ಅಂತಿಮ ಹೇಳಿಕೆಯನ್ನು ಪ್ರಸ್ತಾಪಿಸಿ ಹೇಳುತ್ತಾರೆ; **"ನಾವು ಯಾವಾಗಲೂ ಮೊದಲು ಭಾರತೀಯರು ನಂತರವೂ ಭಾರತೀಯರು ಎಂದು ಭಾವಿಸಬೇಕು"** (We should always think we are Indians first and Indians Last).

ನಮ್ಮ ಇಂದಿನ ಮಹತ್ವಾಕಾಂಕ್ಷಿ ಮತ್ತು ಸಂಕುಚಿತ ಮನೋಭಾವದ ರಾಜಕಾರಣಿಗಳು ಡಾ. ಅಂಬೇಡ್ಕರ್ ಅವರ ಮಹಾ ಸಲಹೆಯನ್ನು ಪರಿಗಣಿಸಿ, ಪಾಲಿಸುತ್ತಾರೆ ಎಂದು ನಾವು ಭಾವಿಸೋಣವೇ? ಡಾ. ಅಂಬೇಡ್ಕರ್ ಅವರು ಇನ್ನೊಂದು ಸಂದರ್ಭದಲ್ಲಿ ಹೇಳಿದರು; **"ಭಾರತ ಸೋತರೆ ಗೆಲ್ಲುವವರು ಯಾರು?"** (If India loses who wins)


ಪ್ರಪಂಚದ ಇತಿಹಾಸವು ಎಲ್ಲಾ ಸಮಯ ಮತ್ತು ಸಂದರ್ಭಗಳಲ್ಲಿ–ಯುದ್ಧ, ಶಾಂತಿ, ಕ್ಷಾಮ ಇಲ್ಲವೇ ಪಿಡುಗು–ನಮಗೆ ಏನನ್ನು ತಿಳಿಸುತ್ತದೆ ಅಂದರೆ ಆಯಾಯ ಸಂದರ್ಭದಲ್ಲಿ ಯಾರು ದೇಶದ ನಾಯಕನಾಗಿರುತ್ತಾನೋ ಅವನ ಬುದ್ಧಿವಂತಿಕೆ ಹಾಗೂ ನಾಯಕತ್ವದ ಮೇಲೆ ದೇಶದ ಸಮಸ್ಯೆಗಳು ತೀವ್ರಗೊಳ್ಳಬಹುದು ಇಲ್ಲವೇ ಪರಿಹಾರಗೊಳ್ಳಬಹುದು. ಸದ್ಯ, ಒಬ್ಬ ಉತ್ತಮ ನಾಯಕನನ್ನು ಹೊಂದಿರುವಾಗ, ಅವನನ್ನು ಉಳಿಸಿಕೊಳ್ಳುವುದು ಬುದ್ಧಿವಂತಿಕೆ.

(ಇಂಗ್ಲೀಷ್ ಲೇಖನದ ಕನ್ನಡ ಅನುವಾದ)

ಜೈ ಹಿಂದ್.

Email: voice@starofmysore.com

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy News papers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com



ರಾಜ್ಯದ ಖಜಾನೆ ಲೂಟಿಯಾಗಿದೆ; ಮೋದಿಯವರೇ ತುಂಬಿಸಿ ಕೊಡಿ

ಕಾಂಗ್ರೆಸ್ ಚೆಂಬು ಜಾಹೀರಾತಿಗೆ ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಲೇವಡಿ

- ಭಿಕ್ಷೆ ಬೇಡುವಂತೆ ಚೆಂಬು ಜಾಹೀರಾತು
- ಜೆಡಿಎಸ್ ಕಂಡರೆ ಸಿದ್ದರಾಮಯ್ಯಗೆ ಭಯ
- ಸುಮಲತಾ ಪ್ರಚಾರಕ್ಕೆ ಬರಬಹುದು ನೋಡೋಣ
- ಒಂದು ವರ್ಗದ ಓಲೈಕೆಯಿಂದ ಸರಣಿ ಅಪರಾಧ ಕೃತ್ಯ

ಮೈಸೂರು, ಏ.20(ಬಿಎಲ್‌ಯು)– ರಾಜ್ಯದ ಖಜಾನೆ ಲೂಟಿ ಮಾಡಿದ್ದೇವೆ, ಖಜಾನೆ ತುಂಬಿಸಿಕೊಡಿ ಎಂದು ಪ್ರಧಾನಿ ನರೇಂದ್ರ ಮೋದಿ ಬಳಿ ಭಿಕ್ಷೆ ಬೇಡುವಂತೆ ಕಾಂಗ್ರೆಸ್ ಚೆಂಬಿನ ಜಾಹೀರಾತು ನೀಡಿದೆ ಎಂದು ಮಾಜಿ ಮುಖ್ಯಮಂತ್ರಿ ಹೆಚ್.ಡಿ. ಕುಮಾರಸ್ವಾಮಿ ಲೇವಡಿ ಮಾಡಿದ್ದಾರೆ.

ಮೈಸೂರಿನ ಸುತ್ತೂರು ಮಠದಲ್ಲಿ ಇಂದು ಪತ್ರಕರ್ತರ ಜೊತೆ ಮಾತನಾಡಿದ ಅವರು, ರಾಜ್ಯಕ್ಕೆ ನರೇಂದ್ರ ಮೋದಿ ರಾಜ್ಯ ಭೇಟಿ ಹಿನ್ನೆಲೆಯಲ್ಲಿ ಅದು ಚೆಂಬಿನ ಪ್ರತಿಭಟನೆಯಲ್ಲ, ಮೋದಿ ಬಳಿ ಚೆಂಬು ಹಿಡಿದು ಭಿಕ್ಷೆ ಬೇಡುತ್ತಿರುವ ಜಾಹೀರಾತು ಎಂದು ಛೇಡಿಸಿದರು.

ನಾವು ಅಧಿಕಾರಕ್ಕೆ ಬರುವ ಮುನ್ನ ರಾಜ್ಯದ ಖಜಾನೆ ಭರ್ತಿಯಾಗಿತ್ತು. ಅಭಿವೃದ್ಧಿ ಕೂಡ ಆಗಿತ್ತು. ಖಜಾನೆ ತುಂಬಿ ತುಳುಕುತ್ತಿತ್ತು. ಆದರೆ ನಾವು ಅಧಿಕಾರಕ್ಕೆ ಬಂದ ಮೇಲೆ ರಾಜ್ಯದ ಬೊಕ್ಕಸ ಲೂಟಿ ಮಾಡಿ ತೆರಿಗೆ ಹಣ ಪೋಲು ಮಾಡಿದ್ದೇವೆ. ಈಗ ಚೆಂಬು ಖಾಲಿಯಾಗಿದೆ. ಆದ ಕಾರಣ ಅದನ್ನು ತುಂಬಿಸಿಕೊಡಿ ಎಂದು ನರೇಂದ್ರ ಮೋದಿ ಬಳಿ ಭಿಕ್ಷೆ ಬೇಡುವಂತೆ ಜಾಹೀರಾತು ನೀಡಿದ್ದಾರೆ ಎಂದು ಗೇಲಿ ಮಾಡಿದರು.

ಹಾಸನ, ಮಂಡ್ಯದಲ್ಲಿ ಜೆಡಿಎಸ್ ಸೋಲಿಸುತ್ತೇವೆ, ಸೂರ್ಯ ಚಂದ್ರರಷ್ಟೆ ಅವರ ಸೋಲು ನಿಶ್ಚಿತ ಎಂದೆಲ್ಲಾ ಸಿದ್ದರಾಮಯ್ಯ ಹೇಳಿದ್ದಾರೆ. ಆದರೆ ಇದು ಸಾಧ್ಯವಾಗದ ಮಾತು. ಜೆಡಿಎಸ್ ಕಂಡರೆ ಭಯ ಇರುವ ಕಾರಣ ಹೀಗೆಲ್ಲಾ ಹತಾಶೆಯಿಂದ ಮಾತನಾಡುತ್ತಿದ್ದಾರೆ ಎಂದು ಕುಮಾರಸ್ವಾಮಿ ತಿರುಗೇಟು ನೀಡಿದರು.

ಜೆಡಿಎಸ್ ಹಾಗೂ ಬಿಜೆಪಿ ನಡುವೆ ಕಾಟಾಚಾರದ ಮೈತ್ರಿ ನಡೆದಿದೆ ಎಂದು ಕಾಂಗ್ರೆಸ್‌ನವರು ಲೆಕ್ಕಾಚಾರ ಹಾಕಿದ್ದರು. ಆದರೆ ತಳಮಟ್ಟದಿಂದ ರಾಜ್ಯ ಹಾಗೂ ರಾಷ್ಟ್ರಮಟ್ಟದ ತನಕ ಜೆಡಿಎಸ್ ಹಾಗೂ ಬಿಜೆಪಿ ನಾಯಕರ ನಡುವೆ ಸಮನ್ವಯತೆ ಇದೆ. ಇದರಿಂದ ಎರಡು ಪಕ್ಷಗಳ ಮೈತ್ರಿ ಮತ್ತಷ್ಟು ಗಟ್ಟಿಯಾಗಿದೆ. ನಮ್ಮ ಮೈತ್ರಿ ಶಕ್ತಿ ನೋಡಿ ಸಿದ್ದರಾಮಯ್ಯ ಅವರಿಗೆ ಭಯ, ಆತಂಕ ಬಂದಿದೆ. ಆದ ಕಾರಣ ಹೀಗೆಲ್ಲಾ ಮಾತನಾಡುತ್ತಾರೆ ಎಂದು ಟಾಂಗ್ ನೀಡಿದರು.

ಸುಮಲತಾ ಪ್ರಚಾರಕ್ಕೆ ಬರಬಹುದು: ಮಂಡ್ಯ ಭಾಗದಲ್ಲಿ ಸಂಸದೆ ಸುಮಲತಾ ಇನ್ನು ಪ್ರಚಾರದಲ್ಲಿ ಭಾಗಿಯಾಗದ ಬಗ್ಗೆ ಪ್ರತಿಕ್ರಿಯೆ ನೀಡಿದ ಕುಮಾರಸ್ವಾಮಿ, ಸುಮಲತಾ ಈಗ ಬಿಜೆಪಿ ಸೇರಿದ್ದಾರೆ. ಪಕ್ಷ ಹೇಳಿದ ಕಡೆ ಪ್ರಚಾರ ಮಾಡುತ್ತಿದ್ದಾರೆ. ಇನ್ನು ಮೂರ್ನಾಲ್ಕು ದಿನ ಇದೆ. ನೋಡೋಣ ನಮ್ಮಲ್ಲೂ ಬಂದು ಸುಮಲತಾ ಪ್ರಚಾರ ಮಾಡಬಹುದು. ಬರೀ ಹೇಳಿಕೆಯಿಂದಲೇ ಏನೂ ಆಗುವುದಿಲ್ಲ. ಹೇಳಿಕೆ ಕೊಡದೆಯೂ ಬೆಂಬಲ ನೀಡಬಹುದಲ್ಲವೇ? ಎಂದರು.

ಪಾಕ್ ಪರ ಘೋಷಣೆ ಕೂಗಿದವರ ರಕ್ಷಣೆಯ ಫಲವಿದು...: ವಿಧಾನಸೌಧದಲ್ಲಿ ಪಾಕಿಸ್ತಾನ ಪರ ಘೋಷಣೆ ಕೂಗಿದವರನ್ನು ರಕ್ಷಣೆ ಮಾಡಿದ ಫಲವಾಗಿ ರಾಜ್ಯದಲ್ಲಿ ನಿರಂತರವಾಗಿ ಅಪರಾಧ ಕೃತ್ಯಗಳು ನಡೆಯುತ್ತಿವೆ ಎಂದು ಆರೋಪಿಸಿದರು.

ಹುಬ್ಬಳ್ಳಿಯಲ್ಲಿ ನೇಹಾ ಕೊಲೆ, ಗದಗದಲ್ಲಿ ಒಂದೇ ಕುಟುಂಬದ ನಾಲ್ವರ ಹತ್ಯೆ, ಮೈಸೂರಿನಲ್ಲಿ ಮೋದಿ ಪರವಾಗಿ ಹಾಡು ಮಾಡಿದ್ದವನ ಮೇಲೆ ಹಲ್ಲೆ, ಕೊಡಗಿನಲ್ಲಿ ಕಾರು ಹರಿಸಿ ಬಿಜೆಪಿ ಮುಖಂಡರ ಸಾವು ಸೇರಿದಂತೆ ಹಲವು ರೀತಿಯ ಪ್ರಕರಣಗಳಿಂದ ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಹದಗೆಟ್ಟಿದೆ ಎಂದು ಆರೋಪಿಸಿದರು.

ಬಿಜೆಪಿ ಹಾಗೂ ಜೆಡಿಎಸ್ ಸರ್ಕಾರದ ಅವಧಿಯಲ್ಲಿ ಕಾನೂನು ಮತ್ತು ಸುವ್ಯವಸ್ಥೆ ಸರಿ ಇರಲಿಲ್ಲ ಎಂದು ಆರೋಪಿಸುತ್ತಾರೆ. ನೀವು ಸರಿ ಮಾಡಿ ಎಂದು ರಾಜ್ಯದ ಜನತೆ ಕಾಂಗ್ರೆಸ್ ಬೆಂಬಲಿಸಿದ್ದಾರೆ. ಆದರೆ ನೀವು ಏನು ಮಾಡುತ್ತಿದ್ದೀರಾ. ಇಡೀ ವ್ಯವಸ್ಥೆ ಹಾಳು ಮಾಡುತ್ತಿದ್ದೀರಾ ಎಂದು ಕಿಡಿಕಾರಿದರು.



ಮೈಸೂರಿನ ಚಾಮುಂಡಿಬೆಟ್ಟ ತಪ್ಪಲಿನ ಸುತ್ತೂರು ಶಾಖಾ ಮಠದಲ್ಲಿ ಶನಿವಾರ ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಆಶೀರ್ವಾದ ಪಡೆದರು.

ಬೆಳಗ್ಗೆ 6 ಗಂಟೆಯಿಂದಲೇ ಕ್ರೈಂ ನ್ಯೂಸ್ ಬರಲಾರಂಭಿಸಿದೆ

ಈ ಮೊದಲು ನ್ಯೂಸ್ ಚಾನಲ್‌ಗಳಲ್ಲಿ ರಾತ್ರಿ 10 ಗಂಟೆ ನಂತರ ಕ್ರೈಂ ಸ್ಟೋರಿಗಳು ಬರುತ್ತಿತ್ತು. ಆದರೆ ಈಗ ಬೆಳಿಗ್ಗೆ 6 ಗಂಟೆಯಿಂದಲೇ ಕ್ರೈಂ ನ್ಯೂಸ್‌ಗಳು ಬರಲು ಆರಂಭವಾಗಿದೆ. ಇದು ರಾಜ್ಯದಲ್ಲಿ ಅಪರಾಧ ಪ್ರಕರಣಗಳು ಹೆಚ್ಚುತ್ತಿರುವುದಕ್ಕೆ ಸಾಕ್ಷಿ ಎಂದು ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ರಾಜ್ಯ ಕಾಂಗ್ರೆಸ್ ಸರ್ಕಾರದ ವೈಫಲ್ಯವನ್ನು ಟೀಕಿಸಿದರು.

ಹುಬ್ಬಳ್ಳಿಯ ನೇಹಾ ಹಿರೇಮಠ್ ಕೊಲೆ ಪ್ರಕರಣದ ಬಗ್ಗೆ ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಗೃಹ ಸಚಿವ ಡಾ.ಪರಮೇಶ್ವರ್ ಲಘುವಾಗಿ ಮಾತನಾಡಬಾರದಿತ್ತು. ಸರ್ಕಾರದ ಇಂತಹ ಧೋರಣೆಯಿಂದ ರಾಜ್ಯದಲ್ಲಿ ಮಹಿಳೆಯರಿಗೆ ರಕ್ಷಣೆಯೇ ಇಲ್ಲದಂತಾಗಿದೆ. ಮಹಿಳೆಯರ ಮೇಲೆ ದೌರ್ಜನ್ಯಗಳು ನಿರಂತರವಾಗಿ ನಡೆಯುತ್ತಿವೆ. ಒಂದು ವರ್ಗದ ಓಲೈಕೆಯಿಂದಾಗಿ ಇಂತಹ ಪ್ರಕರಣಗಳು ನಡೆಯುತ್ತಿವೆ ಎಂದು ಕುಮಾರಸ್ವಾಮಿ ಆಪಾದಿಸಿದರು.

ಹಿಂದು ಸಮಾಜದ ಮಹಿಳೆಯರ ಬಗ್ಗೆ ಕಾಂಗ್ರೆಸ್‌ನವರಿಗೆ ಇರುವ ಅಗೌರವ ಭಾವನೆಯನ್ನು ಇದು ತೋರಿಸುತ್ತದೆ. ಜೊತೆಗೆ ಜನರಿಗೆ ಯಾವ ರೀತಿ ರಕ್ಷಣೆ ನೀಡುತ್ತಿದ್ದಾರೆ ಎಂಬುದು ಇಂತಹ ಪ್ರಕರಣಗಳು ಸಾಬೀತುಪಡಿಸುತ್ತವೆ ಎಂದು ಟೀಕಿಸಿದರು.

ತಾಯಂದಿರೆ ನೀವು ಎಚ್ಚರಿಕೆಯಿಂದ ಇರಿ ಎಂದು ನಾನು ಸಲಹೆ ನೀಡಿದ್ದೆ. ಆದರೆ ಕಾಂಗ್ರೆಸ್‌ನವರು ತಮ್ಮ ಪಕ್ಷದ ಮಹಿಳಾಮಣಿಗಳನ್ನು ಕಳುಹಿಸಿ ನನ್ನ ವಿರುದ್ಧ ಪ್ರತಿಭಟನೆ ಮಾಡಿಸಿದರು. ಈ ಮೂಲಕ ಕಾಂಗ್ರೆಸ್ ಸರ್ಕಾರ ಮಹಿಳೆಯರ ಪರವಾಗಿದೆ ಎಂದು ಪ್ರಚಾರ ಮಾಡಿದರು. ಆದರೆ ರಾಜ್ಯದಲ್ಲಿ ಮಹಿಳೆಯರ ಮೇಲಿನ ನಿರಂತರ ದೌರ್ಜನ್ಯದಿಂದ ಇವರ ಸರ್ಕಾರ ಮಹಿಳೆಯರಿಗೆ ಯಾವ ರೀತಿ ರಕ್ಷಣೆ ನೀಡುತ್ತಿದೆ ಎಂಬುದು ಸಾಬೀತು ಮಾಡಿದೆ ಎಂದು ಆರೋಪಿಸಿದರು.

ಒಬ್ಬ ಕಾರ್ಪೊರೇಟರ್ ಮನೆಗೆ ರಕ್ಷಣೆ ನೀಡದವರು ಇನ್ನು ರಾಜ್ಯಕ್ಕೆ ಯಾವ ರೀತಿ ರಕ್ಷಣೆ ನೀಡುತ್ತಾರೆ ಎಂದು ಪ್ರಶ್ನಿಸಿದ ಕುಮಾರಸ್ವಾಮಿ, ನೇಹಾ ಹಿರೇಮಠ್ ತಂದೆ ಕಣ್ಣೀರಿಟ್ಟು ಮನವಿ ಮಾಡಿದರು. ಆದರೆ ಸಿದ್ದರಾಮಯ್ಯ ಪ್ರಕರಣದ ಬಗ್ಗೆ ಸರಿಯಾದ ಮಾಹಿತಿ ಪಡೆಯದೆ, ಸೂಕ್ಷ್ಮತೆ ಅರಿಯದೆ ಲಘುವಾಗಿ ಹೇಳಿಕೆ ನೀಡಿದರು. ಒಂದು ವರ್ಗದ ಓಲೈಕೆಯಿಂದ ಇಂತಹ ಪ್ರಕರಣ ನಡೆಯುತ್ತಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಮಠಾಧೀಶರನ್ನು ರಾಜಕೀಯಕ್ಕೆ ಎಳೆಯಬಾರದು

ಮಠಾಧೀಶರನ್ನು ರಾಜಕೀಯಕ್ಕೆ ಎಳೆದು ತರಬಾರದು, ಮಠಗಳ ಹೆಸರು ದುರ್ಬಳಕೆ ಮಾಡಿಕೊಳ್ಳಬಾರದು ಎಂದು ಮಾಜಿ ಸಿಎಂ ಹೆಚ್.ಡಿ.ಕುಮಾರಸ್ವಾಮಿ ಕಾಂಗ್ರೆಸ್ ನಾಯಕರಿಗೆ ಸಲಹೆ ನೀಡಿದ್ದಾರೆ. ಸುತ್ತೂರು ಮಠದ ಬಗ್ಗೆ ನಮಗೆ ಅಪಾರ ಗೌರವವಿದೆ. ಮೈಸೂರಿಗೆ ಬಂದ ಸಂದರ್ಭದಲ್ಲಿ ಸುತ್ತೂರು ಶ್ರೀಗಳನ್ನು ಭೇಟಿ ಮಾಡಿ ಆಶೀರ್ವಾದ ಪಡೆಯುವುದು ಅವರ ಬಗ್ಗೆ ನಮಗಿರುವ ಭಕ್ತಿ ಭಾವನೆ ತೋರಿಸುತ್ತದೆ ಎಂದರು. ಅದರಂತೆ ಇಂದು ಸುತ್ತೂರು ಶ್ರೀಗಳನ್ನು ಭೇಟಿ ಮಾಡಿ ಆಶೀರ್ವಾದ ಪಡೆದಿದ್ದೇನೆ. ಮಠಕ್ಕೆ ಸಾವಿರಾರು ಜನರು ಬಂದು ಶ್ರೀಗಳ ಆಶೀರ್ವಾದ ಪಡೆದಿದ್ದಾರೆ. ಅದರಂತೆ ನನ್ನ ಜೊತೆಗೆ ಬಹಳಷ್ಟು ಜನರು ಶ್ರೀಗಳ ಆಶೀರ್ವಾದ ಪಡೆದಿದ್ದಾರೆ. ಇದಕ್ಕೆ ವಿಶೇಷ ಮಹತ್ವ ನೀಡಬೇಕಿಲ್ಲ ಎಂದರು. ಆದರೆ ಸ್ವಾಮೀಜಿಗಳನ್ನು ನಾವು ಭೇಟಿ ಮಾಡಿದರೆ ತಪ್ಪು, ತಾವು ಭೇಟಿ ಮಾಡಿದರೆ ತಪ್ಪಿಲ್ಲ ಎಂಬಂತೆ ಕಾಂಗ್ರೆಸ್‌ನವರು ಮಾತನಾಡುತ್ತಾರೆ. ಏನೇ ಆದರೂ ಸ್ವಾಮೀಜಿಗಳನ್ನು ರಾಜಕೀಯಕ್ಕೆ ಎಳೆದು ತರಬಾರದು, ಮಠಗಳ ಹೆಸರನ್ನು ದುರ್ಬಳಕೆ ಮಾಡಿಕೊಳ್ಳಬಾರದು ಎಂದು ಸಲಹೆಯಿತ್ತರು.

ಖಜಾನೆ ಖಾಲಿಯೂ ಆಗಿಲ್ಲ, ಅಭಿವೃದ್ಧಿಯೂ ಕುಂಠಿತವಾಗಿಲ್ಲ

ಮೈಸೂರಿನಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಸ್ಪಷ್ಟನೆ

- ಕೇಂದ್ರ ಸರ್ಕಾರ ಖಾಲಿ ಚೆಂಬು ನೀಡಿದೆ
- ನೇಹಾ ಕೊಲೆ ಪ್ರಕರಣದಲ್ಲಿ ರಾಜಕಾರಣ ಸಲ್ಲದು
- ಪ್ರತಿಭಟನೆಗಳು ಸರ್ಕಾರದ ಮೇಲೆ ಪರಿಣಾಮ ಬೀರಲ್ಲ
- ಕಾನೂನು, ಸುವ್ಯವಸ್ಥೆ ಹದಗೆಟ್ಟಿಲ್ಲ



ಮೈಸೂರಿನ ರಾಮಕೃಷ್ಣನಗರದ ತಮ್ಮ ನಿವಾಸದಲ್ಲಿ ಶನಿವಾರ ಪತ್ರಕರ್ತರ ಜೊತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಮಾತನಾಡಿದರು.

ಮೈಸೂರು, ಏ.20 (ಬಿಎಲ್‌ಯು)–ಕರ್ನಾಟಕ ಸರ್ಕಾರದ ಖಜಾನೆ ಖಾಲಿಯೂ ಆಗಿಲ್ಲ, ಅಭಿವೃದ್ಧಿಯೂ ಕುಂಠಿತವಾಗಿಲ್ಲ, ಗ್ಯಾರಂಟಿ ಯೋಜನೆಗಳು ಕೂಡ ಯಶಸ್ವಿಯಾಗಿ ಅನುಷ್ಠಾನಗೊಳ್ಳುತ್ತಿವೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಸ್ಪಷ್ಟಪಡಿಸಿದ್ದಾರೆ.

ಮೈಸೂರಿನ ರಾಮಕೃಷ್ಣನಗರದ ತಮ್ಮ ನಿವಾಸದಲ್ಲಿ ಪತ್ರಕರ್ತರ ಜೊತೆ ಮಾತನಾಡಿದ ಅವರು, ರಾಜ್ಯದ ಖಜಾನೆ ಖಾಲಿಯಾಗಿದ್ದು, ಪ್ರಧಾನಿ ನರೇಂದ್ರ ಮೋದಿ ಬಳಿ ಖಾಲಿ ಚೆಂಬು ಹಿಡಿದು ಸಿದ್ದರಾಮಯ್ಯ ಭಿಕ್ಷೆ ಬೇಡುತ್ತಿದ್ದಾರೆ ಎಂಬಂತೆ ಜಾಹಿರಾತು ಬಿಂಬಿಸಿದೆ. ಇದು ಖಜಾನೆ ಖಾಲಿಯಾಗಿರುವುದರ ಸಂಕೇತ ಎಂಬ ಮಾಜಿ ಸಿಎಂ ಹೆಚ್.ಡಿ.ಕುಮಾರಸ್ವಾಮಿ ಲೇವಡಿಗೆ ಸಿದ್ದರಾಮಯ್ಯ ಹೀಗೆ ತಿರುಗೇಟು ನೀಡಿದರು.

ರಾಜ್ಯದಲ್ಲಿ ಅಭಿವೃದ್ಧಿಯ ಜೊತೆಗೆ ಪಂಚ ಗ್ಯಾರಂಟಿ ಯೋಜನೆಗಳು ಅನುಷ್ಠಾನಗೊಂಡಿವೆ. ಈ ಮೂಲಕ ಅಭಿವೃದ್ಧಿ ನಮ್ಮ ಧ್ಯೇಯ ಎಂಬುವುದನ್ನು ತೋರಿಸಿದ್ದೇವೆ ಎಂದರು. ಕರ್ನಾಟಕಕ್ಕೆ ನೀಡಬೇಕಾದ ಅನುದಾನ ಕೊಟ್ಟಿಲ್ಲ, ಚುನಾವಣಾ ಪೂರ್ವದಲ್ಲಿ ನೀಡಿದ ಯಾವುದೇ ಭರವಸೆ ಈಡೇರಿಸಿಲ್ಲ. ಇದರಿಂದ ರಾಜ್ಯದ ಜನರಿಗೆ ಖಾಲಿ ಚೆಂಬು ನೀಡಿದ್ದಾರೆ ಎಂಬುದನ್ನು ಜನರಿಗೆ ಮನದಟ್ಟು ಮಾಡಲು ಖಾಲಿ ಚೆಂಬಿನ ಜಾಹೀರಾತು ನೀಡಿದ್ದೇವೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಸ್ಪಷ್ಟನೆ ನೀಡಿದರು.

ಸ್ವಿಸ್ ಬ್ಯಾಂಕ್‌ನಲ್ಲಿರುವ ಕಪ್ಪು ಹಣ ತಂದು ದೇಶದ ಪ್ರತಿಯೊಬ್ಬ ಪ್ರಜೆಗೂ 15 ಲಕ್ಷ ನೀಡುತ್ತೇವೆ, 2 ಕೋಟಿ ಉದ್ಯೋಗ ಸೃಷ್ಟಿಸುತ್ತೇವೆ, ರೈತರ ಆದಾಯ ದ್ವಿಗುಣ ಮಾಡುತ್ತೇವೆ, ಅಗತ್ಯ ವಸ್ತುಗಳ ಬೆಲೆ ಇಳಿಕೆ ಮಾಡುತ್ತೇವೆ, ಅಚ್ಛೇ ದಿನ್ ಬರುತ್ತೆ ಎಂಬುವುದು ಸೇರಿದಂತೆ ಹಲವು ಭರವಸೆಗಳನ್ನು ಪ್ರಧಾನಮಂತ್ರಿ ನರೇಂದ್ರ ಮೋದಿ ನೀಡಿದ್ದರು. ಆದರೆ ಈ ತನಕ ಯಾವ ಆಶ್ವಾಸನೆಯನ್ನು ಈಡೇರಿಸಲಿಲ್ಲ. ಇದರಿಂದ ಖಾಲಿ ಚೆಂಬು ನೀಡಿದ್ದಾರೆ ಎಂದು ಜನರಿಗೆ ತಿಳಿಸಲು ಚೆಂಬು ಜಾಹೀರಾತು ನೀಡಿದ್ದೇವೆ ಎಂದು ವಿವರಿಸಿದರು.

ಹುಬ್ಬಳ್ಳಿಯ ನೇಹಾ ಹಿರೇಮಠ್ ಪ್ರಕರಣವನ್ನು ಬಿಜೆಪಿ ಹಾಗೂ ಜೆಡಿಎಸ್ ರಾಜಕೀಯ ಲಾಭಕ್ಕೆ ಬಳಸಿಕೊಳ್ಳುತ್ತಿದೆ. ನೇಹಾ ಕೊಲೆಯನ್ನು ನಾನು ತೀವ್ರವಾಗಿ ಖಂಡಿಸುತ್ತೇನೆ. ಕೊಲೆಗಾರನನ್ನು ಈಗಾಗಲೇ ಬಂಧಿಸಿದ್ದು, ಗಂಭೀರವಾದ ತನಿಖೆ ನಡೆಸಲಾಗುತ್ತಿದೆ. ಈ ಮೂಲಕ ಕೊಲೆಗಾರನಿಗೆ ಕಠಿಣ ಶಿಕ್ಷೆ ಕೊಡಿಸಲು ಪ್ರಯತ್ನಿಸುತ್ತೇವೆ. ಆದರೆ ಈ ಪ್ರಕರಣ ಲವ್ ಜಿಹಾದ್ ಅಲ್ಲ ಎಂದು ಸಿದ್ದರಾಮಯ್ಯ ಸ್ಪಷ್ಟಪಡಿಸಿದರು.

ಕೆಲವು ಅಪರಾಧ ಕೃತ್ಯಗಳು ನಡೆಯುತ್ತಿರುವ ಕಾರಣ ರಾಜ್ಯದಲ್ಲಿ ಕಾನೂನು ಮತ್ತು ಸುವ್ಯವಸ್ಥೆ ಹದಗೆಟ್ಟಿದೆ ಎಂಬ ತೀರ್ಮಾನಕ್ಕೆ ಬರುವುದು ಸರಿಯಲ್ಲ. ಕರ್ನಾಟಕದಲ್ಲಿರುವಷ್ಟು ಶಾಂತಿ ಬೇರೆ ಯಾವ ರಾಜ್ಯದಲ್ಲಿಯೂ ಇಲ್ಲ. ಬೇರೆ ಸರ್ಕಾರದ ಅವಧಿಯಲ್ಲಿಯೂ ಕೂಡ ಅಪರಾಧ ಕೃತ್ಯಗಳು ನಡೆದಿದೆ. ಹಾಗಾದರೆ ಅಂದು ಕಾನೂನು ಮತ್ತು ಸುವ್ಯವಸ್ಥೆ ಹದಗೆಟ್ಟಿತ್ತೆ ಎಂದು ಪ್ರಶ್ನಿಸಿದರು. ಒಬ್ಬರ ಸಾವನ್ನು ರಾಜಕೀಯಕ್ಕಾಗಿ ಬಳಸಿಕೊಳ್ಳುವುದು ಖಂಡನೀಯ. ಇಂತಹ ವಿಚಾರಗಳನ್ನು ಮುಂದಿಟ್ಟು ರಾಜ್ಯದಲ್ಲಿ ಪ್ರತಿಭಟನೆಗಳು ನಡೆಯುತ್ತಿದ್ದರೂ ಇದು ಸರ್ಕಾರದ ಮೇಲೆ ಯಾವುದೇ ರೀತಿ ಪರಿಣಾಮ ಬೀರುವುದಿಲ್ಲ ಎಂದು ಸಿದ್ದರಾಮಯ್ಯ ಹೇಳಿದರು.

ಮೋದಿ ಅಲೆ ಇಲ್ಲ, ಬಿಜೆಪಿ ಸರ್ಕಾರದ ಆಡಳಿತ ವಿರೋಧಿ ಅಲೆ ಇದೆ

ಕರ್ನಾಟಕದಲ್ಲಿ ಮಾತ್ರವಲ್ಲದೆ ಇಡೀ ದೇಶದಲ್ಲಿ ಮೋದಿ ಅಲೆ ಇಲ್ಲ.ಆದರೆ ಆಡಳಿತ ವಿರೋಧಿ ಅಲೆ ಇದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಟೀಕಿಸಿದರು.

ಬಿಜೆಪಿ ಅಭ್ಯರ್ಥಿಗಳು ಮೋದಿ ಹೆಸರಿನಲ್ಲಿ ಮತ ಕೇಳುತ್ತಿದ್ದಾರೆ. ಮೋದಿ ಹೆಸರನ್ನೆ ಅವಲಂಬಿಸಿ ಮತಯಾಚಿಸುತ್ತಿದ್ದಾರೆ. ಆದರೆ ರಾಜ್ಯದಲ್ಲಿ ಮಾತ್ರವಲ್ಲದೆ ದೇಶದಲ್ಲೆ ಮೋದಿ ಅಲೆ ಇಲ್ಲ ಎಂದು ಆರೋಪಿಸಿದರು.

ಕಳೆದ ಹತ್ತು ವರ್ಷದ ಬಿಜೆಪಿ ಸರ್ಕಾರದ ವೈಫಲ್ಯಗಳಿಂದ ಆಡಳಿತ ವಿರೋಧಿ ಅಲೆ ಇದೆ. ಆದರೆ ಬಿಜೆಪಿಯವರು ಇದನ್ನು ಮರೆಮಾಚಿ ಮೋದಿ ಅಲೆ ಇದೆ ಎಂದು ಪ್ರಚಾರ ಮಾಡುತ್ತಿದ್ದಾರೆ. ಆದರೆ ವಾಸ್ತವವಾಗಿ ಕಾಂಗ್ರೆಸ್ ಮತ್ತು ಇಂಡಿಯಾ ಪರವಾದ ವಾತಾವರಣವಿದೆ. ಇದು ಕಾಂಗ್ರೆಸ್ ಮೈತ್ರಿಕೂಟಗಳು ಹೆಚ್ಚು ಸ್ಥಾನ ಗೆಲ್ಲಲು ಅನುಕೂಲವಾಗಿದೆ ಎಂದು ಸಿದ್ದರಾಮಯ್ಯ ವಿಶ್ವಾಸ ವ್ಯಕ್ತಪಡಿಸಿದರು.

ಜೆಡಿಎಸ್ ಕಂಡರೆ ನಮಗೆ ಭಯವಿಲ್ಲ, ನಮ್ಮನ್ನು ಕಂಡರೆ ಜೆಡಿಎಸ್‌ಗೆ ಭಯವಿದೆ. ನಮ್ಮನ್ನು ಎದುರಿಸಲಾಗದೆ ಜೆಡಿಎಸ್ ಹಾಗೂ ಬಿಜೆಪಿ ಮೈತ್ರಿ ಮಾಡಿಕೊಂಡು ನಮ್ಮ ವಿರುದ್ಧ ಹೋರಾಟಕ್ಕಿಳಿದಿದ್ದಾರೆ. ಆದರೆ ನಾವು ಸ್ವತಂತ್ರವಾಗಿ ಅವರ ವಿರುದ್ಧ ಸಮರ್ಥವಾಗಿ ಹೋರಾಟ ಮಾಡುತ್ತಿದ್ದೇವೆ. ಇದರಿಂದ ನಮ್ಮನ್ನು ಕಂಡರೆ ಅವರಿಗೆ ಭಯವೇ ಹೊರತು, ಅವರನ್ನು ಕಂಡರೆ ನಮಗೆ ಭಯವಿಲ್ಲ ಎಂದು ಸಿದ್ದರಾಮಯ್ಯ ಟಾಂಗ್ ನೀಡಿದರು. ಕುಮಾರಸ್ವಾಮಿ ಕೋಮುವಾದಿಗಳ ಜೊತೆ ಸೇರಿದ್ದಾರೆ. ಜ್ಯಾತ್ಯತೀತತೆಯಿಂದ ಹೊರ ಬಂದಿರುವ ಕಾರಣ ಜೆಡಿಎಸ್ ಪಕ್ಷವನ್ನೆ ರದ್ದು ಮಾಡಬೇಕು ಎಂದು ಸಿದ್ದರಾಮಯ್ಯ ಆಗ್ರಹಿಸಿದರು.

ಯದುವೀರ್ ಒಡೆಯರ್ ಗೆಲುವು ನಿಶ್ಚಿತ



ಮೈಸೂರು,ಏ.20–ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಯದುವೀರ ಒಡೆಯರ್ ಪರ 39ನೇ ವಾರ್ಡಿನ 142, 143ನೇ ಬೂತಿನಲ್ಲಿ ಕಾರ್ಯಕರ್ತರೊಂದಿಗೆ ಮನೆ ಮನೆಗೆ ಕರಪತ್ರವನ್ನು ವಿತರಿಸಿ, ಬಿರುಸಿನ ಮತಯಾಚನೆ ಮಾಡಲಾಯಿತು. ಬಿಜೆಪಿ ಮೈಸೂರು ನಗರ ಯುವ ಮೋರ್ಚಾ ಪ್ರಧಾನ ಕಾರ್ಯದರ್ಶಿ ಡಿ.ಲೋಹಿತ್, ಬೂತ್ ಅಧ್ಯಕ್ಷ ದರ್ಶನ್, ಮುಖಂಡರಾದ ಜಯಂತ್, ರೇವಣ್ಣ, ನಿಖಿಲ್ ಆನಂದ್, ಗಣೇಶ್ ಮೂರ್ತಿ ಮತ್ತಿತರರಿದ್ದರು.



ಮೈಸೂರಿನ ಒಂಟಿಕೊಪ್ಪಲಲ್ಲಿ ಮೈಸೂರು–ಕೊಡಗು ಲೋಕಸಭಾ ಕ್ಷೇತ್ರ ಅಭ್ಯರ್ಥಿ ಎಂ.ಲಕ್ಷ್ಮಣ್ ಪರ ಚಾಮರಾಜ ಕ್ಷೇತ್ರದ ಇಂದಿರಾಗಾಂಧಿ ಬ್ಲಾಕ್ ಅಧ್ಯಕ್ಷ ರವಿ ಮಂಚೇಗೌಡನಕೊಪ್ಪಲು ನೇತೃತ್ವದಲ್ಲಿ ಮನೆ ಮನೆಗೆ ಭಿತ್ತಿಪತ್ರಗಳನ್ನು ಹಂಚಲಾಯಿತು. ಈ ವೇಳೆ ಒಂಟಿಕೊಪ್ಪಲ್ ಯಜಮಾನರಾದ ಪೈಲ್ವಾನ್ ಚಿಕ್ಕಪುಟ್ಟಿ, ಒಕ್ಕಲಿಗರ ಸಂಘದ ನಿರ್ದೇಶಕ ಗುರು, ಫೋಟೋಸ್ ಪ್ರಚಾರ ಸಮಿತಿ ಅಧ್ಯಕ್ಷ ಜಗದೀಶ್, ರಾಜೇಶ್ವರಿ, ಫೋಟೋ ಸ್ವಾಮಿ, ಮರಲಿಂಗಣ್ಣ, ಮೈಸೂರು ಕೋ–ಆಪರೇಟಿವ್ ಬ್ಯಾಂಕ್ ನಿರ್ದೇಶಕ ಯೋಗೇಶ್, ಪಾಲಿಕೆ ಮಾಜಿ ಸದಸ್ಯ ರಮೇಶ್, ವಾರ್ಡ್ ಅಧ್ಯಕ್ಷ ಕುಮಾರ, ಕೇಬಲ್ ಮಹೇಶ್, ಪ್ರಧಾನ ಕಾರ್ಯದರ್ಶಿ ರಾಮಚಂದ್ರ, ಹಿರಿಯ ಮುಖಂಡ ಬಿ.ಕೆ.ಪ್ರಕಾಶ್, ನಗರ ಪ್ರಧಾನ ಕಾರ್ಯದರ್ಶಿ ಭಾಸ್ಕರಗೌಡ ಇನ್ನಿತರರು ಉಪಸ್ಥಿತರಿದ್ದರು.



ಮೈಸೂರು–ಕೊಡಗು ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಯದುವೀರ್ ಪರ ಮೈಸೂರು ನ್ಯಾಯಾಲಯದಲ್ಲಿ ಪ್ರಚಾರ ನಡೆಸಲು ಆಗಮಿಸಿದ ಮಾಜಿ ಸಚಿವ ಸುರೇಶ್ ಕುಮಾರ್ ಅವರನ್ನು ಜೆಡಿಎಸ್ ರಾಜ್ಯ ವಕ್ತಾರ, ವಕೀಲ ಎನ್.ಆರ್.ರವಿಚಂದ್ರೇಗೌಡ ಸ್ವಾಗತಿಸಿದರು. ಜೆಡಿಎಸ್ ರಾಜ್ಯ ಕಾನೂನು ಘಟಕದ ಅಧ್ಯಕ್ಷ ರಂಗನಾಥ, ಜಿಲ್ಲಾ ಕಾನೂನು ಘಟಕದ ಅಧ್ಯಕ್ಷ ಗೋಪಾಲೇಗೌಡ, ನಗರ ಕಾನೂನು ಘಟಕದ ಅಧ್ಯಕ್ಷ ಪಾಲಾಕ್ಷ, ನಗರ ಕಾನೂನು ಘಟಕದ ಕಾರ್ಯಾಧ್ಯಕ್ಷ ಕುಮಾರ, ವಕೀಲ ಜವರೇಗೌಡ ಉಪಸ್ಥಿತರಿದ್ದರು.



ಮೈಸೂರು ತಾಲೂಕು ವರುಣ ಹೋಬಳಿಯಲ್ಲಿ ಚಾಮರಾಜನಗರ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಸುನೀಲ್‌ಬೋಸ್ ಪರ ಪುಟ್ಟೇಗೌಡನಹುಂಡಿಯಲ್ಲಿ ಕೆಪಿಸಿಸಿ ಕಾರ್ಯದರ್ಶಿ ವರುಣ ಮಹೇಶ್ ಬಿರುಸಿನ ಮತಯಾಚನೆ ನಡೆಸಿದರು. ಈ ಸಂದರ್ಭದಲ್ಲಿ ಬಿಳಿಗೆರೆ ಗ್ರಾ.ಪಂ ಮಾಜಿ ಅಧ್ಯಕ್ಷ ಕುಪ್ಪರವಳ್ಳಿ ಚಂದ್ರು, ಜಿಲ್ಲಾ ಕಾಂಗ್ರೆಸ್ ಸದಸ್ಯ ರತ್ನ ಶೇಖರ್, ಮೈಸೂರು ಜಿಲ್ಲಾ ಅರ್ಚಕರ ಸಂಘದ ಉಪಾಧ್ಯಕ್ಷ ಜೀಮರಳ್ಳಿ ಗುರುಸ್ವಾಮಿ, ವರುಣ 43ನೇ ವಾರ್ಡ್‌ನ ಬೂತ್ ಅಧ್ಯಕ್ಷ ಮಲ್ಲಿಕಾರ್ಜುನ್ ಮತ್ತಿತರರು ಹಾಜರಿದ್ದರು.




ಚಾಮುಂಡೇಶ್ವರಿ ಕ್ಷೇತ್ರದ ವಾರ್ಡ್ ನಂ.44ರಲ್ಲಿ ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಎಂ.ಲಕ್ಷ್ಮಣ್ ಪರ ಪ್ರಚಾರ ನಡೆಸಲಾಯಿತು. ಮಾಜಿ ಮೇಯರ್ ಟಿ.ಬಿ.ಚಿಕ್ಕಣ್ಣ, ಪುಷ್ಪಲತಾ ಚಿಕ್ಕಣ್ಣ, ಮೋದಾಮಣಿ, ಹೇಮಾವತಿ, ರಘು, ನಗರ ಕಾಂಗ್ರೆಸ್ ಸಮಿತಿ ಹಿಂದುಳಿದ ವರ್ಗದ ಅಧ್ಯಕ್ಷ ಎನ್.ಆರ್.ನಾಗೇಶ್, ಚಿಕ್ಕಣ್ಣ, ಮಹೇಶ್, ನಾಗರಾಜ್, ರಾಜು, ಮಹೇಶ್ ಮಡಿವಾಳ ಈ ವೇಳೆ ಉಪಸ್ಥಿತರಿದ್ದರು.

ನೆಲ್ಲೂರ್ ಶೆಡ್, ರಾಜೀವ್ ಗಾಂಧಿ ಕಾಲೋನಿ, ಅರುಂಧತಿ ಕಾಲೋನಿ, ಬುದ್ಧನಗರದಲ್ಲಿ ಎಂ.ಕೆ.ಸೋಮಶೇಖರ್ ಮತಯಾಚನೆ

ಮೈಸೂರು, ಏ.20– ಕೃಷ್ಣರಾಜ ವಿಧಾನಸಭಾ ಕ್ಷೇತ್ರದ ವಾರ್ಡ್ ನಂ.60ರ ಸಿಲ್ಕ್ ಫ್ಯಾಕ್ಟರಿ, ನೆಲ್ಲೂರ್ ಶೆಡ್, ರಾಜೀವ್ ಗಾಂಧಿ ಕಾಲೋನಿ, ಅರುಂಧತಿ ಕಾಲೋನಿ, ಬುದ್ಧನಗರ ಬಡಾವಣೆಯಲ್ಲಿ ಕೃಷ್ಣರಾಜ ವಿಧಾನಸಭಾ ಕ್ಷೇತ್ರದ ಮಾಜಿ ಶಾಸಕ ಎಂ.ಕೆ.ಸೋಮಶೇಖರ್ ಕಾಂಗ್ರೆಸ್ ಪಕ್ಷದ ಅಭ್ಯರ್ಥಿ ಎಂ.ಲಕ್ಷ್ಮಣ ಪರವಾಗಿ ಭರ್ಜರಿ ಮತಯಾಚನೆ ಕೈಗೊಂಡರು.

ಮಾಜಿ ಮೇಯರ್ ನಾರಾಯಣ್, ದೇವರಾಜ ಅರಸು ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಶ್ರೀಧರ್, ಪಾಲಿಕೆ ಸದಸ್ಯರಾದ ಪಲ್ಲವಿ ಬೇಗಂ, ಶಿವಣ್ಣ, ಆರ್.ಹೆಚ್. ಕುಮಾರ್, ಆರ್.ದಾಸು, ಆರ್ಟಿಸ್ಟ್ ನಾಗರಾಜು, ನರಸಿಂಹ, ಹನುಮಯ್ಯ ಶ್ರೀನಿವಾಸ, ಮಂಜು, ನಾಗರತ್ನ ಮಂಜುನಾಥ್ ಮತ್ತಿತರರು ಉಪಸ್ಥಿತರಿದ್ದರು.



ನಂತರ ಮಾತನಾಡಿದ ಸೋಮಶೇಖರ್, ಇವತ್ತಿನ ದಿವಸ ನಮ್ಮ ಮುಂದೆ ಬಂದಿರುವಂತಹ ಚುನಾವಣೆ ಸಂವಿಧಾನ ಮತ್ತು ಕೋಮುವಾದದ ನಡುವಿನ ಚುನಾವಣೆ. ಕಾಂಗ್ರೆಸ್ ಪಕ್ಷ ಪ್ರಜಾಪ್ರಭುತ್ವ ಮತ್ತು ಸಂವಿಧಾನದ ಆಶಯಗಳಲ್ಲಿ ನಂಬಿಕೆ ಇಟ್ಟಿರುವಂತಹ ಪಕ್ಷ. ಶೋಷಿತರು, ದಲಿತರು, ಹಿಂದುಳಿದವರು, ಅಲ್ಪಸಂಖ್ಯಾತರು ಅಷ್ಟೇ ಅಲ್ಲದೇ ಎಲ್ಲಾ ಜಾತಿ ಧರ್ಮಗಳನ್ನು ಒಂದೇ ರೀತಿ ಕಾಣುವ ಪಕ್ಷ.ಆದರೆ ಬಿಜೆಪಿ ಕೇವಲ ಉಳ್ಳವರ ಶ್ರೀಮಂತರ ಕಾರ್ಪೋರೇಟ್ ಸಂಸ್ಥೆಗಳನ್ನು ರಕ್ಷಿಸುವ ಪಕ್ಷ. ಆದ್ದರಿಂದ ಇವತ್ತಿನ ಸನ್ನಿವೇಶದಲ್ಲಿ ಡಾ.ಬಿ.ಆರ್. ಅಂಬೇಡ್ಕರ್ ಕೊಟ್ಟಂತಹ ಸಂವಿಧಾನವನ್ನು ನಾವು ರಕ್ಷಿಸಿಕೊಳ್ಳಬೇಕಾದ ಅನಿವಾರ್ಯತೆ ಮುಂದಿದೆ. ಚುನಾವಣೆ ದಿನ ಮತದಾನವನ್ನೇ ಪೂಜೆ ಎಂದು ತಿಳಿದು ಮತಕೇಂದ್ರವನ್ನೇ ದೇವಸ್ಥಾನ ಎಂದು ಭಾವಿಸಿ ತಪ್ಪದೇ ಕಾಂಗ್ರೆಸ್ ಪಕ್ಷದ ಅಭ್ಯರ್ಥಿಗೆ ಮತ ನೀಡಬೇಕು ಎಂದರು.

ಸಿದ್ದರಾಮಯ್ಯ ಇಡೀ ರಾಜಕೀಯ ಇತಿಹಾಸದಲ್ಲಿ ಯಾರೂ ಮಾಡಿರದಂತಹ ಜನಪರ ಯೋಜನೆಗಳನ್ನು ರೂಪಿಸಿದ್ದಾರೆ. ಗ್ಯಾರಂಟಿ ಯೋಜನೆಗಳು ಪ್ರತೀ ಕುಟುಂಬದ ಆರ್ಥಿಕ ಶಕ್ತಿಯನ್ನು ಬಲಪಡಿಸಿದೆ. ಪೌರಕಾರ್ಮಿಕರ ಶ್ರೇಯೋಭಿವೃದ್ಧಿಗಾಗಿ ಸಫಾಯಿ ಕರ್ಮಚಾರಿ ಅಭಿವೃದ್ಧಿ ನಿಗಮದ ರಚನೆ ಮಾಡಿದ ಕೀರ್ತಿ ಸಿದ್ದರಾಮಯ್ಯನವರಿಗೆ ಸಲ್ಲುತ್ತದೆ. ಸಾವಿರಾರು ಗುತ್ತಿಗೆ ಆಧಾರದ ಮೇಲೆ ಕರ್ತವ್ಯ ನಿರ್ವಹಿಸುತ್ತಿದ್ದಂತಹ ಪೌರಕಾರ್ಮಿಕರ ಗುತ್ತಿಗೆ ಪದ್ಧತಿಯ ಕೆಲಸವನ್ನು ರದ್ದು ಮಾಡಿ ಸ್ಥಳೀಯ ಸಂಸ್ಥೆಗಳ ಮೂಲಕವೇ ನೇರ ವೇತನವನ್ನು ನೀಡುವಂತೆ ಆದೇಶ ಮಾಡಿದ್ದಾರೆ. ಪೌರಕಾರ್ಮಿಕರಿಗೆ ಬೆಳಗಿನ ಉಪಾಹಾರ ನೀಡುವಂತೆ ಆದೇಶ ಮಾಡಿದರು.

7000 ಇದ್ದ ಕನಿಷ್ಠ ವೇತನವನ್ನು 17,000ಕ್ಕೆ ಹೆಚ್ಚಳ ಮಾಡಿದ ಕೀರ್ತಿ ಸಿದ್ದರಾಮಯ್ಯಗೆ ಸಲ್ಲಬೇಕು. ಬಜೆಟ್‌ನಲ್ಲಿ 25000 ಗುತ್ತಿಗೆ ಪೌರಕಾರ್ಮಿಕರನ್ನು ಕಾಯಂ ಮಾಡುವುದಾಗಿ ಘೋಷಿಸಿದ್ದಾರೆ.

ಎಸ್‌ಸಿಪಿ ಮತ್ತು ಟಿಎಸ್‌ಪಿಯಲ್ಲಿ ಮೀಸಲಿಟ್ಟಿರುವ ಹಣವನ್ನು ಪೌರಕಾರ್ಮಿಕರ ಕಲ್ಯಾಣಕ್ಕಾಗಿ ಶೇ.21.1 ಮೀಸಲಿಡಲು ಆದೇಶ ಮಾಡಿದ್ದಾರೆ. ಪೌರಕಾರ್ಮಿಕರು ಪ್ರತೀ ವರ್ಷವೂ ವಿದೇಶ ಪ್ರವಾಸ ಮಾಡಲು ಅವಕಾಶ ಕಲ್ಪಿಸಲಾಗಿದೆ. ಪೌರಕಾರ್ಮಿಕರ ವಸತಿ ಗೃಹಗಳ ನಿರ್ಮಾಣಕ್ಕಾಗಿ ಪ್ರತಿ ಮನೆಗೆ 7.5 ಲಕ್ಷ ಸಹಾಯ ಧನ ಸರ್ಕಾರದಿಂದ ಮಂಜೂರು ಮಾಡಿ ಅನುಷ್ಠಾನ ಮಾಡಿದ್ದಾರೆ. ಮೈಸೂರಿನಲ್ಲಿ ಸಿದ್ದರಾಮಯ್ಯನವರು ಮುಖ್ಯಮಂತ್ರಿ ಆಗಿದ್ದಾಗ ಪೌರಕಾರ್ಮಿಕರಿಗೆ 520 ವಸತಿ ನಿರ್ಮಿಸಿ ಕೊಟ್ಟಿದ್ದಾರೆ. ಜೆ.ಪಿ.ನಗರದ ನವೋದಯ ಬಡಾವಣೆಯಲ್ಲಿ ನಾಲ್ಕು ಎಕರೆಯಲ್ಲಿ 246 ಮನೆ ಮಾಡಿ ಕೊಟ್ಟಿದ್ದಾರೆ. ಮಂಟಗಳ್ಳಿಯಲ್ಲಿ ಪೌರಕಾರ್ಮಿಕರಿಗೆ ಐದು ಎಕರೆ ಪ್ರದೇಶದಲ್ಲಿ 502 ಮನೆ ನಿರ್ಮಿಸಿ ಕೊಟ್ಟಿದ್ದಾರೆ. ಪೌರಕಾರ್ಮಿಕರ ಮಕ್ಕಳ ವಿದ್ಯಾಭ್ಯಾಸಕ್ಕೆ ಮತ್ತು ಆರೋಗ್ಯಕ್ಕೆ ಯೋಜನೆಗಳನ್ನು ರೂಪಿಸಿದ್ದಾರೆ. ಇಷ್ಟೆಲ್ಲಾ ಯೋಜನೆಗಳ ಜೊತೆಗೆ 5 ಗ್ಯಾರಂಟಿಗಳು ಸಹ ಲಭಿಸುತ್ತಿದೆ. ಆದ್ದರಿಂದ ಅದನ್ನೆಲ್ಲ ಮನಸ್ಸಲ್ಲಿ ಇಟ್ಟಿಕೊಂಡು ಸಿದ್ದರಾಮಯ್ಯನವರ ಕೈ ಬಲಪಡಿಸಿ ಬೇಕೆಂದರೆ ಎಂ.ಲಕ್ಷ್ಮಣ ಅವರನ್ನು ಗೆಲ್ಲಿಸಬೇಕು ಎಂದು ಮನವಿ ಮಾಡಿದರು.

ಮೈಸೂರು ಮಿತ್ರ

ವೆಂಕಟರಮಣೇಗೌಡ ಗೆಲುವು ಶತಸಿದ್ಧ

ಕೆ.ಆರ್.ಪೇಟೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಭವಿಷ್ಯ

ಕೆ.ಆರ್.ಪೇಟೆ,ಏ.20– ಮಂಡ್ಯ ಲೋಕಸಭಾ ಕ್ಷೇತ್ರದಲ್ಲಿ ಕಾಂಗ್ರೆಸ್ ಅಭ್ಯರ್ಥಿ ವೆಂಕಟರಮಣೇಗೌಡ ಅವರ ಗೆಲುವು ಶತಸಿದ್ಧ ಎಂದು ಸಿ.ಎಂ.ಸಿದ್ದರಾಮಯ್ಯ ಭವಿಷ್ಯ ನುಡಿದಿದ್ದಾರೆ. ಮಂಡ್ಯ ಲೋಕಸಭಾ ಅಭ್ಯರ್ಥಿ ವೆಂಕಟರಮಣೇಗೌಡ (ಸ್ಟಾರ್ ಚಂದ್ರು) ಅವರ ಪರವಾಗಿ ಪಟ್ಟಣದಲ್ಲಿ ನಡೆದ ಪ್ರಜಾಧ್ವನಿ–2 ಸಮಾವೇಶವನ್ನು ಉದ್ಘಾಟಿಸಿ ಮಾತನಾಡಿದ ಅವರು, ಕೆ.ಆರ್.ಪೇಟೆಯಲ್ಲಿ ಕಾಂಗ್ರೆಸ್ ಪಕ್ಷದ ಎಲ್ಲಾ ನಾಯಕರು ಒಮ್ಮನಸ್ಸಿನಿಂದ, ಒಗ್ಗಟ್ಟಿನಿಂದ ಕಾಂಗ್ರೆಸ್ ಗೆಲ್ಲಿಸಲು ಕೆಲಸ ಮಾಡುತ್ತಿದ್ದಾರೆ. ಹೀಗಾಗಿ ಈ ಕ್ಷೇತ್ರದಲ್ಲಿ ಕಾಂಗ್ರೆಸ್‌ಗೆ ಹೆಚ್ಚಿನ ಮತಗಳು ಬೀಳುವುದು ಖಚಿತ ಎಂದರು.ಕೆಂಪೇಗೌಡ ಜಯಂತಿ ಆರಂಭಿಸಿದ್ದು ನಾವು, ಕೆಂಪೇಗೌಡ ಅಭಿವೃದ್ಧಿ ಪ್ರಾಧಿಕಾರ ಮಾಡಿದ್ದು ನಾವು. ಅಂತಾರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಕೆಂಪೇಗೌಡರ ಹೆಸರಿಟ್ಟಿದ್ದು ನಾವು. ಕುಮಾರಸ್ವಾಮಿ ಮುಖ್ಯಮಂತ್ರಿ ಆಗಿ ಮಾಡಿದ್ದೇನು ಹೇಳಿ ಎಂದು ಪ್ರಶ್ನಿಸಿದರು.

ಪ್ರತಾಪ್ ಸಿಂಹ, ಸದಾನಂದಗೌಡರಿಗೆ ಟಿಕೆಟ್ ತಪ್ಪಿಸಿ ಒಕ್ಕಲಿಗರಿಗೆ ಅನ್ಯಾಯ ಮಾಡಿದ್ದು ಯಾರು ದೇವೇಗೌಡರೇ? ಎಂದು ಪ್ರಶ್ನಿಸಿದ ಮುಖ್ಯಮಂತ್ರಿಗಳು ಒಕ್ಕಲಿಗ ಸಮುದಾಯದ ನಾಯಕರಿಗೆ ಅತಿ ಹೆಚ್ಚು ಅನ್ಯಾಯ ಆಗಿರುವುದು ಬಿಜೆಪಿ, ಜೆಡಿಎಸ್‌ನಿಂದಲೇ ಎಂದು ವಿವರಿಸಿದರು.

ಕೆ.ಆರ್.ಪೇಟೆ ಕೃಷ್ಣ ಅವರು ಅತ್ಯಂತ ಸಜ್ಜನರು. ಜನಪರ ಕಾಳಜಿ ಇದ್ದವರು ಆಗಿದ್ದರು. ಇವರನ್ನು ಮಂತ್ರಿ ಮಾಡಬೇಕು ಎನ್ನುವ ಇಚ್ಛೆ ನಮಗೆಲ್ಲರಿಗೂ ಇತ್ತು ಆದರೆ, ಮಂತ್ರಿ ಮಾಡಲು ದೇವೇಗೌಡರು ಒಪ್ಪಲಿಲ್ಲ. ಆಗ ಸ್ಪೀಕರ್ ಆಗಲು ಸಲಹೆ ನೀಡಿದೆ ಎಂದು ಮತ್ತು ಮತ್ತು ಕೆ.ಆರ್.ಪೇಟೆ ಕೃಷ್ಣ ಅವರ ನಡುವಿನ ಒಡನಾಟವನ್ನು ಸ್ಮರಿಸಿದರು. ಮೋದಿಯವರಿಗೆ ಕರ್ನಾಟಕ ನೆನಪಾಗುವುದೇ ಚುನಾವಣೆ ಬಂದಾಗ ಬರಗಾಲ ಬಂದಾಗಲೂ ರಾಜ್ಯದ ಕಡೆ ತಲೆ ಹಾಕಲಿಲ್ಲ ಪ್ರವಾಹ ಬಂದಾಗ ರಾಜ್ಯದ ಕಡೆ ತಿರುಗಿಯೂ ನೋಡಲಿಲ್ಲ. ಚುನಾವಣೆ ಬಂತು ನೋಡಿ ಮೋದಿ ಓಡೋಡಿ ಬಂದಿದ್ದಾರೆ. ಮೋದಿಯವರನ್ನು ವಾಚಾಮಗೋಚರವಾಗಿ ಟೀಕಿಸುತ್ತಿದ್ದ ದೇವೇಗೌಡರು ಈಗ ಮೋದಿಗೂ ತಮಗೂ ಅವಿನಾಭಾವ ಸಂಬಂಧ ಇದೆ ಎನ್ನುತ್ತಿದ್ದಾರೆ. ಇವರಿಬ್ಬರ ನಡುವಿನ ಸಂಬಂಧ ಅಪ್ಪು ಚೆನ್ನಾಗಿದ್ದರೆ ಮೋದಿಯವರಿಂದ ರಾಜ್ಯಕ್ಕೆ ಆಗಿರುವ ಅನ್ಯಾಯವನ್ನು ದೇವೇಗೌಡರು ಸರಿಪಡಿಸಲಿ ನೋಡೋಣ. ಮೇಕೆದಾಟು ಯೋಜನೆಗೆ ಅನುಮತಿ ಕೊಡಿಸಲಿ ನೋಡೋಣ ಎಂದು ಸವಾಲು ಹಾಕಿದರು.

ರಾಜ್ಯದ ರೈತರಿಗೆ ಕೇಂದ್ರದಿಂದ ಇದುವರೆಗೂ ಒಂದೇ ಒಂದು ರೂಪಾಯಿ ಬರಗಾಲದ ಹಣ ಬಂದಿಲ್ಲ. ಅದು ನಮ್ಮ ರಾಜ್ಯದ ಪಾಲು. ನಮ್ಮ ಪಾಲನ್ನು ಕೊಡದೆ ಸತಾಯಿಸುತ್ತಿರುವ ಮೋದಿಯವರಿಗೆ ಹೇಳಿ ಈ ಹಣ ಕೊಡಿಸಲಿ ಎಂದು ಮತ್ತೊಂದು ಸವಾಲು ಹಾಕಿದರು.

ವೇದಿಕೆಯಲ್ಲಿ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಕಾಂಗ್ರೆಸ್ ಅಭ್ಯರ್ಥಿ ವೆಂಕಟರಮಣೇಗೌಡ, ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ, ಶಾಸಕರಾದ ಪಿ.ಎಂ.ನರೇಂದ್ರಸ್ವಾಮಿ, ಮಾಜಿ ಶಾಸಕರಾದ ಕೆ.ಬಿ.ಚಂದ್ರಶೇಖರ್, ಬಿ.ಪ್ರಕಾಶ್, ಬಿ.ಸೋಮಶೇಖರ್, ಮುಖಂಡರಾದ ವಿಜಯ್‌ರಾಮೇಗೌಡ, ಸುರೇಶ್, ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಸಿ.ಡಿ.ಗಂಗಾಧರ್ ಸೇರಿದಂತೆ ಹಲವು ಮಂದಿ ಭಾಗವಹಿಸಿದ್ದರು.



ಕೆಆರ್ ಪೇಟೆಯಲ್ಲಿ ನಡೆದ ಪ್ರಜಾಧ್ವನಿ–2 ಸಮಾವೇಶವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಉದ್ಘಾಟಿಸಿದರು. ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಉಸ್ತುವಾರಿ ಸಚಿವ ಚಲುವರಾಯಸ್ವಾಮಿ, ಅಭ್ಯರ್ಥಿ ವೆಂಕಟರಮಣೇಗೌಡ ಸೇರಿದಂತೆ ಹಲವರು ಉಪಸ್ಥಿತರಿದ್ದರು.

ಹೆಚ್ಚು ಮತ ತರದವರು ವೇದಿಕೆಗೆ, ನಮ್ಮ ಬಳಿಗೆ ಬರಬೇಡಿ...

ನಾನು 25–30 ವರ್ಷದಿಂದ ನಿಮ್ಮ ತಾಲೂಕಿಗೆ ಬರುತ್ತಿದ್ದೇನೆ. ಈ ಸಭೆ ಇಷ್ಟು ವರ್ಷಗಳ ದೊಡ್ಡಸಭೆಯಾಗಿದೆ. ಬೂತ್‌ವಾರು ಹೋಬಳಿವಾರು ಲೀಡರ್ ಹಂಚಿಕೆಯಾಗಿದ್ದು ವೇದಿಕೆಯಲ್ಲಿ ಇರುವವರು ಲೀಡರ್ ಅಲ್ಲಾ ಬೂತ್‌ನಲ್ಲಿ ಹೆಚ್ಚು ಮತ ತರುವವರು ಮಾತ್ರ ಲೀಡರ್. ಇಲ್ಲಾ ವೇದಿಕೆಗೆ, ನಮ್ಮ ಬಳಿಗೆ ಬರಬೇಡಿ ಎಂದು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ತಿಳಿಸಿದರು. ಮಂಡ್ಯ, ಹಾಸನ, ಬೆಂಗಳೂರು ಗ್ರಾಮಾಂತರ ರಾಜ್ಯಕ್ಕೆ ಹೊಸ ಹುರುಪು ತರುವ ಚುನಾವಣೆಗಳು. ಜೆಡಿಎಸ್‌ನವರೊಂದಿಗೆ ಯಾವುದೇ ನೆಂಟಸ್ತನ ಸಂಭಂದ ಬೇಡ. ಒಂಟಿಯಾಗಿ ರಾಜ್ಯದಲ್ಲಿ 135 ಸ್ಥಾನವನ್ನು ಗೆದ್ದು ಸರ್ಕಾರ ರಚನೆ ಮಾಡಿದ್ದೇವೆ. ಈ ಹಿಂದೆ ಕ್ಷೇತ್ರ 8 ಜೆಡಿಎಸ್ ಗೆದ್ದಾಗ ನಿಖಿಲ್ ಕುಮಾರಸ್ವಾಮಿ ಬೆಂಬಲಿಸಿದ್ದೇವು. ಕುಮಾರಸ್ವಾಮಿ ಮಗನನ್ನು ಮಂಡ್ಯ ಜನರು ಒಪ್ಪದೆ ಜನರು ಸೋಲಿಸಿದರು ಸುಮಲತ ಗೆದ್ದರು ಎಂದರು.

ನಿಖಿಲ್ ಕುಮಾರಸ್ವಾಮಿ ರೋಡ್ ಶೋ



ನಿಖಿಲ್ ಕುಮಾರಸ್ವಾಮಿ ಮಂಡ್ಯ ತಾಲೂಕಿನಲ್ಲಿ ಭರ್ಜರಿ ರೋಡ್ ಶೋ ನಡೆಸಿದರು

ಮಂಡ್ಯ,ಏ.20–ಗ್ರಾಮ ವಾಸ್ತವ್ಯದ ಮೂಲಕ ಜನಸಾಮಾನ್ಯರ ಸಮಸ್ಯೆಗಳನ್ನು ಬಗೆಹರಿಸಿದ, ನುಡಿದಂತೆ ರೈತರ ಸಾಲ ಮನ್ನಾ ಮಾಡಿದ ಹೆಚ್.ಡಿ.ಕುಮಾರಸ್ವಾಮಿ ಅವರನ್ನು ಮಂಡ್ಯ ಜಿಲ್ಲೆಯ ಜನತೆ ಕೈ ಹಿಡಿಯಬೇಕೆಂದು ರಾಜ್ಯ ಜೆಡಿಎಸ್ ಯುವ ಘಟಕದ ಅಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಮನವಿ ಮಾಡಿದರು.

ತಾಲೂಕಿನ ಹಳೇಬೂದನೂರು, ಹೊಸ ಬೂದನೂರು, ಶ್ರೀನಿವಾಸಪುರ, ಚಿಕ್ಕಮಂಡ್ಯ, ಸಾತನೂರು ಗ್ರಾಮಗಳಲ್ಲಿ ರೋಡ್ ಶೋ ನಡೆಸುವ ಮೂಲಕ ಮಂಡ್ಯ ಲೋಕಸಭಾ ಕ್ಷೇತ್ರದ ಅಭ್ಯರ್ಥಿ ಎಚ್.ಡಿ. ಕುಮಾರಸ್ವಾಮಿ ಅವರ ಪರ ಮತ ಯಾಚಿಸಿ, ಜಿಲ್ಲೆಯ ಅಭಿವೃದ್ಧಿ ಹಾಗೂ ಕಾವೇರಿ ಉಳಿವಿಗಾಗಿ ಕುಮಾರಣ್ಣನನ್ನು ಗೆಲ್ಲಿಸಿ ಎಂದರು.

ನಾಡಿನ ಜನರ ಜೀವ ನದಿ ಕಾವೇರಿ ನದಿಗೆ ಮೇಕೆದಾಟು ಅಣೆಕಟ್ಟು ಕಟ್ಟುತ್ತೇವೆ ಎಂದು ಕಳೆದ ವಿಧಾನಸಭಾ ಚುನಾವಣೆಯಲ್ಲಿ ಮೇಕೆದಾಟು ಅಣೆಕಟ್ಟು ಯೋಜನೆ ಬಗ್ಗೆ 'ನಮ್ಮ ನೀರು ನಮ್ಮ ಹಕ್ಕು' ಘೋಷವಾಕ್ಯ ಮೊಳಗಿಸಿದ್ದರು. ರಾಜ್ಯದ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರಿಗೆ ನಾಡಿನ ಜನರ ಮೇಲೆ ಕಿಂಚಿತ್ತು ಕಾಳಜಿ ಇದ್ದರೆ 'ಇಂಡಿಯ' ಮೈತ್ರಿಕೂಟದಲ್ಲಿರುವ ತಮಿಳುನಾಡಿನ ಮುಖ್ಯಮಂತ್ರಿ ಸ್ಟಾಲಿನ್ ಜೊತೆ ಮಾತನಾಡಿ ಮೇಕೆದಾಟು ಅಣೆಕಟ್ಟೆಯನ್ನ ಕಟ್ಟುವ ಮೂಲಕ ತಮ್ಮ ಬದ್ಧತೆ ತೋರಿಸಬೇಕಿದೆ, ಪೊಳ್ಳು ಹೋರಾಟ ಮಾಡುವುದಲ್ಲ ಎಂದು ಛೇಡಿಸಿದರು. ಈ ಸಂದರ್ಭದಲ್ಲಿ ಮನ್‌ಮುಲ್ ಮಾಜಿ ಅಧ್ಯಕ್ಷ ಬಿ.ಆರ್.ರಾಮಚಂದ್ರ ಉಪಾಧ್ಯಕ್ಷ ಎಂ.ಎಸ್.ರಘುನಂದನ್, ತಾಲ್ಲೂಕು ಜಾ.ದಳ ಅಧ್ಯಕ್ಷ ಬೂದನೂರು ಸ್ವಾಮಿ, ಬಿಜೆಪಿ ಮುಖಂಡ ಅಶೋಕ್ ಜಯರಾಮ್, ಅಮರಾವತಿ ಚಂದ್ರಶೇಖರ್, ಸಿ.ಅಶ್ವತ್ಥ್ ಇತರರಿದ್ದರು.

ಅಲ್ಪಸಂಖ್ಯಾತ ಮುಖಂಡರ ಮನೆಗೆ ಚಲುವರಾಯಸ್ವಾಮಿ ಭೇಟಿ



ಮಂಡ್ಯ,ಏ.19– ನಗರದ ಅಲ್ಪಸಂಖ್ಯಾತ ಮುಖಂಡರುಗಳ ನಿವಾಸಕ್ಕೆ ಭೇಟಿ ನೀಡಿದ ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ, ಮಂಡ್ಯ ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ವೆಂಕಟರಮಣೇಗೌಡ ಬೆಂಬಲಿಸುವಂತೆ ಮನವಿ ಮಾಡಿದರು.

ಗಾಂಧಿನಗರದಲ್ಲಿರುವ ಮುಡಾ ಮಾಜಿ ಅಧ್ಯಕ್ಷ ಹಾಗೂ ಕಾಂಗ್ರೆಸ್ ಮುಖಂಡ ಅಸಾದುಲ್ಲಾಖಾನ್ ಸೇರಿದಂತೆ ಪ್ರಮುಖ ಮುಖಂಡರುಗಳ ಮನೆಗಳಿಗೆ ಭೇಟಿ ನೀಡಿದ ಅವರು, ಕಾಂಗ್ರೆಸ್ ಅಭ್ಯರ್ಥಿಯನ್ನು ಗೆಲ್ಲಿಸುವಂತೆ ಎಲ್ಲಾ ರೀತಿಯಲ್ಲೂ ಅಲ್ಪಸಂಖ್ಯಾತ ಮತದಾರರನ್ನು ಸೆಳೆಯಬೇಕೆಂದು ಕೆಲ ಸಲಹೆಗಳನ್ನು ನೀಡಿದರು.

ಬಳಿಕ ಮಾತನಾಡಿದ ಚಲುವರಾಯಸ್ವಾಮಿ, ಈ ಹಿಂದಿನಿಂದಲೂ ಮಂಡ್ಯದಲ್ಲಿ ಅಲ್ಪಸಂಖ್ಯಾತರು ಕಾಂಗ್ರೆಸ್‌ನ್ನು ಬೆಂಬಲಿಸುತ್ತಾ ಬಂದಿದ್ದಾರೆ. ಈ ಬಾರಿಯೂ ಮತದಾರರು ಕಾಂಗ್ರೆಸ್ ಕೈಹಿಡಿಯಲಿದ್ದು, ಅಲ್ಪಸಂಖ್ಯಾತ ಮತವನ್ನು ಮತ್ತಷ್ಟು ಗಟ್ಟಿ ಮಾಡಿಕೊಳ್ಳುವ ಸಲುವಾಗಿ ಮುಖಂಡರುಗಳ ಮನೆಗಳಿಗೆ ಭೇಟಿ ಕೊಡುತ್ತಿದ್ದೇನೆ. ನೂರಕ್ಕೆ ನೂರರಷ್ಟು ಚಂದ್ರು ಈ ಚುನಾವಣೆಯಲ್ಲಿ ಗೆಲ್ಲಲಿದ್ದಾರೆ ಎಂದರು. ಮುಖಂಡ ಅಸಾದುಲ್ಲಾಖಾನ್ ಮಾತನಾಡಿದರು.



ಮಾಜಿ ಮುಖ್ಯಮಂತ್ರಿ ಎಚ್.ಡಿ.ಕುಮಾರಸ್ವಾಮಿ ತಮ್ಮ ನಿವಾಸಕ್ಕೆ ಭೇಟಿ ನೀಡಿದ್ದ ವೇಳೆ ಕಾಂಗ್ರೆಸ್ ಮುಖಂಡ ಪಾಲಹಳ್ಳಿ ಚಂದ್ರಶೇಖರ್ ತಮ್ಮ ಬೆಂಬಲಿಗರೊಂದಿಗೆ ಜೆಡಿಎಸ್‌ಗೆ ಸೇರ್ಪಡೆಯಾದರು. ಇದೇ ವೇಳೆ ಮಾಜಿ ಶಾಸಕ ರವೀಂದ್ರ ಶ್ರೀಕಂಠಯ್ಯ ಇದ್ದರು.

ಸ್ಟಾರ್ ಚಂದ್ರು ಗೆಲ್ಲಿಸಿ ನನ್ನ ಕೈ ಬಲಪಡಿಸಿ:ಡಿಕೆಶಿ



ಡಿ.ಕೆ.ಶಿವಕುಮಾರ್ ಮತಯಾಚನೆ ಮಾಡುತ್ತಿರುವುದು.

ಪಾಂಡವಪುರ:ಏ:20– ಜಿಲ್ಲೆಯ ಜನತೆ ಕಳೆದ ವಿಧಾನಸಭೆ ಚುನಾವಣೆಯಲ್ಲಿ ಆರು ಮಂದಿ ಶಾಸಕರನ್ನು ಗೆಲ್ಲಿಸಿ ಕೈಬಲಪಡಿಸಿದ್ದೀರಿ, ಈ ಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿಗೆ ಮತನೀಡುವ ಮೂಲಕ ನನ್ನ ಕೈಬಲಪಡಿಸಬೇಕು ಎಂದು ಡಿಸಿಎಂ ಡಿ.ಕೆ.ಶಿವಕುಮಾರ್ ಮನವಿ ಮಾಡಿದರು. ಲೋಕಸಭಾ ಚುನಾವಣೆ ಹಿನ್ನೆಲೆಯಲ್ಲಿ ಶನಿವಾರ ಸಂಜೆ ತಾಲೂಕಿನ ರೈಲ್ವೇ ನಿಲ್ದಾಣದಲ್ಲಿ ಕಾಂಗ್ರೆಸ್ ಅಭ್ಯರ್ಥಿ ವೆಂಕಟರಮಣೇಗೌಡ(ಸ್ಟಾರ್ ಚಂದ್ರು)ಪರ ಮತಯಾಚನೆ ಮಾಡಿ ಮಾತನಾಡಿದರು.

ಜೆಡಿಎಸ್ ಅಭ್ಯರ್ಥಿಯಾಗಿರುವ ಎಚ್.ಡಿ.ಕುಮಾರಸ್ವಾಮಿ ಅವರು ರಾಮನಗರ, ಚನ್ನಪಟ್ಟಣ ಕ್ಷೇತ್ರ ಬಿಟ್ಟು ಇದೀಗ ಮಂಡ್ಯ ಕ್ಷೇತ್ರಕ್ಕೆ ಬಂದು ಚುನಾವಣೆಯಲ್ಲಿ ಸ್ಪರ್ಧೆ ಮಾಡಿದ್ದಾರೆ. ಮಂಡ್ಯ ಜಿಲ್ಲೆಯ ಜನತೆ ಸ್ವಾಭಿಮಾನಿಗಳಿದ್ದಾರೆ. ಇಲ್ಲಿಯವರೆಗೂ ಮಂಡ್ಯದವರೆ ಕ್ಷೇತ್ರದಿಂದ ಆಯ್ಕೆಯಾಗಿದ್ದಾರೆ. ಹೊರಗಿನಿಂದ ಬಂದ ಅಭ್ಯರ್ಥಿಗಳಿಗೆ ಮತ ನೀಡಬೇಡಿ ಎಂದು ಮನವಿ ಮಾಡಿದರು. ಎಚ್.ಡಿ.ಕುಮಾರಸ್ವಾಮಿ ಅವರನ್ನು ಕಾಂಗ್ರೆಸ್ ಪಕ್ಷ ಮುಖ್ಯಮಂತ್ರಿ ಮಾಡಿದೆವು. ಆದರೆ, ಅವರಿಂದ ಸರಕಾರ ಉಳಿಸಿಕೊಳ್ಳಲು ಸಾಧ್ಯವಾಗಲಿಲ್ಲ. ಕುಮಾರಸ್ವಾಮಿ ಅವರು ಅಧಿಕಾರದಲ್ಲಿ ಇದ್ದಂತಹ ಸಂದರ್ಭದಲ್ಲಿ ಮಂಡ್ಯ ಜಿಲ್ಲೆಗೆ ಕೊಟ್ಟಿರುವಂತಹ ಕೊಡುಗೆ ಏನು? ಇದ್ರೆ ತೋರಿಸಿ? ಎಂದು ಸವಾಲು ಹಾಕಿದ ಅವರು ನಮ್ಮ ಸರಕಾರ ಕೇವಲ ಐದು ವರ್ಷವಲ್ಲ ಮುಂದಿನ 10 ವರ್ಷ ರಾಜ್ಯದಲ್ಲಿ ಅಧಿಕಾರದಲ್ಲಿರುತ್ತೇವೆ ಎಂದರು. ಶಾಸಕರಾದ ದರ್ಶನ್ ಪುಟ್ಟಣ್ಣಯ್ಯ, ಎಂಪಿ ನರೇಂದ್ರಸ್ವಾಮಿ, ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಎಚ್.ತ್ಯಾಗರಾಜು, ಕಾಂಗ್ರೆಸ್ ಜಿಲ್ಲಾಧ್ಯಕ್ಷ ಸಿ.ಡಿ.ಗಂಗಾಧರ್, ಬಿ.ರೇವಣ್ಣ, ಎ.ಎಲ್.ಕೆಂಪೂಗೌಡ, ಎಚ್.ಕೃಷ್ಣೇಗೌಡ, ಕೆನ್ನಾಳು ನಾಗರಾಜು, ಕೆ.ಎಸ್.ದಯಾನಂದ್, ಸೇರಿದಂತೆ ಅನೇಕ ಗಣ್ಯರು ಹಾಜರಿದ್ದರು.

ಒಂದನೇ ಪುಟದಿಂದ

ವಿವಿಧ ಗ್ರಾಮಗಳಲ್ಲಿ ರೋಡ್ ಶೋ ಮೂಲಕ ಮತಯಾಚನೆ

ಕೋಟೆಹುಂಡಿ, ಹೂಟಗಳ್ಳಿ, ಕೂರ್ಗಳ್ಳಿ ಸೇರಿದಂತೆ ಹಲವು ಗ್ರಾಮಗಳಲ್ಲಿ ಯದುವೀರ್ ರೋಡ್ ಶೋ ನಡೆಸಿದರು. ಅಷ್ಟೆ ಅಲ್ಲದೆ ಕಮರಹಳ್ಳಿ, ದೊಡ್ಡಮಾರಗೌಡನಹಳ್ಳಿ, ಶೆಟ್ಟನಾಯಕನ ಹಳ್ಳಿ, ಕುಮಾರಬೀಡು, ಕೆ.ಹೆಮ್ಮನಹಳ್ಳಿ, ಸಾಹುಕಾರಹುಂಡಿ, ಮೂಗನಹುಂಡಿ, ಎಡಹಳ್ಳಿ, ಗೂರೂರು, ಮಹದೇವಪುರ, ಹಿನಕಲ್, ಬೆಳ ವಾಡಿಯಲ್ಲೂ ಯದುವೀರ್ ಮತ ಕೇಳಿದರು. ಯದುವೀರ್ ಗ್ರಾಮಗಳಿಗೆ ಭೇಟಿ ನೀಡಿದ ಸಂದರ್ಭ ದಲ್ಲಿ ಜನರು ಹೃದಯಸ್ಪರ್ಶಿ ಸ್ವಾಗತ ಕೋರಿ ದರು. ಪುಷ್ಪವೃಷ್ಟಿಗೈಯ್ದು, ಪಟಾಕಿ ಸಿಡಿಸಿ ತಮ್ಮ ಗ್ರಾಮಗಳಿಗೆ ಬರಮಾಡಿಕೊಂಡರು. ಈ ವೇಳೆ ಯದುವೀರ್‌ಗೆ ಮೈಸೂರು ಪೇಟ ತೊಡಿಸಿ, ಶಾಲು ಹಾಕಿ ಸನ್ಮಾನಿಸಿದರು. ಮಹಿಳೆಯರು ಯದು ವೀರ್‌ಗೆ ಆರತಿ ಬೆಳಗಿ ಜಯಶಾಲಿಯಾಗುವಂತೆ ಶುಭ ಹಾರೈಸಿದರು.

ಚಾಮುಂಡೇಶ್ವರಿ ಕ್ಷೇತ್ರದ ಶಾಸಕ ಜಿ.ಟಿ.ದೇವೇಗೌಡರಿಗೆ ಕ್ಷೇತ್ರದಲ್ಲಿ ಅಪಾರ ಬೆಂಬಲವಿರುವ ಕಾರಣ ಯದುವೀರ್ ಬಂದ ಸಂದರ್ಭದಲ್ಲಿ ಜಿ.ಟಿ.ದೇವೇಗೌಡರ ಸಾವಿರಾರು ಬೆಂಬಲಿಗರು ಪ್ರಚಾರದಲ್ಲಿ ಜೊತೆಯಾದರು. ಈ ವೇಳೆ ಜಿ.ಟಿ.ದೇವೇಗೌಡರಂತೆ ಯದುವೀರ್ ಅವರನ್ನು ಬೆಂಬಲಿಸುವುದಾಗಿ ಅಭಯ ನೀಡಿದರು. ತಾವು ಸಂಸದರಾಗಿ ಆಯ್ಕೆಯಾದರೆ ಅರಮನೆ ಬಿಟ್ಟು ಬರುವುದಿಲ್ಲ ಎಂಬ ಕಾಂಗ್ರೆಸ್ಸಿಗರ ಆರೋಪಕ್ಕೆ ಈ ವೇಳೆ ತಿರುಗೇಟು ನೀಡಿದ ಯದುವೀರ್, ನಮ್ಮ ಪೂರ್ವಜರು ಅರಮನೆಯಲ್ಲಿ ಹುಟ್ಟಿದರೂ ಜನಸಾಮಾನ್ಯರ ನಡುವೆ ಇದ್ದು ಅವರಿಗೆ ನೆರವಾಗುತ್ತಿದ್ದರು. ಅದರಂತೆ ನಾನು ಕೂಡ ನಿಮ್ಮ ನಡುವೆ ಇರುತ್ತೇನೆ. ನಿಮ್ಮ ಸೇವೆ ಮಾಡುವುದು ನನ್ನ ಪಾಲಿನ ಸೌಭಾಗ್ಯ ಎಂದು ಭಾವಿಸಿದ್ದೇನೆ. ಯಾರೂ ಕೂಡ ಯಾವುದೇ ಅಪಪ್ರಚಾರಕ್ಕೆ ಕಿವಿಕೊಡಬೇಡದೆ ನನ್ನನ್ನು ಬೆಂಬಲಿಸಿ ಎಂದು ಮನವಿ ಮಾಡಿದರು.

ಕಳೆದ ಹತ್ತು ವರ್ಷದ ಅವಧಿಯಲ್ಲಿ ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಸರ್ಕಾರ ಮೈಸೂರು–ಕೊಡಗು ಲೋಕಸಭಾ ಕ್ಷೇತ್ರಕ್ಕೆ ಬಹಳಷ್ಟು ಕೊಡುಗೆ ನೀಡಿದೆ. ಬೆಂಗಳೂರು–ಮೈಸೂರು ಎಕ್ಸ್‌ಪ್ರೆಸ್ ಹೈವೆ, ಜಲಜೀವನ್ ಮಿಷನ್, ಕುಡಿಯುವ ನೀರು ಪೂರೈಕೆ, ಜನ್ ಔಷಧ್ ಕೇಂದ್ರ ಸೇರಿದಂತೆ ಬಹಳಷ್ಟು ಯೋಜನೆಗಳನ್ನು ನೀಡಿದೆ. ಮೈಸೂರಿಗೆ ಬಹಳಷ್ಟು ರೈಲುಗಳ ಸಂಪರ್ಕ ಕೂಡ ನೀಡಿದ್ದು, ಮತ್ತೆ ಕೇಂದ್ರದಲ್ಲಿ ಬಿಜೆಪಿ ನೇತೃತ್ವದ ಸರ್ಕಾರ ಅಧಿಕಾರಕ್ಕೆ ಬಂದರೆ ಮತ್ತಷ್ಟು ಅಭಿವೃದ್ಧಿ ಕಾರ್ಯ ಸಾಕಾರಗೊಳ್ಳಲಿದೆ ಎಂದು ಭರವಸೆ ನೀಡಿದರು. ಮೈತ್ರಿ ಅಭ್ಯರ್ಥಿಯನ್ನು ಗೆಲ್ಲಿಸುವ ಮೂಲಕ ನಾವು ಮತ್ತೆ ಮೋದಿ ಕೈ ಬಲಪಡಿಸಬೇಕಿದೆ. ಈ ನಿಟ್ಟಿನಲ್ಲಿ ಶ್ರೇಷ್ಠ ಭಾರತ ನಿರ್ಮಾಣಕ್ಕೆ ಎಲ್ಲರೂ ನಮ್ಮನ್ನು ಬೆಂಬಲಿಸಿ ಎಂದು ಯದುವೀರ್ ಮನವಿ ಮಾಡಿದರು.

ಬಿಜೆಪಿ ಮುಖಂಡ ಕವೀಶ್‌ಗೌಡ ಸೇರಿದಂತೆ ಹಲವು ನಾಯಕರು ಪ್ರಚಾರದಲ್ಲಿ ಯದುವೀರ್‌ಗೆ ಸಾಥ್ ನೀಡಿದರು.

ಎಲ್ಲೂ ಕಾಂಗ್ರೆಸ್‌ಗೆ ಶಕ್ತಿ ಇಲ್ಲ: ಜಿಟಿಡಿ

ದೇಶದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ ಮತ್ತಷ್ಟು ಅಧ್ವಾನವಾಗುತ್ತದೆ ಎಂದು ಜಿ.ಟಿ.ದೇವೇಗೌಡರು ಎಚ್ಚರಿಸಿದರು. ಇಡೀ ದೇಶಕ್ಕೆ ನರೇಂದ್ರ ಮೋದಿ ಅವರೇ ಸಮರ್ಥ ನಾಯಕ. ಮೋದಿ ದೇಶವನ್ನು ರಕ್ಷಣೆ ಮಾಡುತ್ತಾರೆ. ಇದರಿಂದ ಪ್ರತಿಯೊಬ್ಬರಿಗೂ ಮೋದಿ ಬೇಕಾಗಿದೆ. ಆದ ಕಾರಣ ಪ್ರತಿಯೊಬ್ಬರು ಯದುವೀರ್ ಬೆಂಬಲಿಸಿ ಬಿಜೆಪಿ ಹಾಗೂ ನರೇಂದ್ರ ಮೋದಿ ಕೈ ಬಲಪಡಿಸಿ ಎಂದು ಮನವಿ ಮಾಡಿದರು. ಕರ್ನಾಟಕದಲ್ಲಿ ಜೆಡಿಎಸ್ ಹಾಗೂ ಬಿಜೆಪಿ ಅಭ್ಯರ್ಥಿ ಗಳು ಗೆಲುವು ಸಾಧಿಸಬೇಕು ಎಂದು ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ರಾಜ್ಯಾದ್ಯಂತ ಪ್ರವಾಸ ಮಾಡುತ್ತಿದ್ದಾರೆ. ಮೈಸೂರು, ಚಾಮರಾಜನಗರ ಸೇರಿದಂತೆ ಬಹಳಷ್ಟು ಕ್ಷೇತ್ರದಲ್ಲಿ ಪ್ರಚಾರ ಮಾಡುವ ವೇಳೆ ನಾನೇ ಅಭ್ಯರ್ಥಿ ಎಂದು ಭಾವಿಸಿ ಬಿಜೆಪಿ ಬೆಂಬಲಿಸಿ ಎಂದು ಕೋರಿದ್ದಾರೆ. ಆದ ಕಾರಣ ಎಲ್ಲರೂ ದೇಶಕ್ಕಾಗಿ ಬಿಜೆಪಿ ಹಾಗೂ ಜೆಡಿಎಸ್ ಮೈತ್ರಿ ಕೂಟ ಗೆಲ್ಲಿಸಿ ಎಂದು ಜಿ.ಟಿ.ದೇವೇಗೌಡರು ಮತದಾರರಲ್ಲಿ ಕೋರಿದರು.

ಅಕ್ಷಯ ಪಾತ್ರೆ ಮಾಡಿದ ಮೋದಿ

ಮೂಲಕ ಬಡವರು, ಪರಿಶಿಷ್ಟ ಜಾತಿ, ಪಂಗಡ, ಹಿಂದುಳಿದವರು, ಸಣ್ಣ ಸಮಾಜದವರನ್ನು ಮೇಲೆತ್ತಿದ ಮಹಾನುಭಾವ ನರೇಂದ್ರ ಮೋದಿ. ಇಂತಹವರ ಬಗ್ಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಮಾತನಾಡುತ್ತಿದ್ದಾರೆ. ಇವರಿಗೆ ನಾಚಿಕೆ ಆಗಬೇಕು. ಇದು ಕ್ಷುಲ್ಲಕ ರಾಜಕಾರಣ ಎಂದು ಕಿಡಿಕಾರಿದರು.

ತಾಲೂಕಿನ ಚೊಕ್ಕಹಳ್ಳಿ ಬಳಿ ಶನಿವಾರ ನಡೆದ ವಿಜಯ ಸಂಕಲ್ಪ ಸಮಾವೇಶದಲ್ಲಿ ಮಾತನಾಡಿದ ಅವರು, ಕೇಂದ್ರ ಸರ್ಕಾರ ರಾಜ್ಯಕ್ಕೆ ಬರೀ ಚೊಂಬು ನೀಡಿತು ಎಂದು ಮುಖ್ಯಮಂತ್ರಿ ಜಾಹೀರಾತು ನೀಡಿದ್ದಾರೆ. ಆದರೆ, ಮೋದಿ ಕೈಗೆ ಚೊಂಬು ನೀಡಿದ್ದು ಯುಪಿಎ ನೇತೃತ್ವದ ಕಾಂಗ್ರೆಸ್ ಸರ್ಕಾರ ಎಂದರು. 2004ರಿಂದ 2014ರ ವರೆಗೆ ಮನಮೋಹನ್ ಸಿಂಗ್ ಪ್ರಧಾನಿಯಾಗಿದ್ದರು. ಸೋನಿಯಾ ಗಾಂಧಿ ಯುಪಿಎ ಅಧ್ಯಕ್ಷೆ ಆಗಿದ್ದರು. ಆಗ '2ಜಿ' ತರಂಗಾಂತರ ಹಗರಣ, ಕಲ್ಲಿದ್ದಲು ಹಗರಣ, ಕಾಮನ್‌ವೆಲ್ತ್ ಕ್ರೀಡಾಕೂಟದ ಹಗರಣ ಸೇರಿದಂತೆ ಹಲವು ಹಗರಣಗಳ ಮೂಲಕ ಕಾಂಗ್ರೆಸ್ ವ್ಯಾಪಕ ಭ್ರಷ್ಟಾಚಾರ ನಡೆಸಿತು ಎಂದು ತರಾಟೆಗೆ ತೆಗೆದುಕೊಂಡರು.

ಇದೇ ವೇಳೆ ಬೇಸಿಗೆ ಬವಣೆ ಬಗ್ಗೆ ಮಾತನಾಡಿದ ಗೌಡರು, ಬೆಂಗಳೂರಿನಲ್ಲಿಂದು ಒಂದು ಟ್ಯಾಂಕರ್ ನೀರಿಗೆ 2,500 ರೂ. ತಗೋತಿದ್ದಾರೆ. ಈ ನಡುವೆ ರಾಜ್ಯದಲ್ಲಿ 5 ಗ್ಯಾರಂಟಿ ಕೊಟ್ಟಿರುವ ಕಾಂಗ್ರೆಸ್, ದೇಶವಾಸಿಗಳಿಗೆ 25 ಗ್ಯಾರಂಟಿ ಕೊಟ್ಟಿದೆ. 10 ವರ್ಷಗಳಿಂದ ಸರಿಯಾದ ವಿಪಕ್ಷ ನಾಯಕ ಸ್ಥಾನ ಪಡೆಯಲು ಯೋಗ್ಯತೆ ಇಲ್ಲದ ಕಾಂಗ್ರೆಸ್, 400 ಸ್ಥಾನ ಗೆಲ್ಲಲು ಮನಸ್ಸು ಮಾಡಿರುವ ಮೋದಿ ಅವರನ್ನು ಸೋಲಿಸಬೇಕು ಅಂದುಕೊಂಡಿದೆ. ಅದ್ದರಿಂದ ನಮ್ಮ ಕಾಣಿಕೆಯಾಗಿ ಕೋಲಾರ, ಚಿಕ್ಕಬಳ್ಳಾಪುರ ಸೇರಿ ರಾಜ್ಯದ 28 ಕ್ಷೇತ್ರಗಳಲ್ಲಿಯೂ ಮೈತ್ರಿ (ಬಿಜೆಪಿ-ಜೆಡಿಎಸ್) ಅಭ್ಯರ್ಥಿಗಳನ್ನು ಗೆಲ್ಲಿಸಿ ದೆಹಲಿಗೆ ಕಳುಹಿಸೋಣ. ಆಮೇಲೆ ಕಾವೇರಿ, ಕೃಷ್ಣ ನೀರು ಕೊಡಿ ಅಂತ ಮೋದಿ ಅವರನ್ನು ಕೇಳೋಣ. ಅದ್ದರಿಂದ ಚಿಕ್ಕಬಳ್ಳಾಪುರ ಹಾಗೂ ಕೋಲಾರದಲ್ಲಿ ಮೈತ್ರಿ ಅಭ್ಯರ್ಥಿಯನ್ನು ಗೆಲ್ಲಿಸುವಂತೆ ತಮ್ಮಲ್ಲಿ ಕೇಳುತ್ತೇನೆ ಎಂದು ಮನವಿ ಮಾಡಿದರು.

ಸರ್ಕಾರ ಪತನ ಬರೀ ಹಗಲುಗನಸು...

ಮಾಡುವುದರಲ್ಲಿ ಬಿಜೆಪಿ ಯವರು ಮತ್ತು ಹೆಚ್.ಡಿ.ದೇವೇಗೌಡರ ಕುಟುಂಬ ನಿಸ್ಸೀಮರಾಗಿದ್ದು ಈಗ ರಾಜ್ಯದಲ್ಲಿ ಸತ್ಯ ಮತ್ತು ಸುಳ್ಳಿನ ನಡುವೆ ರಾಜಕೀಯ ಸಮರ ನಡೆಯುತ್ತಿದ್ದು ಅಂತಿಮವಾಗಿ ಸತ್ಯವೇ ಗೆಲ್ಲಬೇಕು ಹಾಗಾಗಬೇಕಾದರೆ ನೀವೆಲ್ಲರೂ ಲೋಕಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷವನ್ನು ಬೆಂಬಲಿಸಬೇಕೆಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಮನವಿ ಮಾಡಿದರು.

ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಮಾತನಾಡಿ, ಎರಡು ಬಾರಿ ಮುಖ್ಯಮಂತ್ರಿಯಾಗಿದ್ದಾಗ ರಾಜ್ಯದ ಅಭಿವೃದ್ಧಿಗೆ ಯಾವುದೇ ಯೋಜನೆಗಳನ್ನು ಹಮ್ಮಿಕೊಳ್ಳದೆ ಈಗ ಪುಕ್ಸಟ್ಟೆ ಮಾತನಾಡುತ್ತಿರುವ ಮಾಜಿ ಸಿಎಂ ಹೆಚ್.ಡಿ.ಕುಮಾರಸ್ವಾಮಿ ಅವಕಾಶ ವಾದಿ ರಾಜಕಾರಣಿ ಎಂದು ವಾಗ್ದಾಳಿ ನಡೆಸಿದರು. ಏಕವಚನದಲ್ಲಿಯೇ ಮಾಜಿ ಮುಖ್ಯಮಂತ್ರಿಗಳನ್ನು ತರಾಟೆಗೆ ತೆಗೆದುಕೊಂಡರಲ್ಲದೆ, ನೀನು ಅಧಿಕಾರದಲ್ಲಿದ್ದಾಗ ಜನರಿಗೆ ಮಾಡಿದ ಶಾಶ್ವತ ಕೆಲಸಗಳನ್ನು ತಿಳಿಸಬೇಕು ಎಂದರು.

ನನ್ನ ಜಮೀನಿನಲ್ಲಿ ಬಂಡೆಕಲ್ಲು ಹೊಡೆಯಲು ನಿನಗೆ ಅರ್ಜಿ ಹಾಕಿಕೊಳ್ಳಬೇಕಾ ಎಂದು ಪ್ರಶ್ನಿಸಿದ ಅವರು, ಲೋಕಸಭಾ ಚುನಾವಣೆ ನಡೆದ ನಂತರ ಮೈಸೂರಿನಲ್ಲಿ ಒಂದು ವೇದಿಕೆ ನಿರ್ಮಿಸಿ ಅಲ್ಲಿ ನಾವು ಮತ್ತು ನೀವು ಮಾಡಿರುವ ಕೆಲಸಗಳ ಬಗ್ಗೆ ಜನರಿಗೆ ತಿಳಿಸೋಣ ಇದಕ್ಕೆ ನೀವು ಸಿದ್ಧರಿದ್ದೀರಾ? ಎಂದು ಸವಾಲು ಹಾಕಿದರು.

ಮಂಡ್ಯ ಲೋಕಸಭಾ ಕ್ಷೇತ್ರದ ಆಕಾಂಕ್ಷಿಗಳಾಗಿದ್ದ ಡಿ.ಸಿ.ತಮ್ಮಣ್ಣ ಮತ್ತು ಸಿ.ಎಸ್.ಪುಟ್ಟರಾಜು ಅವರಿಗೆ ಚಾಕಲೇಟ್ ನೀಡಿರುವ ಕುಮಾರಸ್ವಾಮಿ ತಾವೇ ಅಭ್ಯರ್ಥಿಯಾಗಿದ್ದು ಅವರು ಯಾವುದೇ ಕಾರಣಕ್ಕೂ ಗೆಲ್ಲುವುದಿಲ್ಲ. ಮುಂದೆ ಚನ್ನಪಟ್ಟಣದಲ್ಲಿಯೇ ರಾಜಕಾರಣ ಮಾಡಿಕೊಂಡಿರಿ ಎಂದು ಜನರು ತಿರಸ್ಕಾರ ಮಾಡುತ್ತಾರೆಂದು ತಿಳಿಸಿದರು.

ಕಾರ್ಯಕ್ರಮದ ಉದ್ದಕ್ಕೂ ಹೆಚ್.ಡಿ. ಕುಮಾರಸ್ವಾಮಿ ವಿರುದ್ಧ ಏಕವಚನದಲ್ಲಿಯೇ ಮಾತಿನ ಪ್ರಹಾರ ನಡೆಸಿದ ಡಿ.ಕೆ.ಶಿವಕುಮಾರ್, ಹಾಸನ ಮತ್ತು ರಾಮ ನಗರ ಲೋಕಸಭಾ ಕ್ಷೇತ್ರಗಳನ್ನು ಬಿಟ್ಟು ಮಂಡ್ಯ ಕ್ಷೇತ್ರಕ್ಕೆ ಏಕೆ ಬಂದಿದ್ದೀಯಾ ಎಂದು ಜರಿದರು. ಮಂಡ್ಯ ಜಿಲ್ಲಾ ಉಸ್ತುವಾರಿ ಸಚಿವ ಎನ್.ಚೆಲುವ ರಾಯಸ್ವಾಮಿ ಮಾತನಾಡಿ, ಹೆಚ್.ಡಿ.ಕುಮಾರ ಸ್ವಾಮಿ ಸಂಸದರಾದರೆ ವರ್ಷಕ್ಕೊಮ್ಮೆಯೂ ಕ್ಷೇತ್ರದತ್ತ ತಲೆ ಹಾಕುವುದಿಲ್ಲ. ಆದರೆ ನಮ್ಮ ಪಕ್ಷದ ಅಭ್ಯರ್ಥಿ ವೆಂಕಟರಮಣೇಗೌಡ (ಸ್ಟಾರ್ ಚಂದ್ರು) ಜಯಶಾಲಿಯಾದರೆ ಶಾಸಕ ಡಿ.ರವಿಶಂಕರ್ ಅವರ ಜೊತೆ ಕೈ ಜೋಡಿಸಿ ಅಭಿವೃದ್ಧಿ ಕೆಲಸ ಮಾಡುತ್ತಾರೆ. ಇದನ್ನು ಯೋಚಿಸಿ ಮತದಾರರು ನಮ್ಮ ಬೆಂಬಲಕ್ಕೆ ನಿಲ್ಲಬೇಕು ಎಂದು ಕೋರಿಕೊಂಡರು. ಶಾಸಕ ಡಿ.ರವಿಶಂಕರ್, ಮಂಡ್ಯ ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ವೆಂಕಟರಮಣೇಗೌಡ (ಸ್ಟಾರ್‌ಚಂದ್ರು), ಮೈಸೂರು ಗ್ರಾಮಾಂತರ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಡಾ.ಬಿ.ಜೆ. ವಿಜಯ್‌ಕುಮಾರ್ ಮಾತನಾಡಿದರು. ಕೆಪಿಸಿಸಿ ಕಾರ್ಯಕಾರಿಣಿ ಸದಸ್ಯ ದೊಡ್ಡ ಸ್ವಾಮೇಗೌಡ, ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಮಳವಳ್ಳಿ ಶಿವಣ್ಣ, ಕಾರ್ಯದರ್ಶಿ ಮಂಚನಹಳ್ಳಿ ರಾಘು, ತಾಪಂ ಮಾಜಿ ಅಧ್ಯಕ್ಷರಾದ ಹಾಡ್ಯ ಮಹದೇವ ಸ್ವಾಮಿ, ಹೆಚ್.ಟಿ.ಮಂಜುನಾಥ್, ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷ ಸಿ.ಪಿ.ರಮೇಶ್ ಕುಮಾರ್, ರಾಜ್ಯ ಕಾಂಗ್ರೆಸ್ ಎಸ್‌ಟಿ ವಿಭಾಗದ ಉಪಾಧ್ಯಕ್ಷ ಕಲ್ಲಹಳ್ಳಿ ಶ್ರೀನಿವಾಸ್, ಜಿಪಂ ಮಾಜಿ ಸದಸ್ಯ ಸಿದ್ದಪ್ಪ, ರಾಜಯ್ಯ, ತಾಲೂಕು ಕುರುಬರ ಸಂಘದ ಅಧ್ಯಕ್ಷ ಜೆ.ಶಿವಣ್ಣ ಮತ್ತಿತರರು ಹಾಜರಿದ್ದರು.

ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ ರಾಜ್ಯದಲ್ಲಿ ಬರ ಫಿಕ್ಸ್...!

ಮದ ನೆತ್ತಿಗೇರುತ್ತದೆ ಎಂದು ಕಿಡಿಕಾರಿದರು.

ನಾನು ಸಿಎಂ ಆಗಿದ್ದ ವೇಳೆ ಅನೇಕ ರೈತಪರ ಯೋಜನೆ ಜಾರಿಗೆ ತಂದಿದ್ದೆ. ರೈತರ 25 ಸಾವಿರ ಕೋಟಿ ರೂ. ಸಾಲ ಮನ್ನಾ ಮಾಡಿದ್ದೆ. ಸ್ವಾತಂತ್ರ್ಯ ಬಂದ 60 ವರ್ಷದಲ್ಲಿ ನಾನು ಮುಖ್ಯಮಂತ್ರಿಯಾಗುವವರೆಗೆ ರಾಜ್ಯದಲ್ಲಿ ಕೇವಲ 169 ಪ್ರಥಮ ದರ್ಜೆ ಕಾಲೇಜುಗಳಿದ್ದವು. ನಾನು ಅಧಿಕಾರಕ್ಕೆ ಬಂದ 20 ತಿಂಗಳಲ್ಲಿ 189 ಕಾಲೇಜು ಆರಂಭಿಸಿದೆ. ಆ ಮೂಲಕ 56 ಸಾವಿರ ಕುಟುಂಬಗಳಿಗೆ ಶಿಕ್ಷಣ ಇಲಾಖೆಯಲ್ಲಿ ಉದ್ಯೋಗ ದೊರಕಿಸಿಕೊಟ್ಟೆ ಎಂದರು.

ಅವರ ಸರ್ಟಿಫಿಕೇಟ್ ಬೇಕಿಲ್ಲ: ಇವತ್ತು ಕನಕಪುರದ ಮಹಾನುಭವ ನನ್ನ ಬಗ್ಗೆ ಏಕವಚನದಲ್ಲಿ ಮಾತನಾಡಿದ್ದಾರೆ. ಆತ ಬಹಳ ಕೆಟ್ಟದಾಗಿ ಮಾತನಾಡಿದ್ದಾರೆ. ಅದನ್ನು ಜನತೆಗೆ ಬಿಡುತ್ತೇನೆ. ನನಗೆ ಬೇಕಾಗಿರುವುದು ಅವರ ಸರ್ಟಿಫಿಕೇಟ್ ಅಲ್ಲ ನನಗೆ ಬೇಕಿರುವುದು ನನ್ನ ರೈತ ಕುಟುಂಬದ ತಂದೆ ತಾಯಂದಿರ ಸರ್ಟಿಫಿಕೇಟ್ ಎಂದು ಡಿ.ಕೆ.ಶಿವಕುಮಾರ್ ವಿರುದ್ಧ ವಾಗ್ದಾಳಿ ನಡೆಸಿದರು.

ನಮ್ಮ ನೀರು ತಮಿಳುನಾಡಿನ ಹಕ್ಕು: ಕಾಂಗ್ರೆಸ್‌ನವರು ಕನಕಪುರದ ಸಂಗಮದಿಂದ 'ನಮ್ಮ ನೀರು ನಮ್ಮ ಹಕ್ಕು' ಘೋಷಣೆಯೊಂದಿಗೆ ಬೆಂಗಳೂರಿಗೆ ಪಾದಯಾತ್ರೆ ಮಾಡಿದ್ದರು. ಈಗ ಸರ್ಕಾರ ಅವರದ್ದೇ ಇದೆಯಲ್ಲ. ಪೆನ್ನು ಪೇಪರ್ ಅವರದ್ದೇ ಅಲ್ಲವೆ? ಸಹಿ ಹಾಕಲು ಅಧಿಕಾರ ಕೊಟ್ಟಿದ್ದೀರಲ್ಲ. ಈಗ ಸೈನ್ ಎಲ್ಲಿಗೆ ಹಾಕ್ತಾವ್ರೆ, ನಮ್ಮ ನೀರು ತಮಿಳುನಾಡಿನ ಹಕ್ಕು ಎಂಬಂತೆ ತಮಿಳುನಾಡಿಗೆ ಯಥೇಚ್ಛವಾಗಿ ನೀರು ಹರಿಸುತ್ತಿದ್ದಾರೆ. ಮಂಡ್ಯದಲ್ಲಿ ನಾಲೆಗೆ ನೀರು ಬಿಡದೆ ಈ ವರ್ಷ ಕೃಷಿ ಚಟುವಟಿಕೆ ಮಾಡಬೇಡಿ ಎನ್ನುತ್ತಿದ್ದಾರೆ ಎಂದು ಆರೋಪಿಸಿದರು.

ಪಿಕ್ ಪಾಕೆಟ್ ಸರ್ಕಾರ ಎಚ್ಚರವಿರಲಿ: ರಾಜ್ಯ ಸರ್ಕಾರ ಮಾತೆತ್ತಿದರೆ ನುಡಿದಂತೆ ನಡೆದಿದ್ದೇವೆ. 5 ಗ್ಯಾರಂಟಿಗಳನ್ನು ಜಾರಿಗೊಳಿಸಿದ್ದೇವೆ. ಮಹಿಳೆಯರಿಗೆ 2 ಸಾವಿರ ಕೊಡುತ್ತಿದ್ದೇವೆ ಎಂದು ಹೇಳುತ್ತಿದ್ದಾರೆ. ಅವರು ಕೊಡುವ 2 ಸಾವಿರ ರೂ.ಗಳಲ್ಲಿ ನಿಮ್ಮ ಕುಟುಂಬದ ಸಂಪೂರ್ಣ ಸಮಸ್ಯೆಗಳಿಗೆ ಪರಿಹಾರ ದೊರಕುತ್ತಾ ಎಂದು ಪ್ರಶ್ನಿಸಿದ ಕುಮಾರಸ್ವಾಮಿ, ಅಷ್ಟಕ್ಕೂ ಅವರು ಅವರ ಮನೆಯಿಂದ 2 ಸಾವಿರ ಕೊಡುತ್ತಿಲ್ಲ. ಮದ್ಯದ ದರ ಹೆಚ್ಚು ಮಾಡಿ ಮನೆ ಯಜಮಾನನ ಪಾಕೆಟ್‌ನಿಂದ 5 ಸಾವಿರ ಕಿತ್ತು 2 ಸಾವಿರ ರೂಗಳನ್ನು ಮನೆ ಒಡತಿಗೆ ನೀಡುತ್ತಿದ್ದಾರೆ. ಅದಕ್ಕೆ ಇದು ಪಿಕ್ ಪಾಕೆಟ್ ಸರ್ಕಾರ ಎಚ್ಚರದಿಂದಿರಬೇಕು ಎಂದರು.

1.05 ಲಕ್ಷ ಕೋಟಿ ಸಾಲ: ಸರ್ಕಾರ ಜಾರಿಗೆ ತಂದಿರುವ ಯೋಜನೆಗಳಿಗೆ ಒಂದು ಲಕ್ಷದ ಐದು ಸಾವಿರ ಕೋಟಿ ರೂ. ಸಾಲ ಮಾಡಿದೆ. 5 ವರ್ಷದ ಯೋಜನೆ ಅನುಷ್ಠಾನಕ್ಕೆ 6 ರಿಂದ 7 ಲಕ್ಷ ಸಾವಿರ ಕೋಟಿ ಸಾಲವಾಗುತ್ತದೆ. ಈ ಸಾಲ ನಿಮ್ಮ ಮೇಲೆ ಬೀಳುತ್ತದೆ. ಈಗಾಗಲೇ ಪ್ರತಿ ಪ್ರಜೆ ಮೇಲೆ 36 ಸಾವಿರ ರೂ. ಸಾಲ ಹೊರಿಸಿದ್ದಾರೆ. ಸಾಲ ತೀರಿಸಲು ಸಿದ್ದರಾಮಯ್ಯ ಪರ್ಮನೆಂಟ್ ಮುಖ್ಯಮಂತ್ರಿಯಾಗಿರುತ್ತಾರಾ? ಅಥವಾ ಡಿ.ಕೆ.ಶಿವಕುಮಾರ್ ನಿಮ್ಮ ಸಾಲ ತೀರಿಸುತ್ತಾರಾ? ಎಂದರು.

ಇದೇ ವೇಳೆ ಚಾಮರಾಜನಗರ ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಬಾಲರಾಜ್ ಹಾಗೂ ಮಾಜಿ ಶಾಸಕ ಎಂ.ಅಶ್ವಿನ್ ಕುಮಾರ್ ಮಾತನಾಡಿದರು.

ದೆಹಲಿಯಲ್ಲಿ ನಾಡಿನ ಜನತೆಯ ದನಿಯಾಗುತ್ತೇನೆ

" ನಾನು ಪಾರ್ಲಿಮೆಂಟ್ ಚುನಾವಣೆಗೆ ನಿಲ್ಲಬೇಕೆಂದಿರಲಿಲ್ಲ. ನಮ್ಮ ಜನ ಒತ್ತಡ ಹಾಕಿ ನಿಲ್ಲಿಸಿದ್ದಾರೆ. ಕಾವೇರಿ ವಿಷಯದಲ್ಲಿ ರಾಜ್ಯಕ್ಕೆ ಆಗಿರುವ ಅನ್ಯಾಯ ಸರಿಪಡಿಸಲು ಪಾರ್ಲಿಮೆಂಟಿಗೆ ನಿಂತಿದ್ದೇನೆಯೇ ಹೊರತು ಕೇಂದ್ರದ ಮಂತ್ರಿಯಾಗಿ ಮಜಾ ಮಾಡಲು ಅಲ್ಲ. ಮಂಡ್ಯ ಜನತೆ ನನಗೆ ಆಶೀರ್ವಾದ ಮಾಡುತ್ತಾರೆ ಎಂಬ ನಂಬಿಕೆ ಇದೆ. ಚಾಮರಾಜನಗರ ಕ್ಷೇತ್ರದ ಜನತೆ ಬಾಲರಾಜು ಮತ್ತು ಕಾಂಗ್ರೆಸ್ ಪಕ್ಷದ ಅಭ್ಯರ್ಥಿ ಚರಿತ್ರೆ ವಿಶ್ಲೇಷಣೆ ಮಾಡಿ ಯಾರಿಗೆ ಮತ ಹಾಕಬೇಕೆಂಬ ನಿರ್ಧಾರ ಕೈಗೊಳ್ಳಿ. ಹಾಕ್ಕೆ ಬಲಿಯಾಗಬೇಡಿ. ಅವರ ಜಾತ್ರವಲ್ಲ. ಬಾಲರಾಜುಗೆ ಶಕ್ತಿ ತುಂಬಿ ಅವರನ್ನು ಗೆಲ್ಲಿಸಿಕೊಡಿ. ಮುಂಬರುವ ಚುನಾವಣೆಯಲ್ಲಿ ಸ್ಪಷ್ಟ ಬಹುಮತ ದೊಂದಿಗೆ ಮೋದಿ ಪ್ರಧಾನಿಯಾಗುವುದು ನನ್ನ ತಲೆಯಲ್ಲಿ ಯಾರಿಂದಲೂ ಸಾಧ್ಯವಿಲ್ಲ

– ಹೆಚ್.ಡಿ.ಕುಮಾರಸ್ವಾಮಿ, ಮಾಜಿ ಮುಖ್ಯಮಂತ್ರಿ

ರೈತ ವಿರೋಧಿ ಕಾಂಗ್ರೆಸ್ ಸರ್ಕಾರಕ್ಕೆ ಜನರಿಂದ ತಕ್ಕ ಪಾಠ

ಚಿಕ್ಕಬಳ್ಳಾಪುರ ಹಾಗೂ ಕೋಲಾರದ ಎಂಟು ಲಕ್ಷ ಜನರು ಈ ಯೋಜನೆಯ ಫಲಾನುಭವಿಗಳಾಗಿದ್ದಾರೆ, ವಸತಿರಹಿತರಿಗೆ ಮನೆ ನಿರ್ಮಿಸಿಕೊಡುವಲ್ಲಿ ಕೇಂದ್ರ ಸರ್ಕಾರ ಯೋಜನೆ ಜಾರಿಗೆ ತಂದಿದ್ದು, ಚಿಕ್ಕಬಳ್ಳಾಪುರದ 14 ಸಾವಿರ, ಕೋಲಾರದ 20 ಸಾವಿರ ಮಂದಿ ಇದರ ಪ್ರಯೋಜನ ಪಡೆದಿದ್ದಾರೆ. ಮುಂದಿನ ವರ್ಷಗಳಲ್ಲಿ ಇನ್ನೂ ಮೂರು ಕೋಟಿ ಮನೆಗಳನ್ನು ಬಡ ಜನರಿಗಾಗಿ ನಿರ್ಮಿಸಲಾಗುವುದು. ಕೋಲಾರ ಮತ್ತು ಚಿಕ್ಕಬಳ್ಳಾಪುರದ 2.70 ಲಕ್ಷ ಕುಟುಂಬಗಳಿಗೆ ನಲ್ಲಿ ನೀರಿನ ಸಂಪರ್ಕ ನೀಡಲಾಗಿದೆ, ಮುಂದಿನ ದಿನಗಳಲ್ಲಿ ನಮೋ ಡ್ರೋನ್ ಯೋಜನೆಯನ್ನು ಗ್ರಾಮೀಣ ಕೃಷಿಕ ಮಹಿಳೆಯರಿಗಾಗಿ ಜಾರಿ ತರಲಾಗುವುದು. ರಾಜ್ಯದಲ್ಲಿ ರಾಷ್ಟ್ರೀಯ ಹೆದ್ದಾರಿ ಸಂಖ್ಯೆಗಳನ್ನು 25ರಿಂದ 49ಕ್ಕೆ ಹೆಚ್ಚಿಸಲಾಗಿದೆ, ಒಂದು ಜಿಲ್ಲೆ ಒಂದು ಉದ್ಯಮ ಯೋಜನೆ ಜಾರಿಗೆ ಪಟ್ಟಿಗೆ ಶಿಡ್ಲಘಟ್ಟದ ರೇಷಿಯನ್ನು ಸೇರ್ಪಡೆಗೊಳಿಸಲಾಗಿದ್ದು, ಅಂತಾರಾಷ್ಟ್ರೀಯ ಮಾರುಕಟ್ಟೆ ಸೌಲಭ್ಯ ಒದಗಿಸಲಾಗುತ್ತದೆ. ನಾಡಪ್ರಭು ಕೆಂಪೇಗೌಡ ಅವರ ಪ್ರತಿಮೆ ಸ್ಥಾಪಿಸುವ ಮೂಲಕ ಒಕ್ಕಲಿಗ ಸಮುದಾಯವನ್ನು ಕಲ್ಪಿಸಲಾಗುತ್ತಿದೆ, ನಂದಿಬೆಟ್ಟ, ಭುವನೇಶ್ವರಿ ಹಾಗೂ ಕೋಲಾರಮ್ಮ ಕ್ಷೇತ್ರಗಳನ್ನು ತೀರ್ಥಕ್ಷೇತ್ರಗಳನ್ನಾಗಿ ಅಭಿವೃದ್ಧಿಪಡಿಸುವ ಜೊತೆಗೆ ರಾಜ್ಯಕ್ಕೆ ಅನೇಕ ನಾಗರಿಕ ಸೌಲಭ್ಯಗಳನ್ನು ಕಲ್ಪಿಸಲಾಗಿದೆ. ಕೋಲಾರದಲ್ಲಿ ರಕ್ಷಣಾ ಸಾಮಗ್ರಿಗಳ ಉತ್ಪಾದನೆ ಕೇಂದ್ರ ಸ್ಥಾಪಿಸಲಾಗುವುದು, ಈ ಭಾಗದ ರೇಷ್ಮೆ ಕೃಷಿ, ಹೈನುಗಾರಿಕೆಗೆ ಪ್ರೋತ್ಸಾಹ ನೀಡಲಾಗುತ್ತಿದೆ. ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡ ಅವರಿಗೆ 90 ವರ್ಷ ವಯಸ್ಸಾಗಿದ್ದು, ಈ ದೇಶದ ಅತ್ಯಂತ ಹಿರಿಯ ರಾಜಕಾರಣಿಯಾಗಿದ್ದಾರೆ, ಅವರ ಉತ್ಸಾಹ, ಹೋರಾಟಕ್ಕೆ ನಮ್ಮೆಲ್ಲರಿಗೆ ಪ್ರೇರಣೆಯಾಗಿದೆ. ರಾಜ್ಯದ ಅಭಿವೃದ್ಧಿ ಬಗ್ಗೆ ಅವರಲ್ಲಿರುವ ಕಾಳಜಿ ಎನೆಂಬುದಕ್ಕೆ ಅವರ ಮಾತುಗಳೇ ಸಾಕ್ಷಿಯಾಗಿದೆ. ಅವರ ಮಾರ್ಗದರ್ಶನ ಪಡೆದು ಕರ್ನಾಟಕದ ಅಭಿವೃದ್ಧಿಗೆ ಶ್ರಮಿಸೋಣ ಎಂದರು. ದೇಶದ ಜನತೆಯೇ ನನ್ನ ಪರಿವಾರ, ಅವರ ಕನಸು, ನನಸು ಮಾಡಲು ಹಗಲು–ರಾತ್ರಿ ಶ್ರಮಿಸುತ್ತಿದ್ದೇನೆ, ಬರೀ ಯೋಜನೆಗಳನ್ನು ಜಾರಿಗೆ ತರುವುದು ಮಾತ್ರವಲ್ಲ ಅವುಗಳ ಸಾಕಾರದ ಗ್ಯಾರಂಟಿಯನ್ನೂ ನೀಡುತ್ತೇನೆ. ಮೋದಿ ಸರ್ಕಾರದ ಮನೆ ನಿರ್ಮಾಣ ಯೋಜನೆಗಳಲ್ಲಿ ಪರಿಶಿಷ್ಟ ಜಾತಿ, ಪರಿಶಿಷ್ಟ ಸಮುದಾಯ, ಇತರೆ ಹಿಂದುಳಿದ ವರ್ಗದ ಹೆಚ್ಚು ಫಲಾನುಭವಿಗಳಿದ್ದಾರೆ. ಈ ಮೊದಲು ನೀರು, ವಿದ್ಯುತ್ ಸೌಕರ್ಯಗಳಿಲ್ಲದೆ ಕೊಳಗೇರಿಗಳಲ್ಲಿ ವಾಸಿಸುತ್ತಿದ್ದವರಿಗೆ ಮೋದಿ ಸರ್ಕಾರ ಪಕ್ಕಾ ಮನೆಗಳನ್ನು ನಿರ್ಮಿಸಿಕೊಟ್ಟಿರುವುದು ದಲ್ಲದೆ, ಎಲ್ಲ ನಾಗರಿಕ ಸೌಕರ್ಯಗಳನ್ನು ಕಲ್ಪಿಸಿದೆ.

ಯಾವುದೇ ಅಡಮಾನವಿಲ್ಲದೆ, ಮುದ್ರಾ ಯೋಜನೆಯಡಿ ಎಸ್‌ಸಿ ಮತ್ತು ಎಸ್‌ಟಿ ಸಮುದಾಯದವರಿಗೆ ನೀಡುತ್ತಿದ್ದ ಸಾಲದ ಮೊತ್ತವನ್ನು 10 ಲಕ್ಷ ರೂ.ಗಳಿಂದ 20 ಲಕ್ಷ ರೂ.ಗಳಿಗೆ ಏರಿಸಲಾಗಿದೆ. ಕಡೆಯ ಸಾಲಿನ ವ್ಯಕ್ತಿಯನ್ನು ಮುನ್ನೆಲೆಗೆ ತಂದಿದ್ದೇವೆ, ಬುಡಕಟ್ಟು ಸಮುದಾಯದ ವ್ಯಕ್ತಿಯನ್ನು ರಾಷ್ಟ್ರಪತಿ ಹುದ್ದೆಯವರೆಗೆ ಕರೆತಂದಿದ್ದೇವೆ. ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಇತರೆ ಹಿಂದುಳಿದ ಸಮುದಾಯದವರು ಉನ್ನತ ಮಟ್ಟದ ಶಿಕ್ಷಣ ಪಡೆಯಲು ಒತ್ತು ನೀಡಲಾಗಿದೆ. ಮಾತೃಶಕ್ತಿ ಹಾಗೂ ತಾಯಿಂದಿರ ಆಶೀರ್ವಾದದೊಂದಿಗೆ ಎಲ್ಲಾ ಸವಾಲುಗಳನ್ನು ಎದುರಿಸಿ ದೇಶದ ಸೇವೆಯಲ್ಲಿ ಮುನ್ನುಗ್ಗುತ್ತಿದ್ದೇನೆ. ದೇಶದ ಸರ್ವತೋಮುಖ ಅಭಿವೃದ್ಧಿಗೆ ಎನ್‌ಡಿಎ ಅಭ್ಯರ್ಥಿಗಳನ್ನು ಲೋಕಸಭಾ ಚುನಾವಣೆಯಲ್ಲಿ ಗೆಲ್ಲಿಸಿ ಎಂದು ಪ್ರಧಾನಿ ಮನವಿ ಮಾಡಿದರು. ಪ್ರತಿಪಕ್ಷ 'ಇಂಡಿಯಾ' ಸಂಘಟನೆಯಲ್ಲಿ ನಾಯಕರಿಲ್ಲ, ದೂರದೃಷ್ಟಿ ಇಲ್ಲ, ಅದಕ್ಕಿಂತ ದೇಶದ ಜನತೆ ಮತ್ತೊಮ್ಮೆ ಮೋದಿ ಸರ್ಕಾರದಲ್ಲಿ ವಿಶ್ವಾಸ ವ್ಯಕ್ತಪಡಿಸುತ್ತಿದ್ದಾರೆ ಎಂದರು.



ಯದುವೀರರ ಬೆಂಬಲಿಸಲು ಒಕ್ಕಲಿಗರ ಒಕ್ಕೂಟ ಮನವಿ

ಮೈಸೂರು,ಏ.20(ಜಿಎ)–ಒಕ್ಕಲಿಗ ಸಮುದಾಯಕ್ಕೆ ರಾಜವಂಶಸ್ಥರು ಸಾಕಷ್ಟು ಕೊಡುಗೆಗಳನ್ನು ನೀಡಿದ್ದಾರೆ. ಆದರೆ, ಕಾಂಗ್ರೆಸ್ ಅಭ್ಯರ್ಥಿ ಎಂ.ಲಕ್ಷ್ಮಣ್ ಅವರ ಕೊಡುಗೆ ಶೂನ್ಯ. ಆದ್ದರಿಂದ ಒಕ್ಕಲಿಗ ಸಮಾಜ ಲೋಕಸಭಾ ಚುನಾವಣೆಯಲ್ಲಿ ಮೈಸೂರು–ಕೊಡಗು ಕ್ಷೇತ್ರದಿಂದ ಸ್ಪರ್ಧಿಸಿರುವ ಬಿಜೆಪಿ ಅಭ್ಯರ್ಥಿ ಯದುವೀರ್ ಅವರನ್ನು ಬೆಂಬಲಿಸಬೇಕು ಎಂದು ಒಕ್ಕಲಿಗರ ಒಕ್ಕೂಟ ಮನವಿ ಮಾಡಿದೆ.


ಯದುವೀರ್

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಒಕ್ಕೂಟದ ಪ್ರತಿನಿಧಿ ಸತೀಶ್‌ಗೌಡ ಬೀಡನಹಳ್ಳಿ ಮಾತನಾಡಿ, ಮೈಸೂರು ಜಿಲ್ಲಾ ಒಕ್ಕಲಿಗರ ಸಂಘದ ಹೆಸರನ್ನು ಬಳಸಿ ಕಾಂಗ್ರೆಸ್ ಅಭ್ಯರ್ಥಿ ಪರ ಬೆಂಬಲ ಸೂಚಿಸಿರುವುದಾಗಿ ಹೇಳಲಾಗಿದೆ. ಇದು ತಪ್ಪು. ಸಂಘದ ಚುನಾಯಿತ ಸಮಿತಿಯ ಅಧಿಕಾರಾವಧಿ ಮುಗಿದಿದ್ದು, ಅವರ ಹೇಳಿಕೆಗೆ ಯಾವುದೇ ಬೆಲೆಯಿಲ್ಲ. ಜಾತಿಯ ಅಧಿಕೃತ ಸಂಘ ಒಂದು ಪಕ್ಷದ ಪರ ಪ್ರಚಾರ ಮಾಡುವುದಕ್ಕೆ ಅವಕಾಶವಿಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಕಳೆದ 47 ವರ್ಷಗಳಲ್ಲಿ ಮೈಸೂರಲ್ಲಿ ಒಕ್ಕಲಿಗರಿಗೆ ಟಿಕೆಟ್ ನೀಡದಿರಲು, ತುಮಕೂರಿನಲ್ಲಿ ಎಚ್.ಡಿ.ದೇವೇಗೌಡರ ಸೋಲಿಗೆ ಯಾರು ಕಾರಣ. ಈ ಬಗ್ಗೆ ಲಕ್ಷ್ಮಣ್ ಅವರು ಪ್ರಶ್ನಿಸಲಿಲ್ಲವೇಕೆ. ಕೆ.ಎಚ್.ರಾಮಯ್ಯನವರ ಸಹಾಯಕ್ಕೆ ನಿಂತ ರಾಜಮನೆತನ ಒಕ್ಕಲಿಗ ಸಂಘ ಹಾಗೂ ಸಮುದಾಯಕ್ಕೆ ಸಾಕಷ್ಟು ಸಹಕಾರ ನೀಡಿದೆ. ಈ ಎಲ್ಲವನ್ನು ಅಂಶವನ್ನು ಸಮುದಾಯದ ಜನರು ಪರಿಶೀಲಿಸಿ ಮತ ಚಲಾಯಿಸಬೇಕು ಎಂದರು. ಸುದ್ದಿಗೋಷ್ಠಿಯಲ್ಲಿ ಒಕ್ಕೂಟದ ಕೃಷ್ಣ, ಹೇಮಾ, ಸುರೇಶ್‌ಗೌಡ, ಗಣೇಶ್, ಸುರೇಂದ್ರ, ಅಣ್ಣೇಗೌಡ, ಕೃಷ್ಣೇಗೌಡ, ಬೆಟ್ಟೇಗೌಡ, ರಾಜಕುಮಾರ್, ಶೇಖರ್ ಉಪಸ್ಥಿತರಿದ್ದರು.

ಯದುವೀರರ ಗೆಲ್ಲಿಸಿ ಮೈಸೂರು ಮಹಾರಾಜರ ಋಣ ತೀರಿಸೋಣ...

ಮೈಸೂರಲ್ಲಿ ನಾರೀಶಕ್ತಿ ಸಮಾವೇಶದಲ್ಲಿ ಮಂಡ್ಯ ಸಂಸದೆ ಸುಮಲತಾ ಮನವಿ

ಮೈಸೂರು, ಏ.20(ಆರ್‌ಕೆ)– ರಾಜವಂಶಸ್ಥ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಅವರನ್ನು ಗೆಲ್ಲಿಸಿ ಲೋಕಸಭೆಗೆ ಕಳುಹಿಸಿಕೊಡಿ ಎಂದು ಮಂಡ್ಯ ಸಂಸದೆ ಸುಮಲತಾ ಅಂಬರೀಶ್ ಕರೆ ನೀಡಿದ್ದಾರೆ.

ನಗರ ಬಿಜೆಪಿ ಮಹಿಳಾ ಮೋರ್ಚಾ ವತಿಯಿಂದ ಮೈಸೂರಿನ ವಿಶ್ವೇಶ್ವರನಗರದ ಸಿಂಧೂರ ಕಲ್ಯಾಣ ಮಂಟಪದಲ್ಲಿ ಏರ್ಪಡಿಸಿದ್ದ ನಾರೀಶಕ್ತಿ ಸಮಾವೇಶ ಉದ್ಘಾಟಿಸಿ ಮಾತನಾಡಿದ ಅವರು, ಯದುವೀರರು ತುಂಬಾ ಸರಳ ವ್ಯಕ್ತಿ, ನಿಮ್ಮ ಸೇವೆ ಮಾಡಲೆಂದು ಚುನಾವಣೆಗೆ ಸ್ಪರ್ಧಿಸಿದ್ದಾರೆ. ಅವರನ್ನು ಗೆಲ್ಲಿಸಿ ಲೋಕಸಭೆಗೆ ಕಳುಹಿಸಿಕೊಡಿ ಎಂದರು. ಕಳೆದ ಬಾರಿ ನಾನು ಮಂಡ್ಯದಲ್ಲಿ ಸ್ಪರ್ಧೆ ಮಾಡಿದ್ದಾಗ ನನ್ನ ನೆರವಿಗೆ ನಿಂತಿದ್ದೇ ಮಹಿಳಾ ಶಕ್ತಿ. ಸಾಂಸ್ಕೃತಿಕ ನಗರಿ ಮೈಸೂರಿನೊಂದಿಗೆ ಅವಿನಾಭಾವ ಸಂಬಂಧ ಇದೆ. ಅಂಬರೀಶ್ ಓದಿದ್ದು, ಬೆಳೆದದ್ದೂ ಇಲ್ಲಿಯೇ. ಹಲವು ಬಾರಿ ಸಿನೆಮಾ ಚಿತ್ರೀಕರಣಕ್ಕಾಗಿ ನಾವು ಮೈಸೂರಿಗೆ ಬರುತ್ತಿದ್ದೆವು. ಇದು ಸ್ವಾತಂತ್ರ್ಯ ಪೂರ್ವದಲ್ಲೇ ಅಭಿವೃದ್ಧಿ ಹೊಂದಿದ್ದ ನಗರ. ಅದಕ್ಕೆ ಮೈಸೂರು ಮಹಾರಾಜರ ಕೊಡುಗೆ ಅಪಾರ ಎಂದರು.

ಮುಂದಿನ 25 ವರ್ಷಗಳಲ್ಲಿ ಭಾರತವನ್ನು ವಿಶ್ವದ ನಂಬರ್ ಒನ್ ರಾಷ್ಟ್ರವನ್ನಾಗಿಸುವ ಕನಸು ಹೊಂದಿರುವ ಪ್ರಧಾನಮಂತ್ರಿ ನರೇಂದ್ರಮೋದಿ ಅವರ ಕೈ ಬಲಪಡಿಸಲು ನಾವೆಲ್ಲರೂ ಶ್ರಮಿಸಬೇಕಾಗಿದೆ. ಅವರು ತಮಗಾಗಿ ಅಥವಾ ತಮ್ಮ ಸ್ವಾರ್ಥಕ್ಕಾಗಿ ಮಾಡುತ್ತಿಲ್ಲ. ಬದಲಾಗಿ ದೇಶದ ಜನರಿಗಾಗಿ ಶ್ರಮಿಸುತ್ತಿದ್ದಾರೆ ಎಂದು ಸುಮಲತಾ ನುಡಿದರು.

ದೇಶದಲ್ಲಿ ಬಿಜೆಪಿ ಅಧಿಕಾರಕ್ಕೆ ಬಂದ ಮೇಲೆ ಹಲವು ಅಭಿವೃದ್ಧಿ ಯೋಜನೆಗಳನ್ನು ಅನುಷ್ಠಾನಗೊಳಿಸಿದೆ. ಉಜ್ವಲ್‌ನಂತಹ ಹಲವು ಯೋಜನೆಗಳನ್ನು ಕೊಟ್ಟು ಮಹಿಳೆಯರು ಸ್ವಾಭಿಮಾನದ ಜೀವನ ನಡೆಸಲು ನೆರವಾಗಿದ್ದಾರೆ. ಬದುಕು ಕಟ್ಟಿಕೊಳ್ಳಲು ನರೇಂದ್ರ ಮೋದಿ ಅವರು ಅವಕಾಶ ನೀಡಿ ದ್ದಾರೆ. ಅವರು ಕಂಡ ಕನಸನ್ನು ಕಾರ್ಯರೂಪಕ್ಕೆ ತರದೇ ಬಿಡುವವರಲ್ಲ ಎಂದ ಸುಮಲತಾ, ಮತ್ತೆ ದೇಶದಲ್ಲಿ ಮೋದಿ ನೇತೃತ್ವದ ಸರ್ಕಾರ ಬಂದಲ್ಲಿ 140 ಕೋಟಿ ಭಾರತೀಯರ ಬದುಕು ಹಸನಾಗುತ್ತದೆ ಎಂದು ತಿಳಿಸಿದರು.

ಸರಳ, ಸಜ್ಜನ ವ್ಯಕ್ತಿಯಾದ ಯದುವೀರ ಅವರನ್ನು ವಿರೋಧಿಸುವವರಿಗೆ ನೀವು ತಕ್ಕ ಉತ್ತರ ನೀಡಬೇಕು. ಯದುವೀರ್‌ಗೆ ರಾಜಕೀಯಕ್ಕೆ ಬರುವ ಅನಿವಾರ್ಯತೆ ಇರಲಿಲ್ಲ. ನಿಮ್ಮೆಲ್ಲರ ಸೇವೆ ಮಾಡಲೆಂದು ಬಂದಿದ್ದಾರೆ. ಅವರಿಗೆ ಮತ ಹಾಕಿ ಬೆಂಬಲಿಸುವ ಮೂಲಕ ಮೈಸೂರು ಮಹಾರಾಜರ ಋಣ ತೀರಿಸುವ ಅವಕಾಶ ಬಂದಿದೆ ಎಂದು ಅವರು ಇದೇ ಸಂದರ್ಭ ತಿಳಿಸಿದರು.

ಮೈಸೂರು, ಮಂಡ್ಯ, ಚಾಮರಾಜನಗರ, ಬೆಂಗಳೂರು ಸೇರಿದಂತೆ ರಾಜ್ಯದ ಜನರಿಗೆ ಮೈಸೂರು ಮಹಾರಾಜರು ಒಂದಲ್ಲಾ ಒಂದು ರೀತಿಯಲ್ಲಿ ಕೊಡುಗೆ ನೀಡಿದ್ದಾರೆ. ಅವರ ಋಣ ತೀರಿಸುವ ಅವಕಾಶವನ್ನು ನಾವು ಬಳಸಿಕೊಂಡು ರಾಜವಂಶಸ್ಥರಾದ ಯದುವೀರ ಅವರನ್ನು ಗೆಲ್ಲಿಸುವಂತೆ ಸುಮಲತಾ ಮಹಿಳೆಯರಲ್ಲಿ ಮನವಿ ಮಾಡಿದರು. ಶಾಸಕ ಟಿ.ಎಸ್. ಶ್ರೀವತ್ಸ ರಾಜ್ಯ ಬಿಜೆಪಿ ಮಹಿಳಾ ಮೋರ್ಚಾ ಅಧ್ಯಕ್ಷೆ ಮಂಜುಳಾ, ಮೈಸೂರು ನಗರ ಮಹಿಳಾ ಮೋರ್ಚಾ ಅಧ್ಯಕ್ಷೆ ರೇಣುಕಾ ರಾಜು, ಮಾಜಿ ಮೇಯರ್ ಸುನಂದಾ ಪಾಲನೇತ್ರ, ಮಾಜಿ ಉಪಮೇಯರ್ ಡಾ. ಆರ್. ರೂಪಾ, ಮುಖಂಡರಾದ ಶಾರದಮ್ಮ, ಈಶ್ವರ, ಶಾಂತ ವಡಿವೇಲ್, ಇತರರು ಸಮಾವೇಶದಲ್ಲಿ ಪಾಲ್ಗೊಂಡಿದ್ದರು.



ಬಿಜೆಪಿ ನಗರ ಮಹಿಳಾ ಮೋರ್ಚಾದಿಂದ ಮೈಸೂರಿನ ವಿಶ್ವೇಶ್ವರನಗರದ ಸಿಂಧೂರ ಕಲ್ಯಾಣ ಮಂಟಪದಲ್ಲಿ ಶನಿವಾರ ಆಯೋಜಿಸಿದ್ದ ನಾರೀಶಕ್ತಿ ಸಮಾವೇಶವನ್ನು ಮಂಡ್ಯ ಸಂಸದೆ ಸುಮಲತಾ ಅಂಬರೀಶ್ ಉದ್ಘಾಟಿಸಿದರು. ಶಾಸಕ ಟಿ.ಎಸ್. ಶ್ರೀವತ್ಸ, ರಾಜ್ಯ ಬಿಜೆಪಿ ಮಹಿಳಾ ಮೋರ್ಚಾ ಅಧ್ಯಕ್ಷೆ ಮಂಜುಳಾ, ನಗರ ಮಹಿಳಾ ಮೋರ್ಚಾ ಅಧ್ಯಕ್ಷೆ ರೇಣುಕಾ ರಾಜು ಇತರರನ್ನು ಕಾಣಬಹುದು.

ಕಾಂಗ್ರೆಸ್ ಬೆಂಬಲಿಸಲು ವಿಶ್ವಕರ್ಮ ಯುವ ಜಾಗೃತಿ ವೇದಿಕೆ ಮನವಿ

ಮೈಸೂರು, ಏ.20(ಜಿಎ)–ಲೋಕಸಭೆ ಚುನಾವಣೆಯಲ್ಲಿ ವಿಶ್ವಕರ್ಮ ಸಮುದಾಯದ ಮತದಾರರು ಕಾಂಗ್ರೆಸ್ ಪಕ್ಷವನ್ನು ಬೆಂಬಲಿಸಬೇಕು ಎಂದು ಜಿಲ್ಲಾ ವಿಶ್ವಕರ್ಮ ಯುವ ಜಾಗೃತಿ ವೇದಿಕೆ ಮನವಿ ಮಾಡಿದೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ವೇದಿಕೆ ಅಧ್ಯಕ್ಷ ಕೆ.ಕೆಂಡಗಣ್ಣ ವಿಶ್ವಕರ್ಮ ಮಾತನಾಡಿ, ಕಾಂಗ್ರೆಸ್ ದೇವರಾಜ್ ಅರಸು, ಬಿ.ಬಿ.ಪತ್ತಾರ್, ಎಸ್.ಎಂ.ಕೃಷ್ಣ, ಬಿಂಬಾ ರಾಯ್ಕರ್, ಸಿದ್ದರಾಮಯ್ಯ ಸೇರಿದಂತೆ ವಿವಿಧ ನಾಯಕರು ರಾಜಕೀಯವಾಗಿ ಸಾಕಷ್ಟು ಬೆಂಬಲ ನೀಡಿದ್ದಾರೆ. ವಿಶ್ವಕರ್ಮ ನಿಗಮ ಸ್ಥಾಪನೆ, ಜಯಂತಿ ಆಚರಣೆ ಮೂಲಕ ಸಿದ್ದರಾಮಯ್ಯ ಅವರು ಸಮುದಾಯದ ಅಸ್ಮಿತೆಗೆ ಬಲ ತುಂಬಿದ್ದಾರೆ. ಬಿಜೆಪಿಯಿಂದ ಸಮುದಾಯಕ್ಕೆ ಯಾವುದೇ ಲಾಭವಾಗಿಲ್ಲ. ಕೋವಿಡ್ ಸಂದರ್ಭದಲ್ಲಿ ನಮ್ಮವರ ಕಷ್ಟ ಆಲಿಸಿಲ್ಲ ಎಂದು ದೂರಿದರು.

ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಎಂ.ಲಕ್ಷ್ಮಣ್, ಚಾಮರಾಜನಗರ ಕ್ಷೇತ್ರದ ಅಭ್ಯರ್ಥಿ ಸುನೀಲ್ ಬೋಸ್ ಸಮುದಾಯದ ಪರಿಸ್ಥಿತಿಗಳ, ಬೇಡಿಕೆಗಳ ಬಗ್ಗೆ ಅರಿವು ಹೊಂದಿದ್ದಾರೆ. ಬಿಜೆಪಿ ಅಭ್ಯರ್ಥಿ, ರಾಜವಂಶಸ್ಥ ಯದುವೀರ್ ಒಡೆಯರ್ ಅವರಿಂದ ನಮ್ಮ ಸಮಸ್ಯೆಗಳಿಗೆ ಪರಿಹಾರ ನಿರೀಕ್ಷಿಸಲು ಸಾಧ್ಯವಿಲ್ಲ. ಸಾಮಾನ್ಯ ವ್ಯಕ್ತಿಗೆ ಸಮುದಾಯ ಬೆಂಬಲ ನೀಡಬೇಕು ಎಂದು ಒತ್ತಾಯಿಸಿದರು. ಸುದ್ದಿಗೋಷ್ಠಿಯಲ್ಲಿ ಸಮುದಾಯದ ಮುಖಂಡರಾದ ಜಯಲಕ್ಷ್ಮಿ, ಮಹದೇವರಾಜು, ಲಕ್ಷ್ಮಿ, ಕೆ.ಎನ್.ಕುಮಾರ್, ನಾರಾಯಣ್ ಕುಮಾರ್, ಸರಸ್ವತಿ ರವಿಕುಮಾರ್, ಎನ್.ನಟರಾಜ್, ಮಂಜು ಇದ್ದರು.

ಕಾಂಗ್ರೆಸ್ ಅಭ್ಯರ್ಥಿ ಲಕ್ಷ್ಮಣ ಪರ ಡಾ.ಯತೀಂದ್ರ, ಮುಡಾ ಅಧ್ಯಕ್ಷ ಮರೀಗೌಡ ಪ್ರಚಾರ

ಮೈಸೂರು, ಏ.20(ಎಸ್‌ಪಿಎನ್)– ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಎಂ.ಲಕ್ಷ್ಮಣ ಪರವಾಗಿ ಮಾಜಿ ಶಾಸಕ ಡಾ.ಯತೀಂದ್ರ, ಮುಡಾ ಅಧ್ಯಕ್ಷ ಮರಿಗೌಡ ಸೇರಿದಂತೆ ಇತರೆ ಮುಖಂಡರ ನೇತೃತ್ವದಲ್ಲಿ ಶಾರದಾದೇವಿನಗರ ಸೇರಿದಂತೆ ಇತರೆ ಬಡಾವಣೆಗಳಲ್ಲಿ ಮತಯಾಚನೆ ಮಾಡಿದರು.

ಜನತಾನಗರ, ಶಾರದಾದೇವಿನಗರ, ಬಸವೇಶ್ವರ ನಗರ, ರಾಮಕೃಷ್ಣನಗರ, ನಿವೇದಿತಾನಗರ ಸೇರಿದಂತೆ ಇತರೆ ಬಡಾವಣೆಗಳಲ್ಲಿ ಕಾಂಗ್ರೆಸ್ ಅಭ್ಯರ್ಥಿ ಪರ ಮತಯಾಚನೆ ಮಾಡಿದರು.

ಈ ವೇಳೆ ಮಾಜಿ ಶಾಸಕ ಡಾ. ಯತೀಂದ್ರ ಮಾತನಾಡಿ, ಕಾಂಗ್ರೆಸ್ ಪಕ್ಷ ಎಂದಿಗೂ ಬಡವರ ಪರವಾಗಿರುವ ಪಕ್ಷ. ಕೇಂದ್ರದಲ್ಲಿ ಈ ಭಾರಿ ಅಧಿಕಾರಕ್ಕೆ ಬಂದರೆ, ಪ್ರಣಾಳಿಕೆಯಲ್ಲಿ ನೀಡಿರುವ ಭರವಸೆಯನ್ನು ಈಡೇರಿಸಲಾಗುವುದು. ಈಗಾಗಲೇ ಕರ್ನಾಟಕದಲ್ಲಿ ಐದು ಗ್ಯಾರಂಟಿಗಳನ್ನು ಜಾರಿಗೊಳಿಸಿ ನುಡಿದಂತೆ ನಡೆದ ಸರ್ಕಾರ ಎಂಬ ಹೆಗ್ಗಳಿಕೆಗೆ ಕಾಂಗ್ರೆಸ್ ಪಾತ್ರವಾಗಿದೆ ಎಂದರು.

ಈ ವೇಳೆ ಹಲವು ಜೆಡಿಎಸ್ ಕಾರ್ಯಕರ್ತರು, ಡಾ.ಯತೀಂದ್ರ ನೇತೃತ್ವದಲ್ಲಿ ಕಾಂಗ್ರೆಸ್ ಸೇರ್ಪಡೆಗೊಂಡರು. ಈ ವೇಳೆ ಮುಖಂಡ ಹರೀಶ್ ಮತ್ತು ಇತರರು ಉಪಸ್ಥಿತರಿದ್ದರು.


ಕಾಂಗ್ರೆಸ್ ಅಭ್ಯರ್ಥಿ ಎಂ.ಲಕ್ಷ್ಮಣ ಪರವಾಗಿ ಮಾಜಿ ಶಾಸಕ ಡಾ.ಯತೀಂದ್ರ, ಮುಡಾ ಅಧ್ಯಕ್ಷ ಮರಿಗೌಡ ಸೇರಿದಂತೆ ಇತರೆ ಮುಖಂಡರು ಶಾರದಾದೇವಿನಗರ ಸೇರಿದಂತೆ ಇತರೆ ಬಡಾವಣೆಗಳಲ್ಲಿ ಮತಯಾಚನೆ ಮಾಡಿದರು.

ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಅಂಚೆ ಮತದಾನ ಕೇಂದ್ರ ಸ್ಥಾಪನೆ

ಮೈಸೂರು,ಏ.20–ಲೋಕಸಭಾ ಚುನಾವಣೆ ಸಂಬಂಧ ಗೈರು ಹಾಜರಿ ಮತದಾರರಿಗೆ ಅಂಚೆ ಮತದಾನ ಕೇಂದ್ರವನ್ನು ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ತೆರೆಯಲಾಗಿದೆ. ಕರ್ತವ್ಯ ನಿರ್ವಹಿಸುತ್ತಿರುವ ಮತದಾರರಿಗೆ ಅಂಚೆ ಮತಪತ್ರದ ಮೂಲಕ ಮತ ಚಲಾಯಿಸಲು ಡಿಸಿ ಕಾರ್ಯಾಲಯದ ನೆಲಮಹಡಿ ಕೊಠಡಿ ಸಂಖ್ಯೆ 10ರಲ್ಲಿ ಅಂಚೆ ಮತದಾನ ಕೇಂದ್ರವನ್ನು ಸ್ಥಾಪಿಸಲಾಗಿದ್ದು, ಅಂಚೆ ಮತದಾನ ಕೇಂದ್ರವು ಏ.21ರವರೆಗೆ ಬೆಳಗ್ಗೆ 9ರಿಂದ ಸಂಜೆ 5 ಗಂಟೆವರೆಗೆ ತೆರೆಯಲಾಗಿದೆ. ಮೈಸೂರು ಲೋಕಸಭಾ ಕ್ಷೇತ್ರ ಹೊರತುಪಡಿಸಿ ಇತರೆ ಲೋಕಸಭಾ ಕ್ಷೇತ್ರದ ವ್ಯಾಪ್ತಿಗೆ ಒಳಪಟ್ಟಿದ್ದರೆ (2ನೇ ಹಂತದಲ್ಲಿ ಚುನಾವಣೆ ನಡೆಯುವ ಲೋಕಸಭಾ ಕ್ಷೇತ್ರದ ಮಾತ್ರ) ಆಯಾಯ ಲೋಕಸಭಾ ಕ್ಷೇತ್ರದ ಚುನಾವಣಾಧಿಕಾರಿಗಳ ಕಚೇರಿಯಲ್ಲಿ ತೆರೆದಿರುವ ಅಂಚೆ ಮತದಾನ ಕೇಂದ್ರದಲ್ಲಿ ಮತ ಚಲಾಯಿಸುವಂತೆ ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.


ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಪರ ನರಸಿಂಹರಾಜ ವಿಧಾನಸಭಾ ಕ್ಷೇತ್ರದ ವಾರ್ಡ್ ನಂ.35ರ ಎಚ್‌ಪಿಎಂಆರ್‌ಎಂಎಸ್ ಬಡಾವಣೆಯಲ್ಲಿ ಮನೆ ಮನೆಗೆ ತೆರಳಿ ಬಿಜೆಪಿ ಮುಖಂಡ ಬಿ.ಆನಂದ್, ಯುವ ಮುಖಂಡರಾದ ಕಿರಣ್, ಶಿವು, ಬಸವರಾಜು, ಚೇತನ್, ನವೀನ್, ಜೀವನ್ ಮತಯಾಚಿಸಿದರು.


ಹೆಗ್ಗಡದೇವನಕೋಟೆ ತಾಲೂಕಿನ ಕೆ.ಎಡತೊರೆ, ಕೃಷ್ಣಾಪುರದಲ್ಲಿ ಚಾಮರಾಜನಗರ ಕಾಂಗ್ರೆಸ್ ಅಭ್ಯರ್ಥಿ ಸುನೀಲ್ ಬೋಸ್ ಪರ ವಿಧಾನಪರಿಷತ್ ಸದಸ್ಯ ಡಾ.ಡಿ.ತಿಮ್ಮಯ್ಯ ಮತಯಾಚಿಸಿದರು. ಡಿಸಿಸಿ ಮುಖ್ಯ ಮಾಧ್ಯಮ ಸಂಚಾಲಕ ಎಡತೊರೆ ಎಂ.ನಿಂಗರಾಜ್, ಮುಖಂಡರಾದ ವೈ.ಕೆ.ಸಿದ್ದಯ್ಯ, ಬಸವರಾಜು, ಕಾರಯ್ಯ, ಪಾಪಣ್ಣ, ಪುರಸಭಾ ಸದಸ್ಯೆ ಶಾಂತಮ್ಮ, ಮಹೇಂದ್ರ ಇನ್ನಿತರರಿದ್ದರು.

ಮೈಸೂರು ಟೆನ್ನಿಸ್ ಕ್ಲಬ್‌ನಲ್ಲಿ ಮತ ಜಾಗೃತಿ




ಕರ್ನಾಟಕ ರಾಜ್ಯ ಸ್ವೀಪ್ ಸಮಿತಿ ನೋಡಲ್ ಅಧಿಕಾರಿ ಪಿ.ಎಸ್. ವಸ್ತ್ರದ್ ಅವರ ನೇತೃತ್ವದಲ್ಲಿ ಶನಿವಾರ ಮೈಸೂರು ಟೆನ್ನಿಸ್ ಕ್ಲಬ್‌ನಲ್ಲಿ ಮತ ಜಾಗೃತಿ ಅಭಿಯಾನ ನಡೆಸಲಾಯಿತು.

ಮೈಸೂರು, ಏ. 20(ಆರ್‌ಕೆ)– ರಾಜ್ಯ ಸ್ವೀಪ್ (Systematic Voter's Education and Electoral Participation) ಸಮಿತಿ ನೋಡಲ್ ಅಧಿಕಾರಿ ಪಿ.ಎಸ್. ವಸ್ತ್ರದ್ ಇಂದು ಮೈಸೂರು ಟೆನ್ನಿಸ್ ಕ್ಲಬ್ ಆವರಣದಲ್ಲಿ ಮತ ಜಾಗೃತಿ ಅಭಿಯಾನ ನಡೆಸಿದರು.

ಬೆಳಗ್ಗೆ ಟೆನ್ನಿಸ್ ಆಟಗಾರರಿಗೆ ಏಪ್ರಿಲ್ 26ರಂದು ನಡೆಯಲಿರುವ ಲೋಕಸಭಾ ಚುನಾವಣೆಯಲ್ಲಿ ಪ್ರತಿಯೊಬ್ಬರೂ ತಪ್ಪದೇ ಮತ ಚಲಾಯಿಸಿ ಭವ್ಯ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಸದೃಢಗೊಳಿಸಬೇಕೆಂದು ಅವರು ಸಲಹೆ ನೀಡಿದರು.

ಇದೇ ಮೊದಲ ಬಾರಿ ಮತದಾನಕ್ಕೆ ಅರ್ಹರಾಗಿರುವ ಯುವ ಸಮೂಹ, ವೃದ್ಧರು, ವಿಶೇಷಚೇತನರನ್ನು ಸೆಳೆದು ಲೋಕಸಭಾ ಚುನಾವಣೆಯಲ್ಲಿ ಮತ ಪ್ರಮಾಣ ಹೆಚ್ಚಿಸಲು ಸ್ವೀಪ್ ಸಮಿತಿಯು ಹಲವು ಕಾರ್ಯಕ್ರಮಗಳ ಮೂಲಕ ಅರಿವು ಮೂಡಿಸುತ್ತಿದ್ದು, ಅಂದು ಎಲ್ಲಾ ನಾಗರಿಕರು ಮತ ಚಲಾಯಿಸುವ ಜೊತೆಗೆ ಇತರರಿಗೂ ಪ್ರೇರಣೆ ನೀಡಬೇಕೆಂದು ವಸ್ತ್ರದ್ ತಿಳಿಸಿದರು.

ಮೈಸೂರು ಮಹಾನಗರ ಪಾಲಿಕೆ ಆಯುಕ್ತೆ ಡಾ.ಎನ್.ಎನ್.ಮಧು, ಎಕ್ಸಿಕ್ಯೂಟಿವ್ ಇಂಜಿನಿಯರ್ ನಾಗರಾಜು, ಪರಿಸರ ಇಂಜಿನಿಯರ್ ಮೈತ್ರಿ, ಜಿಲ್ಲಾ ಸ್ವೀಪ್ ಸಮಿತಿಯ ಶಾಂತ ಹಾಗೂ ಇತರ ಅಧಿಕಾರಿಗಳು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.


ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಎನ್‌ಡಿಎ ಅಭ್ಯರ್ಥಿ ಯದುವೀರ್ ಒಡೆಯರ್ ಪರವಾಗಿ ಮೈಸೂರಿನ 19ನೇ ವಾರ್ಡಿನ ಜಯಲಕ್ಷ್ಮಿಪುರಂ, ಗೋಕುಲಂ ಬಡಾವಣೆಯಲ್ಲಿ ಪಾಲಿಕೆ ಮಾಜಿ ಸದಸ್ಯೆ ಭಾಗ್ಯ ಮಾದೇಶ್ ಅವರು ಮನೆ ಮನೆಗೆ ತೆರಳಿ ಮತ ಯಾಚಿಸಿದರು. ಈ ವೇಳೆ ಮುಖಂಡರಾದ ಪಾಲಹಳ್ಳಿ ರಾಮಕೃಷ್ಣ, ಮದನ್ ಮಾದೇಶ ಮತ್ತಿತರರು ಉಪಸ್ಥಿತರಿದ್ದರು.

ನಾಟಕ, ಹಾಡಿನ ಮೂಲಕ ಮತದಾನ ಜಾಗೃತಿ


ಶ್ರೀ ಛಾಯಾದೇವಿ ಶಿಕ್ಷಣ ಮಹಾವಿದ್ಯಾಲಯದ ವಿದ್ಯಾರ್ಥಿನಿಯರು ಟೌನ್‌ಹಾಲ್ ಮುಂಭಾಗದಲ್ಲಿ ಬೀದಿ ನಾಟಕ, ಹಾಡಿನ ಮೂಲಕ ಮತದಾನ ಜಾಗೃತಿ ಮೂಡಿಸಿದರು.

ಮೈಸೂರು, ಏ.20(ಎಸ್‌ಪಿಎನ್)– 2024ರ ಲೋಕಸಭಾ ಚುನಾವಣೆಯಲ್ಲಿ ಪ್ರತಿಯೊಬ್ಬರು ಮತದಾನ ಮಾಡಿ ಎಂದು ಮೈಸೂರಿನ ರಾಜೇಂದ್ರನಗರದ ಶ್ರೀ ಛಾಯಾದೇವಿ ವಿದ್ಯಾನಿಕೇತನ ಟ್ರಸ್ಟ್ ಹಾಗೂ ಶ್ರೀ ಛಾಯಾದೇವಿ ಶಿಕ್ಷಣ ಮಹಾವಿದ್ಯಾಲಯದ ವಿದ್ಯಾರ್ಥಿನಿಯರು ಟೌನ್‌ಹಾಲ್ ಮುಂಭಾಗದಲ್ಲಿ ಬೀದಿ ನಾಟಕ, ಹಾಡಿನ ಮೂಲಕ ಮತದಾನ ಜಾಗೃತಿ ಮೂಡಿಸಿದರು.

ನಂತರ ಸಮಾಜ ಸೇವಕ ಲಯನ್ ಸುಬ್ರಹ್ಮಣ್ಯಂ ಮಾತನಾಡಿ, ಯುವ ಜನತೆಗೆ ಈ ಬಾರಿ ಲೋಕಸಭಾ ಚುನಾವಣೆಯಲ್ಲಿ ಪ್ರತಿಯೊಬ್ಬರು ಮತದಾನದಲ್ಲಿ ಪಾಲ್ಗೊಳ್ಳಬೇಕು ಹಾಗೂ ಇತರರಿಗೂ ಮತದಾನದ ಮೌಲ್ಯ ಕುರಿತು ಮನವರಿಕೆ ಮಾಡಿಕೊಡಬೇಕು ಎಂದರು.

ಅಲ್ಲದೆ ಸಾರ್ವಜನಿಕರು ಏಪ್ರಿಲ್ 26ರಂದು ಯಾವುದೇ ಪ್ರವಾಸ, ಪ್ರಯಾಣ ಮತ್ತು ಇತರ ಕೆಲಸಗಳನ್ನು ಬದಿಗೊತ್ತಿ ತಮ್ಮ ತಮ್ಮ ಮತಗಟ್ಟೆಗೆ ಹೋಗಿ ಮತ ಚಲಾಯಿಸಿ ಪ್ರಜಾಪ್ರಭುತ್ವ ಹಬ್ಬವನ್ನು ಆಚರಿಸಬೇಕೆಂದು ಸಲಹೆ ನೀಡಿದರು.

ನಂತರ ಪ್ರಶಿಕ್ಷಣಾರ್ಥಿಗಳು ಮತದಾನ ಕುರಿತು ಬೀದಿ ನಾಟಕ ಮತ್ತು ಮೂಕಾಭಿನಯದ ಮೂಲಕ ನೆರೆದಿದ್ದ ಸಾರ್ವಜನಿಕರ ಗಮನ ಸೆಳೆದರು. ಕಾರ್ಯಕ್ರಮದಲ್ಲಿ ಕಾಲೇಜಿನ ಪ್ರಾಂಶುಪಾಲ ಡಾ.ಆಂತೋಣಿ ಪೌಲ್‌ರಾಜ್, ಸಂಯೋಜಕ ಎನ್.ತೇಜಸ್ವಿ, ಬಲರಾಮ್ ಹಾಗೂ ಬೋಧಕ ವೃಂದ, ಪ್ರಥಮ ಮತ್ತು ದ್ವಿತೀಯ ಪ್ರಶಿಕ್ಷಣಾರ್ಥಿಗಳು ಇದ್ದರು.

ಮಂಡ್ಯದಲ್ಲಿ ನನ್ನ ಬೆಂಬಲಿಗರು ಎನ್‌ಡಿಎ ಅಭ್ಯರ್ಥಿ ಪರ ಕೆಲಸ ಮಾಡುತ್ತಿದ್ದಾರೆ

ಸುದ್ದಿಗೋಷ್ಠಿಯಲ್ಲಿ ಸಂಸದೆ ಸುಮಲತಾ ಸ್ಪಷ್ಟನೆ

ಮೈಸೂರು, ಏ.20(ಎಂಟಿವೈ)– ಮಂಡ್ಯದಲ್ಲಿ ನನ್ನ ಬೆಂಬಲಿಗರು ತಟಸ್ಥರಾಗಿಲ್ಲ, ಎನ್‌ಡಿಎ ಅಭ್ಯರ್ಥಿ ಪರ ಕೆಲಸ ಮಾಡುತ್ತಿದ್ದಾರೆ ಎಂದು ಸಂಸದೆ ಸುಮಲತಾ ತಿಳಿಸಿದ್ದಾರೆ.

ಮೈಸೂರಿನ ಬಿಜೆಪಿ ಕಚೇರಿಯಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ನಾನು ಈಗಾಗಲೇ ಎನ್‌ಡಿಎ ಅಭ್ಯರ್ಥಿಗೆ ನನ್ನ ಸ್ಥಾನ ಬಿಟ್ಟುಕೊಟ್ಟು ಮನಃಪೂರ್ವಕವಾಗಿ ಬಿಜೆಪಿ ಸೇರಿ, ಮೈತ್ರಿಕೂಟದ ಅಭ್ಯರ್ಥಿಗೆ ಪೂರ್ಣ ಸಹಕಾರ ನೀಡಿದ್ದೇನೆ. ಮಂಡ್ಯದಲ್ಲಿರುವ ನನ್ನ ಬೆಂಬಲಿಗರು ಹಾಗೂ ಕಾರ್ಯಕರ್ತರು ತಟಸ್ಥರಾಗಿಲ್ಲ, ಅಭ್ಯರ್ಥಿ ಪರ ಕೆಲಸ ಮಾಡುತ್ತಿದ್ದಾರೆ. ಪಕ್ಷ ಹೇಳಿದ ಕಡೆ ನಾನು ಪ್ರಚಾರ ಮಾಡಲು ಹೋಗುತ್ತೇನೆ ಎಂದರು.

ಪ್ರಧಾನಮಂತ್ರಿ ನರೇಂದ್ರಮೋದಿ ಕಳೆದ 10 ವರ್ಷದಲ್ಲಿ ದೇಶದಲ್ಲಿ ಮಾಡಿರುವ ಅಭಿವೃದ್ಧಿ ಕೆಲಸಗಳು, ಅವರ ವ್ಯಕ್ತಿತ್ವವನ್ನು ಮೆಚ್ಚಿ ನಾನು ಬಿಜೆಪಿ ಸೇರಿದ್ದೇನೆ. ಬೇರೆ ಯಾರೂ ತಮ್ಮ ಕ್ಷೇತ್ರವನ್ನು ಬಿಟ್ಟು ಕೊಡುವುದಿಲ್ಲ. ಆದರೆ ನಾನು ಕ್ಷೇತ್ರ ಬಿಟ್ಟು ಕೊಟ್ಟಿದ್ದೇನೆ. ನಾನು ಬಿಜೆಪಿ ಸೇರಿದ ಸಂದರ್ಭದಿಂದಲೇ ಎನ್‌ಡಿಎ ಅಭ್ಯರ್ಥಿ ಪರ ಇದ್ದೇನೆ ಎಂದರ್ಥ. ಮಾಜಿ ಸಿಎಂ ಹೆಚ್.ಡಿ. ಕುಮಾರಸ್ವಾಮಿ ನನ್ನ ಮನೆಗೆ ಬಂದು, ಹಳೆಯದ್ದನ್ನೆಲ್ಲಾ ಮರೆಯೋಣ, ಸಹಕಾರ ನೀಡಿ ಎಂದು ಕೋರಿದ್ದಾರೆ. ಅದಕ್ಕೆ ನಾನು ಸಹಮತ ವ್ಯಕ್ತಪಡಿಸಿದ್ದೇನೆ ಎಂದು ಹೇಳಿದರು.


ಸುಮಲತಾ

ದರ್ಶನ್ ಅವರ ವೈಯಕ್ತಿಕ ನಿರ್ಧಾರ: ಮಂಡ್ಯ ಲೋಕಸಭಾ ಕ್ಷೇತ್ರದಲ್ಲಿ ಕಾಂಗ್ರೆಸ್ ಅಭ್ಯರ್ಥಿ ಪರ ನಟ ದರ್ಶನ್ ಪ್ರಚಾರ ನಡೆಸುತ್ತಿರುವುದಕ್ಕೆ ಪ್ರತಿಕ್ರಿಯಿಸಿದ ಸುಮಲತಾ, ನಟ ದರ್ಶನ್ ಯಾರಿಗೆ ಬೆಂಬಲ ನೀಡಬೇಕು ಎಂಬುದು ಅವರಿಗೆ ಬಿಟ್ಟ ವಿಚಾರ. ದರ್ಶನ್‌ಗೆ ಇಂತಹವರ ಪರ ಪ್ರಚಾರ ಮಾಡು, ಇಂತಹ ವ್ಯಕ್ತಿಗಳ ಪರವಾಗಿ ಪ್ರಚಾರ ಮಾಡಬೇಡ ಎಂದು ನಾನು ಹೇಳಲು ಆಗುವುದಿಲ್ಲ. ದರ್ಶನ್ ಸಣ್ಣ ಮಗುವಲ್ಲ. ನಾನು ಅಭ್ಯರ್ಥಿಯಾಗಿದ್ದಾಗಲೂ ಪ್ರಚಾರಕ್ಕೆ ದರ್ಶನ್ ಅವರನ್ನು ಕರೆದಿರಲಿಲ್ಲ. ಸ್ವತಃ ಅವರೇ ಬಂದು ನನ್ನ ಪರವಾಗಿ ಪ್ರಚಾರ ಮಾಡಿದ್ದರು. ಸುಮಮ್ಮ ಏನೇ ಕೆಲಸ ಹೇಳಿದರೂ ಮಾಡುತ್ತೇನೆ ಎಂದು ದರ್ಶನ್ ಹೇಳಿದ್ದರು. ಅದು ನನ್ನ ವಿಚಾರದಲ್ಲಿ ಮಾತ್ರವೇ ಹೊರತು ಬೇರೆಯವರ ವಿಚಾರದಲ್ಲಿ ಅಲ್ಲ. ಕಳೆದ ವಿಧಾನಸಭಾ ಚುನಾವಣೆಯಲ್ಲಿ ದರ್ಶನ್ ಅವರು ಮಂಡ್ಯದಲ್ಲಿ ಕಾಂಗ್ರೆಸ್ ಮತ್ತು ಬಿಜೆಪಿ ಅಭ್ಯರ್ಥಿಗಳ ಪರ ಪ್ರಚಾರ ಮಾಡಿದ್ದರು. ಅವರು ಯಾವ ಅಭ್ಯರ್ಥಿ ಪರ ಪ್ರಚಾರಕ್ಕೆ ಹೋಗುತ್ತಾರೆ ಎಂಬುದು ಅವರಿಗೆ ಬಿಟ್ಟ ವಿಚಾರ ಎಂದು ಸ್ಪಷ್ಟಪಡಿಸಿದರು. ಸುದ್ದಿಗೋಷ್ಠಿಯಲ್ಲಿ ಶಾಸಕ ಟಿ.ಎಸ್. ಶ್ರೀವತ್ಸ, ಬಿಜೆಪಿ ನಗರಾಧ್ಯಕ್ಷ ಎಲ್.ನಾಗೇಂದ್ರ, ನಗರ ವಕ್ತಾರ ಮೋಹನ್‌ಕುಮಾರ್, ಬಿಜೆಪಿ ನಗರ ಪ್ರಧಾನ ಕಾರ್ಯದರ್ಶಿ ಕೇಬಲ್ ಮಹೇಶ್, ಮಾಧ್ಯಮ ಸಂಚಾಲಕ ಮಹೇಶ್‌ರಾಜೇ ಅರಸ್, ವಸಂತ್ ಮತ್ತಿತರರು ಇದ್ದರು.

ಚಾರಿತ್ರ್ಯ ವಧೆ ಸರಿಯಲ್ಲ

ಹುಬ್ಬಳ್ಳಿಯಲ್ಲಿ ನಡೆದ ನೇಹಾ ಹಿರೇಮಠ ಹತ್ಯೆ ಪ್ರಕರಣಕ್ಕೆ ಸಂಬಂಧಿಸಿದಂತೆ ಸಾಮಾಜಿಕ ಜಾಲತಾಣಗಳಲ್ಲಿ ಕೆಲ ಫೋಟೋಗಳು ಹರಿದಾಡುತ್ತಿವೆ. ಆಕೆಯ ಚಾರಿತ್ರ್ಯ ವಧೆ ಮಾಡುತ್ತಿರುವುದು ನೋವಿನ ಸಂಗತಿ. ಯಾರೋ ಒಬ್ಬರು ಮಾಡಿದ ತಪ್ಪಿಗೆ ಇಡೀ ಸಮುದಾಯವನ್ನೇ ತಪ್ಪು ಎನ್ನುವುದು ಸರಿಯಲ್ಲ. ಆದರೆ, ಕೃತ್ಯಗಳು ನಡೆದಾಗ ಒಂದು ಸಮುದಾಯವನ್ನು ಮೆಚ್ಚಿಸಲು ಅದನ್ನು ಸಮರ್ಥನೆ ಮಾಡಿಕೊಳ್ಳುವುದು ಖಂಡನೀಯ. ಈ ಪ್ರಕರಣದಲ್ಲೂ ನೇಹಾ ಕೊಲೆಯನ್ನು ವೈಯಕ್ತಿಕ ಕಾರಣಕ್ಕೆ ಆಗಿರುವುದು ಎಂದು ಹೇಳಲಾಗುತ್ತಿದೆ. ಇದು ಸರಿಯಲ್ಲ. ವೈಯಕ್ತಿಕ ಕಾರಣಕ್ಕೆ ಎಂದು ಎಲ್ಲರೂ, ಎಲ್ಲರನ್ನು ಹತ್ಯೆ ಮಾಡಲು ಸಾಧ್ಯವಿಲ್ಲ. ವೈಯಕ್ತಿಕ, ರಾಜಕೀಯ, ಸಮುದಾಯದ ಕೊಲೆ ಎಂದು ಕಾನೂನಿನಲ್ಲಿ ಇಲ್ಲ. ಘಟನೆಯಲ್ಲಿ ಧರ್ಮವನ್ನು ಎಳೆದು ತರುವುದು ತಪ್ಪು ಆರೋಪಿಗೆ ಕಠಿಣ ಶಿಕ್ಷೆಯನ್ನು ವಿಧಿಸಬೇಕು.

–ಸುಮಲತಾ, ಸಂಸದೆ

ಸ್ನೇಹಿತನ ಮಗನಿಗೆ ಚಾಕೊಲೇಟ್ ಕೊಡಿಸಲು ಹೋದ ವ್ಯಕ್ತಿ ಅಪಘಾತದಲ್ಲಿ ದುರ್ಮರಣ

ಜೊತೆಯಲ್ಲಿದ್ದ ಬಾಲಕ ಸಣ್ಣಪುಟ್ಟ ಗಾಯಗಳೊಂದಿಗೆ ಪಾರು







ವಿರಾಜಪೇಟೆ, ಏ.20– ಸ್ನೇಹಿತನ ಮಗನಿಗೆ ಚಾಕೊಲೇಟ್ ಕೊಡಿಸಲು ಹೋದ ವ್ಯಕ್ತಿ ಅಪಘಾತದಲ್ಲಿ ಸಾವನ್ನಪ್ಪಿದ ಘಟನೆ ವಿರಾಜಪೇಟೆ–ಗೋಣಿಕೊಪ್ಪ ಮುಖ್ಯ ರಸ್ತೆಯ ಬಿಟ್ಟಂಗಾಲದಲ್ಲಿ ನಡೆದಿದೆ. ಕಕ್ಕಬೆ ನಿವಾಸಿ ಗಿರೀಶ್(25) ಎಂಬುವರೇ ಸಾವನ್ನಪ್ಪಿದ ದುರ್ದೈವಿ.

ಗಿರೀಶ್ ತನ್ನ ಮಾಲೀಕ ಚೇಂದಣ್ಣ ಪೊನ್ನಣ್ಣ ಅವರಿಗೆ ಸೇರಿದ ಸ್ಕೂಟಿಯನ್ನು ತೆಗೆದುಕೊಂಡು ಬಿಟ್ಟಂಗಾಲದ ಮುಖ್ಯ ರಸ್ತೆಯ ಬಳಿ ಇರುವ ಸೂಪರ್ ಮಾರ್ಕೆಟ್‌ನಲ್ಲಿ ತನ್ನ ಸ್ನೇಹಿತನ ಪುತ್ರ ದೀಕ್ಷಿತ್‌ಗೆ ಚಾಕೊಲೇಟ್ ಕೊಡಿಸಿ, ಬಳಿಕ ಸಮೀಪದ ಕೋಳಿ ಅಂಗಡಿಯಲ್ಲಿ ತನ್ನ ಸ್ನೇಹಿತನ ಮನೆಗೆ ಮಾಂಸ ಖರೀದಿಸಿದ್ದಾರೆ. ಬಳಿಕ ದ್ವಿಚಕ್ರ ವಾಹನ (ಕೆ.ಎ.05 ಜಿ.ಹೆಚ್–236)ದಲ್ಲಿ ಮುಖ್ಯರಸ್ತೆಗೆ ಬರುತ್ತಿದ್ದ ಸಂದರ್ಭ ಬೆಂಗಳೂರಿನಿಂದ ವಿರಾಜಪೇಟೆ ಮಾರ್ಗವಾಗಿ ಮಡಿಕೇರಿಗೆ ಬರುತ್ತಿದ್ದ ಕೆಎಸ್‌ಆರ್‌ಟಿಸಿ ಬಸ್ (ಕೆಎ.21 ಎಫ್–0142) ಡಿಕ್ಕಿ ಹೊಡೆದಿದ್ದು, ಗಂಭೀರವಾಗಿ ಗಾಯಗೊಂಡ ಗಿರೀಶ್ ಆಸ್ಪತ್ರೆಗೆ ಸಾಗಿಸುವ ಮಾರ್ಗ ಮಧ್ಯೆ ಮೃತಪಟ್ಟಿದ್ದಾರೆ. ಹಿಂಬದಿ ಸವಾರ 11 ವರ್ಷ ಪ್ರಾಯದ ದೀಕ್ಷಿತ್‌ಗೆ ವಿರಾಜಪೇಟೆ ಸರಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆಗೆ ದಾಖಲಿಸಲಾಗಿದೆ. ಈ ಘಟನೆ ಕುರಿತು ವಿರಾಜಪೇಟೆ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಪೊಲೀಸರು ಮುಂದಿನ ಕಾನೂನು ಕ್ರಮ ಕೈಗೊಂಡಿದ್ದಾರೆ.

ದುಷ್ಕರ್ಮಿಗಳ ಗುಂಡೇಟಿಗೆ ಕಾಡೆಮ್ಮೆ ಬಲಿ



ಗುಂಡೇಟಿಗೆ ಕಾಡೆಮ್ಮೆ ಬಲಿಯಾದ ವಿರಾಜಪೇಟೆ ತಾಲೂಕಿನ ಚೆನ್ನಂಗಿ ಅಬ್ಬೂರು ಗ್ರಾಮಕ್ಕೆ ಅರಣ್ಯ ಇಲಾಖೆ ಅಧಿಕಾರಿಗಳು ಮತ್ತು ಸಿಬ್ಬಂದಿ ಭೇಟಿ ನೀಡಿ, ಪರಿಶೀಲನೆ ನಡೆಸಿದರು.

ಸಿದ್ದಾಪುರ, ಏ.20– ದುಷ್ಕರ್ಮಿಗಳ ಗುಂಡೇಟಿಗೆ 11 ವರ್ಷ ಪ್ರಾಯದ ಗಂಡು ಕಾಡೆಮ್ಮೆ ಬಲಿಯಾಗಿರುವ ಘಟನೆ ವಿರಾಜಪೇಟೆ ತಾಲೂಕಿನ ಚೆನ್ನಂಗಿ ಅಬ್ಬೂರು ಬಳಿ ನಡೆದಿದೆ. ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶದ ಆನೆಚೌಕೂರು ವನ್ಯಜೀವಿ ವಲಯದ ಬಫರ್‌ಝೋನ್ ಪ್ರದೇಶಕ್ಕೆ ಸೇರಿರುವ ಚನ್ನಂಗಿ ದೇವಮಚ್ಚಿ ಮೀಸಲು ಅರಣ್ಯ ಪ್ರದೇಶದ ಅಬ್ಬೂರು ಗಸ್ತಿನ ಶ್ಯಾಮಚಂದ್ರರವರ ಕಾಫಿ ತೋಟಕ್ಕೆ ಹೊಂದಿಕೊಂಡಂತೆ ಗಡಿ ಭಾಗದ ಇಪಿಟಿ. ಜಾಗದಲ್ಲಿ ಕಾಡೆಮ್ಮೆ ಗುಂಡೇಟಿಗೆ ಬಲಿಯಾಗಿರುವುದು ಕಂಡು ಬಂದಿದೆ

ಮೇಲ್ನೋಟಕ್ಕೆ ಯಾರೋ ದುಷ್ಕರ್ಮಿಗಳು ಗುಂಡು ಹಾರಿಸಿ ಹತ್ಯೆ ಮಾಡಿರಬಹುದು ಎಂದು ಅಂದಾಜಿಸಲಾಗಿದ್ದು ಸ್ಥಳಕ್ಕೆ ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶದ ಉಪ ಅರಣ್ಯ ಸಂರಕ್ಷಣಾಧಿಕಾರಿಗಳು ಮತ್ತು ನಿರ್ದೇಶಕರಾದ ಹರ್ಷಕುಮಾರ ಚಿಕ್ಕನರಗುಂದ, ವನ್ಯಜೀವಿ ಉಪ–ವಿಭಾಗದ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಡಿ.ಎಸ್.ದಯಾನಂದ್, ವನ್ಯಜೀವಿ ವೈದ್ಯಾಧಿಕಾರಿ ರಮೇಶ.ಹೆಚ್, ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶದ ಆನೆಗಳ ಪ್ರಭಾರಕರಾದ ದೇವರಾಜು.ಡಿ, ಆನೆಚೌಕೂರು ವಲಯ ಅರಣ್ಯಾಧಿಕಾರಿ ಹಾಗೂ ಸಿಬ್ಬಂದಿ ಭೇಟಿ ನೀಡಿ ಸ್ಥಳ ಪರಿಶೀಲನೆ ಮಾಡಿ ಅಪರಿಚಿತ ದುಷ್ಕರ್ಮಿಗಳ ಮೇಲೆ ಪ್ರಕರಣ ದಾಖಲಿಸಿರುತ್ತಾರೆ. ಸದರಿ ಕೃತ್ಯ ನಡೆಸಿದ ದುಷ್ಕರ್ಮಿಗಳ ಪತ್ತೆ ಕಾರ್ಯಾಚರಣೆ ನಡೆಯುತ್ತಿದೆ ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕುಶಾಲನಗರ ಬಳಿ ರಸ್ತೆ ಅಪಘಾತದಲ್ಲಿ ಬಿಜೆಪಿ ಕಾರ್ಯಕರ್ತ ಸಾವು

ಮಡಿಕೇರಿ ಡಿಸಿ ಕಚೇರಿ ಎದುರು ಬಿಜೆಪಿ ಪ್ರತಿಭಟನೆ



ಮಡಿಕೇರಿ ಜಿಲ್ಲಾಧಿಕಾರಿಗಳ ಕಚೇರಿ ಮುಂದೆ ಪ್ರತಿಭಟನೆ ನಡೆಸುತ್ತಿರುವ ಬಿಜೆಪಿ ಕಾರ್ಯಕರ್ತರು.

ಮಡಿಕೇರಿ,ಏ.20– ಕುಶಾಲನಗರ ತಾಲೂಕಿನ ವಾಲ್ನೂರು ಗ್ರಾಮದಲ್ಲಿ ನಡೆದ ಅಪಘಾತ ಪ್ರಕರಣವನ್ನು ಖಂಡಿಸಿ, ಕೊಡಗು ಜಿಲ್ಲಾ ಬಿಜೆಪಿ ವತಿಯಿಂದ ಮಡಿಕೇರಿಯಲ್ಲಿ ಪ್ರತಿಭಟನೆ ನಡೆಸಲಾಯಿತು.

ನಗರದ ಜಿಲ್ಲಾಧಿಕಾರಿಗಳ ಕಚೇರಿ ಎದುರು ಪ್ರತಿಭಟನೆ ನಡೆಸಿದ ಬಿಜೆಪಿ ಮುಖಂಡರು ಹಾಗೂ ಕಾರ್ಯಕರ್ತರು, ಕಾಂಗ್ರೆಸ್ ಸರಕಾರದ ವಿರುದ್ಧ ಘೋಷಣೆಗಳನ್ನು ಕೂಗಿ ಆಕ್ರೋಶ ವ್ಯಕ್ತಪಡಿಸಿದರು. ಅಪಘಾತದಲ್ಲಿ ಮೃತಪಟ್ಟ ಬಿಜೆಪಿ ಕಾರ್ಯಕರ್ತ ರಾಮಪ್ಪ ಅವರ ಕುಟುಂಬಕ್ಕೆ ಹಾಗೂ ಗಾಯಾಳುಗಳಿಗೆ ಸರಕಾರ ಸೂಕ್ತ ಪರಿಹಾರ ನೀಡಬೇಕೆಂದು ಒತ್ತಾಯಿಸಿದರು. ರಾಜ್ಯದಲ್ಲಿ ಕಾಂಗ್ರೆಸ್ ಸರಕಾರ ಅಧಿಕಾರಕ್ಕೆ ಬಂದ ನಂತರ ತುಷ್ಟೀಕರಣ ರಾಜಕಾರಣದಿಂದಾಗಿ ದೌರ್ಜನ್ಯ ಮತ್ತು ಅಪರಾಧ ಪ್ರಕರಣಗಳು ಅಧಿಕವಾಗಿವೆ ಎಂದು ಆರೋಪಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಮಾಜಿ ಶಾಸಕ ಕೆ.ಜಿ.ಬೋಪಯ್ಯ, ಕಾಂಗ್ರೆಸ್ ನೇತೃತ್ವದ ರಾಜ್ಯ ಸರಕಾರ ಆಡಳಿತಕ್ಕೆ ಬಂದು 11 ತಿಂಗಳು ಕಳೆದಿದ್ದು, ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಸಂಪೂರ್ಣ ಹದಗೆಟ್ಟಿದೆ. ಕಳೆದ ಮೂರ್ನಾಲ್ಕು ದಿನಗಳಿಂದ ರಾಜ್ಯದಲ್ಲಿ 7ಕ್ಕೂ ಹೆಚ್ಚು ಹತ್ಯೆ ಪ್ರಕರಣಗಳು ನಡೆದಿದೆ. ಹುಬ್ಬಳ್ಳಿಯ ವಿದ್ಯಾರ್ಥಿನಿ ನೇಹಾ ಹಿರೆಮಠ್ ಹತ್ಯೆ ಪ್ರಕರಣ, ಚಿತ್ರತಾರೆಯಾದ ಭುವನ್ ಪೊನ್ನಣ್ಣ ಮತ್ತು ಹರ್ಷಿಕಾ ಪೂಣಚ್ಚ ಅವರ ಮೇಲಿನ ಹಲ್ಲೆ ಮತ್ತು ದರೋಡೆ ಪ್ರಕರಣ, ವಾಲ್ನೂರು ಗ್ರಾಮದಲ್ಲಿ ಬಿಜೆಪಿ ಕಾರ್ಯಕರ್ತ ರಾಮಪ್ಪ ಅವರ ಮೇಲೆ ನಡೆದ ಅಪಘಾತ ಪ್ರಕರಣ ಉದ್ದೇಶಪೂರ್ವಕವಾಗಿ ನಡೆದಿದೆ ಎಂದು ಆರೋಪಿಸಿದರು.

ಇವೆಲ್ಲಾ ಒಂದೇ ಸಮುದಾಯಕ್ಕೆ ಸೇರಿದವರಿಂದ ನಡೆದ ಘಟನೆಗಳಾಗಿವೆ ಎಂದು ಆರೋಪಿಸಿದ ಅವರು, ಕಾಂಗ್ರೆಸ್ ಸರಕಾರದ ಅಲ್ಪಸಂಖ್ಯಾತರ ಓಲೈಕೆ ರಾಜಕಾರಣ ಖಂಡನಾರ್ಹವಾಗಿದ್ದು, ಮೃತ ರಾಮಪ್ಪ ಅವರ ಕುಟುಂಬಕ್ಕೆ 25 ಲಕ್ಷ ಪರಿಹಾರ ಮತ್ತು ಇಬ್ಬರು ಗಾಯಾಳುಗಳಿಗೆ ತಲಾ 10 ಲಕ್ಷ ರೂಪಾಯಿಗಳ ಪರಿಹಾರ ನೀಡಬೇಕು. ಪ್ರಕರಣದ ಆರೋಪಿಗಳಿಗೆ ಕಠಿಣ ಶಿಕ್ಷೆ ವಿಧಿಸಬೇಕೆಂದು ಒತ್ತಾಯಿಸಿದರು.

ಜಿಲ್ಲಾ ಬಿಜೆಪಿ ಅಧ್ಯಕ್ಷ ನಾಪಂಡ ರವಿ ಕಾಳಪ್ಪ, ಮಾಜಿ ಅಧ್ಯಕ್ಷ ರಾಬಿನ್ ದೇವಯ್ಯ, ವಕ್ತಾರ ತಳೂರು ಕಿಶೋರ್ ಕುಮಾರ್, ಮಹಿಳಾ ಘಟಕದ ಜಿಲ್ಲಾಧ್ಯಕ್ಷೆ ಅನಿತಾ ಪೂವಯ್ಯ, ನಗರಾಧ್ಯಕ್ಷ ಉಮೇಶ್ ಸುಬ್ರಮಣಿ, ಪ್ರಧಾನ ಕಾರ್ಯದರ್ಶಿ ಬಿ.ಕೆ.ಜಗದೀಶ್, ವಿವಿಧ ಘಟಕಗಳ ಪದಾಧಿಕಾರಿಗಳು, ನಗರಸಭೆಯ ಬಿಜೆಪಿ ಸದಸ್ಯರು ಹಾಗೂ ಕಾರ್ಯಕರ್ತರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

24ನೇ ಕುಂಡ್ಯೋಳಂಡ ಹಾಕಿ ಹಬ್ಬ

ಏ.27ಕ್ಕೆ ಸೆಮಿ, 28ಕ್ಕೆ ಫೈನಲ್ ಪಂದ್ಯ



ಮಡಿಕೇರಿ,ಏ.20– ನಾಪೋಕ್ಲುವಿನ ಕೆಪಿಎಸ್ ಶಾಲೆಯ ಜನರಲ್ ತಿಮ್ಮಯ್ಯ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಕೊಡವ ಕುಟುಂಬಗಳ ನಡುವಿನ ಪ್ರತಿಷ್ಠಿತ 24ನೇ ಕುಂಡ್ಯೋಳಂಡ ಹಾಕಿ ಹಬ್ಬದ ಸೆಮಿಫೈನಲ್ ಹಾಗೂ ಫೈನಲ್ ಪಂದ್ಯಾವಳಿಯು ಏ.27 ಮತ್ತು ಏ.28ರಂದು ನಡೆಯಲಿದೆ.

ಎರಡು ದಿನ ನಡೆಯುವ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಕುಂಡ್ಯೋಳಂಡ ಕುಟುಂಬದ ಪಟ್ಟೆದಾರ ಕುಂಡ್ಯೋಳಂಡ ಎ.ನಾಣಯ್ಯ ವಹಿಸಲಿದ್ದಾರೆ.

ಏ.27ರಂದು ಬೆಳಿಗ್ಗೆ 10 ಗಂಟೆಗೆ ನಡೆಯುವ ಸೆಮಿಫೈನಲ್ ಪಂದ್ಯಾವಳಿಯ ಸಭಾ ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಗಳಾಗಿ ಕರ್ನಾಟಕ ಉಚ್ಚ ನ್ಯಾಯಾಲಯದ ನ್ಯಾಯಮೂರ್ತಿ ಚೆಪ್ಪುಡಿರ ಮೊಣ್ಣಪ್ಪ ಪೂಣಚ್ಚ ಪಾಲ್ಗೊಳ್ಳಲಿದ್ದು, ಕೊಡವ ಹಾಕಿ ಅಕಾಡೆಮಿ ಅಧ್ಯಕ್ಷ ಪಾಂಡಂಡ ಕೆ.ಬೋಪಣ್ಣ ಉಪಸ್ಥಿತರಿರುವರು. 2ನೇ ಪಂದ್ಯದ ಅತಿಥಿಯಾಗಿ ಡಾ.ಕಲಿಯಾಟಂಡ ಚಿಣ್ಣಪ್ಪ, ಮಾಜಿ ಸೈನಿಕರ ಸಂಘದ ಅಧ್ಯಕ್ಷ ಮೇ.ಜ.ಬಾಚಮಂಡ ಎ.ಕಾರ್ಯಪ್ಪ ಪಾಲ್ಗೊಳ್ಳಲಿದ್ದಾರೆ.

ಕಾರ್ಯಕ್ರಮದಲ್ಲಿ ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಕ್ರೀಡಾಪಟುಗಳು, ಪಂದ್ಯಾವಳಿಯಲ್ಲಿ ಕಾರ್ಯನಿರ್ವಹಿಸಿದ ಅಂಪೈರ್‌ಗಳು, ತಾಂತ್ರಿಕವರ್ಗ ಮತ್ತು ಸಹಕಾರ ನೀಡಿದ ಎಲ್ಲರನ್ನು ಅಭಿನಂದಿಸಿ ಗೌರವಿಸಲಾಗುವುದು. ಏ.28ರಂದು ಬೆಳಿಗ್ಗೆ 10.30 ಗಂಟೆಗೆ ನಡೆಯಲಿರುವ ಫೈನಲ್ ಪಂದ್ಯಾವಳಿಯ ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಗಳಾಗಿ ಮುಖ್ಯಮಂತ್ರಿಗಳ ಕಾನೂನು ಸಲಹೆಗಾರ ಹಾಗೂ ವಿರಾಜಪೇಟೆ ವಿಧಾನಸಭಾ ಕ್ಷೇತ್ರದ ಶಾಸಕ ಅಜ್ಜಿಕುಟ್ಟೀರ ಎಸ್.ಪೊನ್ನಣ್ಣ ಪಾಲ್ಗೊಳ್ಳಲಿದ್ದು, ಕೊಡವ ಹಾಕಿ ಅಕಾಡೆಮಿಯ ಅಧ್ಯಕ್ಷ ಪಾಂಡಂಡ ಕೆ.ಬೋಪಣ್ಣ ಉಪಸ್ಥಿತರಿರುವರು.

ಅತಿಥಿಗಳಾಗಿ ಸಂಸದ ಪ್ರತಾಪ್ ಸಿಂಹ, ಹೈದರಾಬಾದ್ ವಿದೇಶಿ ತನಿಖಾ ಘಟಕದ ಉಪ ನಿರ್ದೇಶಕ ಮುಕ್ಕಾಟಿರ ಪುನಿತ್ ಕುಟ್ಟಯ್ಯ, ಉದ್ಯಮಿ ಕೊಡಂಗಡ ರವಿ ಕರುಂಬಯ್ಯ, ಐಆರ್‌ಎಸ್ ಜಾರಿ ನಿರ್ದೇಶನಾಲಯದ ಉಪ ನಿರ್ದೇಶಕ ಡಾ.ಕೊಟ್ಟಂಗಡ ಪೆಮ್ಮಯ್ಯ, ನಾರಾಯಣ ಆರೋಗ್ಯ ಸಮೂಹದ ಮುಖ್ಯ ವೈದ್ಯಕೀಯ ನಿರ್ದೇಶಕ ಡಾ.ಪುಚ್ಚಿಮಾಡ ಎಂ.ಉತ್ತಪ್ಪ ಪಾಂಡಂಡ ಲೀಲಾ ಕುಟ್ಟಪ್ಪ, ಒಲಂಪಿಯನ್ ಡಾ.ಅಂಜಪರವಂಡ ಬಿ.ಸುಬ್ಬಯ್ಯ, ಕೊಡವ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಅಜ್ಜಿಕಂಡ ಮಹೇಶ್ ನಾಚಯ್ಯ, ಜಿಲ್ಲಾಧಿಕಾರಿ ವೆಂಕಟ್ ರಾಜಾ, ಕೊಡವ ಸಮಾಜಗಳ ಒಕ್ಕೂಟದ ಅಧ್ಯಕ್ಷ ಕಳ್ಳಿಚಂಡ ವಿಷ್ಣು ಕಾರ್ಯಪ್ಪ, ಪೊಲೀಸ್ ವರಿಷ್ಠಾಧಿಕಾರಿ ಕೆ.ರಾಮರಾಜನ್ ಸೇರಿದಂತೆ ಗಣ್ಯರು ಪಾಲ್ಗೊಳ್ಳಲಿದ್ದಾರೆ ಎಂದು ಕೊಡವ ಹಾಕಿ ಅಕಾಡೆಮಿಯ ಅಧ್ಯಕ್ಷ ಪಾಂಡಂಡ ಕೆ.ಬೋಪಣ್ಣ, ಹಾಕಿ ಹಬ್ಬದ ಅಧ್ಯಕ್ಷ ರಮೇಶ್ ಮುದ್ದಯ್ಯ ಹಾಗೂ ಸಂಚಾಲಕ ಕುಂಡ್ಯೋಳಂಡ ದಿನೇಶ್ ಕಾರ್ಯಪ್ಪ ಪತ್ರಿಕಾ ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಇಂದಿನಿಂದ ಅರಮಣಮಾಡ ಕ್ರಿಕೆಟ್ ನಮ್ಮೆ



ಅರಮಣಮಾಡ ಕಪ್ ಲಾಂಛನ

ಗೋಣಿಕೊಪ್ಪ: ಅರಮಣಮಾಡ ಒಕ್ಕ ಮತ್ತು ಕೊಡವ ಕ್ರಿಕೆಟ್ ಅಕಾಡೆಮಿ ಸಹಯೋಗದಲ್ಲಿ ವಿಜಯಲಕ್ಷ್ಮಿ ಕಾಲೇಜು ಮತ್ತು ಸರ್ಕಾರಿ ಪ್ರಾಥಮಿಕ ಶಾಲಾ ಮೈದಾನದಲ್ಲಿ ನಾಳೆ(ಏ.21) ಅರಮಣಮಾಡ ಕ್ರಿಕೆಟ್ ನಮ್ಮೆಗೆ ಚಾಲನೆ ದೊರೆಯಲಿದ್ದು, ಮೇ 19 ರವರೆಗೆ ನಡೆಯಲಿದೆ. 313 ತಂಡಗಳು ಸೆಣಸಾಡಲಿವೆ. ಪುರುಷರ 264 ತಂಡಗಳು, ಮಹಿಳೆಯರ 49 ತಂಡಗಳು ಪಾಲ್ಗೊಳ್ಳುತ್ತಿವೆ. ಉತ್ತರ ಮತ್ತು ದಕ್ಷಿಣ ಭಾಗದ ತಂಡಗಳ ನಡುವೆ ಪ್ರದರ್ಶನ ಪಂದ್ಯ ನಡೆಯಲಿದೆ.

ಬೆಳಗ್ಗೆ 8 ಗಂಟೆಗೆ ಗಣಪತಿ ದೇವಸ್ಥಾನದಲ್ಲಿ ಪೂಜೆ ಸಲ್ಲಿಸಿ ಮೆರವಣಿಗೆ ಮೂಲಕ ಮೈದಾನ ಪ್ರವೇಶಿಸಲಾಗುತ್ತದೆ. 10.45ಕ್ಕೆ ಧ್ವಜಾರೋಹಣ ನೆರವೇರಿಸಲಾಗುತ್ತದೆ ಮುಖ್ಯ ಅತಿಥಿಯಾಗಿ(ನಿ) ಮೇ.ಜ. ಪಾರುವಂಗಡ ಎಂ.ಕಾರ್ಯಪ್ಪ, ಶಾಸಕ ಅಜ್ಜಿಕುಟ್ಟೀರ ಎಸ್. ಪೊನ್ನಣ್ಣ, ಕೊಡವ ಮಹಿಳಾ ಕ್ರಿಕೆಟ್ ಸ್ಥಾಪಕಿ ಐಚೆಟ್ಟೀರ ಸುನಿತಾ, ಹಾಕಿ ಕರ್ನಾಟಕ ಕಾರ್ಯದರ್ಶಿ ಡಾ. ಅಂಜಪರವಂಡ ಬಿ.ಸುಬ್ಬಯ್ಯ, ಕೆಎಎಸ್ ಅಧಿಕಾರಿ ಚೊಟ್ಟೆಯಂಡಮಾಡ ಕೆ.ರಾಜೇಂದ್ರ, ಕೊಡವ ಕ್ರಿಕೆಟ್ ಅಕಾಡೆಮಿ ಅಧ್ಯಕ್ಷ ಕೀತಿಯಂಡ ಕಾರ್ಸನ್ ಕಾರ್ಯಪ್ಪ ವಿಜಯಲಕ್ಷ್ಮಿ ಜೂನಿಯರ್ ಕಾಲೇಜು ಆಡಳಿತ ಮಂಡಳಿ ಅಧ್ಯಕ್ಷ ಅಳಮೇಂಗಡ ಬೋಸ್ ಮಂದಣ್ಣ, ಬಾಳೆಲೆ ಗ್ರಾಪಂ ಅಧ್ಯಕ್ಷೆ ಮುಕ್ಕಾಟೀರ ಜಾನಕ್ಕಿ ಕಾವೇರಪ್ಪ ಪಾಲ್ಗೊಳ್ಳಲಿದ್ದಾರೆ.

ಮತ್ತೇ ಮೋದಿ ಪ್ರಧಾನಿಯಾಗಲು ನನಗೊಂದು ಅವಕಾಶ ಕೊಡಿ

ಚಾ.ನಗರ ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಎಸ್.ಬಾಲರಾಜು ಮನವಿ



ಚಾ.ನಗರ ತಾಲೂಕಿನ ಹರವೆ ಜಿ.ಪಂ. ಕ್ಷೇತ್ರದ ವ್ಯಾಪ್ತಿಯ ಬಿಜೆಪಿ ಚುನಾವಣಾ ಪ್ರಚಾರ ಸಭೆಯನ್ನು ಅಭ್ಯರ್ಥಿ ಎಸ್. ಬಾಲರಾಜು, ಬಿಜೆಪಿ ಜಿಲ್ಲಾಧ್ಯಕ್ಷ ಸಿ.ಎಸ್. ನಿರಂಜನ್‌ಕುಮಾರ್ ಉದ್ಘಾಟಿಸಿದರು.

ಚಾಮರಾಜನಗರ, ಏ.20– ಲೋಕಸಭಾ ಚುನಾವಣೆಯು ಅಭಿವೃದ್ಧಿ ಹಾಗೂ ಸರ್ವರ ಏಳಿಗೆಗಾಗಿ ನಡೆಯುತ್ತಿರುವ ಚುನಾವಣೆಯಾಗಿದ್ದು, ಪ್ರಧಾನಿ ನರೇಂದ್ರ ಮೋದಿ ಅವರು ಮತ್ತೊಮ್ಮೆ ಪ್ರಧಾನಿಯಾದರೆ, ದೇಶದ ಅಭಿವೃದ್ಧಿ ಚಿತ್ರಣವೇ ಬದಲಾಗುತ್ತದೆ. ಹೀಗಾಗಿ ಬಿಜೆಪಿಗೆ ಮತ ಹಾಕುವ ಮೂಲಕ ನಿಮ್ಮೆಲ್ಲರ ಸೇವೆ ಮಾಡಲು ನನಗೊಂದು ಅವಕಾಶ ನೀಡಿ ಎಂದು ಚಾಮರಾಜನಗರ ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಎಸ್.ಬಾಲರಾಜು ಮನವಿ ಮಾಡಿದರು.

ತಾಲೂಕಿನ ಹರವೆ ಜಿಪಂ ಕ್ಷೇತ್ರದ ವ್ಯಾಪ್ತಿಯ ಬಿಜೆಪಿ ಚುನಾವಣಾ ಪ್ರಚಾರ ಸಭೆಯಲ್ಲಿ ಮಾತನಾಡಿದ ಅವರು, ಕಾಂಗ್ರೆಸ್ ಪಕ್ಷ ಕೇವಲ ಗ್ಯಾರಂಟಿ ಹೆಸರಿನಲ್ಲಿ ಅಭಿವೃದ್ಧಿಯನ್ನು ಮರೆತು ಹೋಗಿದೆ. ರೈತರ ಯೋಜನೆಗಳಿಗೆ ಹಣ ನೀಡಿಲ್ಲ. ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ವರ್ಗಗಳ ಕಲ್ಯಾಣಕ್ಕೆ ಮೀಸಲಾಗಿದ್ದ 27 ಸಾವಿರ ಕೋಟಿ ರೂ.ಗಳನ್ನು ಗ್ಯಾರಂಟಿ ಯೋಜನೆಗಳಿಗೆ ಬಳಿಕೆ ಮಾಡಿ ಆ ಸಮುದಾಯಗಳಿಗೆ ಅನ್ಯಾಯ ಮಾಡಿದೆ. ಇದನ್ನು ಮರೆಮಾಚುವ ಸಲುವಾಗಿ ಬಿಜೆಪಿ ಬಂದರೆ ಸಂವಿಧಾನ ಬದಲಾಯಿಸುತ್ತಾರೆ ಎಂಬ ಸುಳ್ಳು ಸುದ್ದಿಯನ್ನು ರಾಜ್ಯಾದ್ಯಂತ ಹಬ್ಬಿಸಿ ಜನರನ್ನು ದಿಕ್ಕು ತಪ್ಪಿಸುತ್ತಿದ್ದಾರೆ ಎಂದು ದೂರಿದರು.

ಈಗಾಗಲೇ ಪ್ರಧಾನಿ ನರೇಂದ್ರ ಮೋದಿ, ಅಂಬೇಡ್ಕರ್ ಅವರೇ ಮತ್ತೆ ಬಂದರೂ ಸಂವಿಧಾನ ಬದಲಾವಣೆ ಮಾಡಲು ಸಾಧ್ಯವಿಲ್ಲ ಎಂದು ಸ್ಪಷ್ಟಪಡಿಸಿದ್ದಾರೆ. ಮೋದಿ ಅವರು ಹತ್ತು ವರ್ಷಗಳ ಕಾಲ ಭ್ರಷ್ಟಾಚಾರಮುಕ್ತ ಆಡಳಿತ ನೀಡಿದ್ದಾರೆ. ಇನ್ನು ಸಹಿಸಿಕೊಳ್ಳಲು ಆಗದ ಕಾಂಗ್ರೆಸ್ ಮುಖಂಡರು ಮೋದಿ ವಿರುದ್ಧ ಇನ್ನಾವುದೇ ಅಸ್ತ್ರ ಬಳಸಲು ಸಾಧ್ಯವಿಲ್ಲ ಎಂದು ಈಗ ಸಂವಿಧಾನ ಬದಲಾವಣೆಯ ಹಳೇ ಪ್ಲೇಟ್ ತಿರುಗಿಸಲು ಮುಂದಾಗಿದ್ದಾರೆ. ದೇಶದ ಭದ್ರತೆ ಹಾಗೂ ವಿಶ್ವಶ್ರೇಷ್ಠವಾದ ಆಡಳಿತಕ್ಕಾಗಿ, ರಾಜ್ಯ ನಾಯಕರಾದ ಯಡಿಯೂರಪ್ಪ, ವಿಜಯೇಂದ್ರ, ದೇವೇಗೌಡರು ಹಾಗೂ ಕುಮಾರಸ್ವಾಮಿ ನಾಯಕತ್ವದಲ್ಲಿ ಎನ್‌ಡಿಎ ಅನ್ನು ಗೆಲ್ಲಿಸಿ ಮತ್ತೊಮ್ಮೆ ಮೋದಿ ಅವರನ್ನು ಪ್ರಧಾನಿ ಮಾಡೋಣ ಎಂದರು.

20 ಕೆರೆಗಳಿಗೆ ನೀರು ತುಂಬಿಸಿದ್ದು ಬಿಜೆಪಿ: ಕಳೆದ ಬಿಜೆಪಿ ಸರ್ಕಾರದ ಅವಧಿಯಲ್ಲಿ ಮುಖ್ಯಮಂತ್ರಿಗಳಾಗಿದ್ದ ಯಡಿಯೂರಪ್ಪ ಅವರು ಈ ಭಾಗದ 20 ಕೆರೆಗಳಿಗೆ ಕಬಿನಿಯಿಂದ ನೀರು ತುಂಬಿಸುವ ಮೂಲಕ ಶಾಶ್ವತ ಬರ ಪ್ರದೇಶ ಎಂಬ ಹಣೆಪಟ್ಟಿಯನ್ನು ಹೋಗಲಾಡಿಸಿದರು. ಅವರು ಅಂದು 220 ಕೋಟಿ ರೂ. ವೆಚ್ಚದಲ್ಲಿ ಈ ಭಾಗದ ಕೆರೆಗಳಿಗೆ ನೀರು ತುಂಬಿಸಿ, ಜನ ಜಾನುವಾರುಗಳಿಗೆ ಕುಡಿಯುವ ನೀರು ಕೊಟ್ಟರು. ಇಂಥ ಯೋಜನೆಯನ್ನು ತಂದ ಯಡಿಯೂರಪ್ಪ ಹಾಗೂ ಬಿಜೆಪಿ ಪಕ್ಷವನ್ನು ತಾವೆಲ್ಲರು ಬೆಂಬಲಿಸುವ ಮೂಲಕ ಬಾಲರಾಜುಗೆ ಹೆಚ್ಚು ಲೀಡ್ ಕೊಟ್ಟು ಲೋಕಸಭೆಗೆ ಕಳುಹಿಸಿಕೊಡಿ ಎಂದು ಬಿಜೆಪಿ ಜಿಲ್ಲಾಧ್ಯಕ್ಷ ಸಿ.ಎಸ್. ನಿರಂಜನ್‌ಕುಮಾರ್ ಮನವಿ ಮಾಡಿದರು.

ಸಭೆಯಲ್ಲಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಮೂಡ್ನಾಕೂಡು ಪ್ರಕಾಶ್, ಗುಂಡ್ಲುಪೇಟೆ ಮಂಡಲದ ಅಧ್ಯಕ್ಷ ಮಹದೇವಪ್ರಸಾದ್, ಬಿಜೆಪಿ ಮಹಾ ಶಕ್ತಿ ಕೇಂದ್ರದ ಅಧ್ಯಕ್ಷ ಹರವೆ ಮಹೇಶ್, ಎಪಿಎಂಸಿ ಸದಸ್ಯ ಮಹದೇವಪ್ರಸಾದ್, ಗ್ರಾಪಂ ಸದಸ್ಯ ಗಿರೀಶ್, ಸುಬ್ಬನಾಯಕ, ಹರವೆ ಮಾದಪ್ಪ ಎಚ್.ಎಲ್. ಸುರೇಶ್, ವಕೀಲ ಮಂಜು, ಚುಡಾ ಮಾಜಿ ಅಧ್ಯಕ್ಷ ಶಾಂತಮೂರ್ತಿ, ಮಲೆಯೂರು ನಾಗೇಂದ್ರ, ಮಲ್ಲೇಶ್, ಜೆ.ಎಲ್.ಸುರೇಶ್, ಮಹಿಳಾ ಮೋರ್ಚಾ ಜಿಲ್ಲಾಧ್ಯಕ್ಷ ಮಲೆಯೂರು ಕಮಲಮ್ಮ, ಉತ್ತುವಳ್ಳಿ ಪದ್ಮ ಮೊದಲಾದವರು ಇದ್ದರು.

ಮಲೆಮಹದೇಶ್ವರ ಬೆಟ್ಟ ಗ್ರಾಪಂ ವ್ಯಾಪ್ತಿಯಲ್ಲಿ ಕಾಂಗ್ರೆಸ್ ಪ್ರಚಾರ

ಕಾಡಂಚಿನ ಗ್ರಾಮಗಳ ಜ್ವಲಂತ ಸಮಸ್ಯೆಗಳಿಗೆ ಶೀಘ್ರ ಪರಿಹಾರ



ಹನೂರು ಮಲೆಮಹದೇಶ್ವರ ಬೆಟ್ಟ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಸಚಿವ ಹೆಚ್.ಸಿ. ಮಹದೇವಪ್ಪ ಪ್ರಚಾರ ಸಭೆಯಲ್ಲಿ ಮಾತನಾಡಿದರು.

ಹನೂರು, ಏ.20 – ತಾಲೂಕಿನ ಮಲೆಮಹದೇಶ್ವರ ಬೆಟ್ಟ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿರುವ ಜ್ವಲಂತ ಸಮಸ್ಯೆಗಳನ್ನು ಚುನಾವಣೆ ಬಳಿಕ ಸಚಿವರು, ಹಿರಿಯ ಅಧಿಕಾರಿಗಳನ್ನು ಗ್ರಾಮಕ್ಕೆ ಕರೆತಂದು ಬಗೆಹರಿಸಲಾಗುವುದು ಎಂದು ಸಮಾಜ ಕಲ್ಯಾಣ ಇಲಾಖೆ ಸಚಿವ ಹೆಚ್.ಸಿ. ಮಹದೇವಪ್ಪ ತಿಳಿಸಿದರು.

ಹನೂರು ಕ್ಷೇತ್ರ ವ್ಯಾಪ್ತಿಯ ಮಲೆಮಹದೇಶ್ವರ ಬೆಟ್ಟ, ಮಾರ್ಟಳ್ಳಿ, ರಾಮಾಪುರ, ಕೌದಳ್ಳಿ, ಲೊಕ್ಕನಹಳ್ಳಿ ಗ್ರಾಮಗಳಲ್ಲಿ ಕಾಂಗ್ರೆಸ್ ಪಕ್ಷದ ಅಭ್ಯರ್ಥಿ ಸುನೀಲ್ ಬೋಸ್ ಪರ ಚುನಾವಣಾ ಪ್ರಚಾರ ನಡೆಸಿ ಅವರು ಮಾತನಾಡಿದರು.

ಕಾಡಂಚಿನಲ್ಲಿರುವ ಜನರಿಗೆ ಶಾಶ್ವತ ಪರಿಹಾರ ಸಿಗುವ ನಿಟ್ಟಿನಲ್ಲಿ ಮುಂದಿನ ದಿನಗಳಲ್ಲಿ ಅರಣ್ಯ ಇಲಾಖೆ ಸಚಿವರ ಜೊತೆ ಅಧಿಕಾರಿಗಳನ್ನೊಳಗೊಂಡಂತೆ ಮಲೆಮಹದೇಶ್ವರ ಬೆಟ್ಟದಲ್ಲಿ ಸಭೆ ನಡೆಸಿ ಕಾನೂನಾತ್ಮಕವಾಗಿ ಪರಿಹಾರ ದೊರಕಿಸಿಕೊಡಲಾಗುವುದು, ನನಗೆ ಮತ ಮುಖ್ಯವಲ್ಲ ಜನರ ಬದುಕು ಮುಖ್ಯ, ಹಾಗಾಗಿ ಕಾಡಂಚಿನ ಗ್ರಾಮಗಳಲ್ಲಿ ವಾಸಿಸುತ್ತಿರುವ ಜನರ ಸಮಸ್ಯೆಗಳನ್ನು ಮುಖ್ಯಮಂತ್ರಿ ಸಿದ್ದರಾಮಯ್ಯನವರ ಗಮನಕ್ಕೆ ತಂದು ಪರಿಹಾರ ಮಾಡುವುದಾಗಿ ಭರವಸೆ ನೀಡಿದರಲ್ಲದೇ ಈ ಬಾರಿಯ ಲೋಕಸಭಾ ಚುನಾವಣೆಯಲ್ಲಿ ಸ್ಪರ್ಧಿಸಿರುವ ಸುನೀಲ್ ಬೋಸ್ ಅವರಿಗೆ ತಮ್ಮ ಅಮೂಲ್ಯವಾದ ಮತವನ್ನು ನೀಡುವ ಮೂಲಕ ಜಯಶೀಲರನ್ನಾಗಿ ಮಾಡಬೇಕು ಎಂದು ಮನವಿ ಮಾಡಿದರು.

ಮಾಜಿ ಶಾಸಕ ಆರ್.ನರೇಂದ್ರ ಮಾತನಾಡಿ,

ಸಚಿವ ಡಾ. ಹೆಚ್.ಸಿ. ಮಹದೇವಪ್ಪ ಭರವಸೆ

ಸ್ವಾತಂತ್ರ್ಯ ಬಂದು 75 ವರ್ಷಗಳು ಕಳೆದರು ಬೇಡಗಂಪಣ ಸಮುದಾಯಕ್ಕೆ ಯಾರೊಬ್ಬರೂ ವಸತಿ ಸೌಲಭ್ಯ ಕಲ್ಪಿಸಲಿಲ್ಲ. ಕಳೆದ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರದ ಅವಧಿಯಲ್ಲಿ 1750 ಮನೆಗಳನ್ನು ನಿರ್ಮಿಸಿ ಕೊಟ್ಟಿದ್ದೇವೆ, ಮಲೆಮಹದೇಶ್ವರ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿರುವ ಕಾಡಂಚಿನ ಗ್ರಾಮಗಳಿಗೆ ಮೂಲಸೌಕರ್ಯಗಳನ್ನು ಕಲ್ಪಿಸಿದ್ದೇನೆ. 8 ಗ್ರಾಮಗಳಿಗೆ ವಿದ್ಯುತ್ ಸೌಲಭ್ಯ ಕಲ್ಪಿಸಲು 6 ಕೋಟಿ ವೆಚ್ಚದಲ್ಲಿ ಕ್ರಿಯಾಯೋಜನೆ ಮಾಡಿ ಸರ್ಕಾರಕ್ಕೆ ಸಲ್ಲಿಸಿದ್ದೆ. ವಿಧಾನಸಭಾ ಚುನಾವಣೆ ಬಂದ ಹಿನ್ನೆಲೆ ಸ್ಥಗಿತವಾಗಿದೆ, ಶಾಸಕರಾಗಿರುವವರು ಸಹ ಇದರ ಬಗ್ಗೆ ಗಮನಹರಿಸಲಿಲ್ಲ. ಮುಂದಿನ ದಿನಗಳಲ್ಲಿ ಈ ಬಗ್ಗೆ ಸಚಿವರು ಹಾಗೂ ಮುಖ್ಯಮಂತ್ರಿ ಸಿದ್ದರಾಮಯ್ಯನವರನ್ನು ಒತ್ತಾಯಿಸಿ ಅನುದಾನವನ್ನು ಬಿಡುಗಡೆ ಮಾಡಿಸಿ ಅಭಿವೃದ್ಧಿ ಪಡಿಸಲಾಗುವುದು ಎಂದರು.

ಕಾಂಗ್ರೆಸ್ ಅಭ್ಯರ್ಥಿ ಸುನಿಲ್ ಬೋಸ್ ಮಾತನಾಡಿ, ಕಾಂಗ್ರೆಸ್ ಸರ್ಕಾರ ನುಡಿದಂತ ನಡೆದ ಸರ್ಕಾರ ಚುನಾವಣಾ ಪೂರ್ವದಲ್ಲಿ ನೀಡಿದ್ದ 5 ಭರವಸೆಗಳನ್ನು ಸರ್ಕಾರ ಬಂದ 5 ತಿಂಗಳಲ್ಲಿ ಈಡೇರಿಸಿದೆ, ಕೇಂದ್ರದಲ್ಲಿ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದರೆ ಯುವ ನ್ಯಾಯ, ಮಹಿಳಾ ನ್ಯಾಯ, ರೈತ ನ್ಯಾಯ, ಶ್ರಮಿಕ ನ್ಯಾಯ ಪಾಲುದಾರಿಕೆಯ ನ್ಯಾಯ ಯೋಜನೆಯಡಿ ಬಡವರಿಗೆ ಉತ್ತಮ ಯೋಜನೆ ಕೊಡಲು ನಿರ್ಧರಿಸಲಾಗಿದೆ. ಈ ನಿಟ್ಟಿನಲ್ಲಿ ದೇಶದಲ್ಲಿ ಕಾಂಗ್ರೆಸ್ ಪಕ್ಷ ಅಧಿಕಾರಕ್ಕೆ ಬಂದರೆ ಈ ಎಲ್ಲ ಸೌಲಭ್ಯಗಳು ಬಡವರಿಗೆ ತಲುಪಲಿದೆ. ಇದಲ್ಲದೆ ನನಗೆ ಅಧಿಕಾರ ನೀಡಿದರೆ ಮಲೆಮಾದೇಶ್ವರ ಬೆಟ್ಟ ಕಾಡಂಚಿನ ಗ್ರಾಮಗಳ ಸಮಸ್ಯೆಗಳನ್ನು ಬಗೆಹರಿಸಲು ಪ್ರಾಮಾಣಿಕವಾಗಿ ಪ್ರಯತ್ನಿಸಲಾಗುವುದು ಎಂದರು.

ಈ ವೇಳೆ ಬಿಜೆಪಿ, ಜೆಡಿಎಸ್ ಪಕ್ಷಗಳನ್ನು ತೊರೆದು ಮಲೆಮಹದೇಶ್ವರ ಬೆಟ್ಟ ಗ್ರಾಮ ಪಂಚಾಯಿತಿ ಹಾಗೂ ಮಾರ್ಟಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಐವತ್ತಕ್ಕೂ ಹೆಚ್ಚು ಕಾರ್ಯಕರ್ತರು ಕಾಂಗ್ರೆಸ್ ಸೇರ್ಪಡೆಯಾದರು.

ಸಭೆಯಲ್ಲಿ ಮಾಜಿ ಸಂಸದ ಕಾಗಲವಾಡಿ ಶಿವಣ್ಣ, ಮಾಜಿ ಸಚಿವ ಕೋಟೆ ಶಿವಣ್ಣ, ಮಾಜಿ ಶಾಸಕ ಜಿ.ಎನ್.ನಂಜುಂಡಸ್ವಾಮಿ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾದ ಈಶ್ವರ್, ಮುಕುಂದ ವರ್ಮ, ಗ್ರಾಪಂ ಅಧ್ಯಕ್ಷ ಇಗ್ನೇಶಿ ಮುತ್ತು ಉಪಾಧ್ಯಕ್ಷೆ ನದಿಯಾ ರಾಮಲಿಂಗಂ, ಸದಸ್ಯರಾದ ಅರುಳ್ ಸೆಲ್ವಂ, ಸುರೇಶ್, ಪಪಂ ಸದಸ್ಯ ಗಿರೀಶ್, ಹರೀಶ್, ಕೆಪಿಸಿಸಿ ಸದಸ್ಯ ನರೇಂದ್ರ, ಯುವ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ, ಚೇತನ್ ದೊರೆರಾಜು, ಅಲೆಮಾರಿ ಸಂಘದ ಅಧ್ಯಕ್ಷೆ ಪಲ್ಲವಿ, ಮುಖಂಡರಾದ ನವನೀತ್ ಗೌಡ, ಪೆದ್ದನ ಪಾಳ್ಯ ಮಣಿ, ಶಿವು, ಪಾಳ್ಯ ಕೃಷ್ಣ, ಎಲ್.ನಾಗೇಂದ್ರ ರಾಜು, ಮಾದೇಶ್, ಅಶ್ವಿನ್ ಉದ್ಯಮಿ ರಂಗಸ್ವಾಮಿ ಸೇರಿದಂತೆ ಇನ್ನಿತರರು ಹಾಜರಿದ್ದರು.

ನೇಹಾ ಹಿರೇಮಠ ಕೊಲೆ ಖಂಡಿಸಿ ಎಬಿವಿಪಿ ಪ್ರತಿಭಟನೆ



ಚಾಮರಾಜನಗರ: ಹುಬ್ಬಳ್ಳಿಯ ಬಿವಿಬಿ ಕಾಲೇಜಿನ ವಿದ್ಯಾರ್ಥಿನಿ ನೇಹಾ ಹಿರೇಮಠ ಕೊಲೆ ಖಂಡಿಸಿ ನಗರದಲ್ಲಿ ಶನಿವಾರ ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್‌ನಿಂದ ಪ್ರತಿಭಟನೆ ನಡೆಯಿತು.

ನಗರದ ಭುವನೇಶ್ವರಿ ವೃತ್ತದಲ್ಲಿ ಸಮಾವೇಶಗೊಂಡ ಸಂಘಟನೆಯ ಕಾರ್ಯಕರ್ತರು ಹಾಗೂ ವಿದ್ಯಾರ್ಥಿಗಳು ಆರೋಪಿಗೆ ಕಠಿಣ ಶಿಕ್ಷೆ ವಿಧಿಸುವಂತೆ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ಶಾಲಾ– ಕಾಲೇಜುಗಳು ಜ್ಞಾನದ ದೇಗುಲಗಳು. ಇಂತಹ ದೇಗುಲದಲ್ಲಿ ಹಾಡಹಗಲೇ ವಿದ್ಯಾರ್ಥಿನಿ ನೇಹಾ ಹಿರೇಮಠ ಅವರನ್ನು ಭೀಕರ ಹತ್ಯೆ ಮಾಡಿರುವ ಘಟನೆ ನಿಜಕ್ಕೂ ವಿದ್ಯಾರ್ಥಿ ಸಮುದಾಯದಲ್ಲಿ ಭಯದ ವಾತಾವರಣ ಮೂಡಿಸಿದಂತಾಗಿದೆ. ಪ್ರೀತಿಯನ್ನು ವಿದ್ಯಾರ್ಥಿನಿ ನಿರಾಕರಿಸಿದಕ್ಕಾಗಿ ಆಕೆಯನ್ನು ಚಾಕುವಿನಿಂದ 9 ಬಾರಿ ಇರಿದು ಬರ್ಬರವಾಗಿ ಹತ್ಯೆ ಮಾಡಲಾಗಿದೆ ಎಂದು ಆರೋಪಿಸಿದರು. ಕಾಲೇಜಿನ ಒಳಗೆ ಬಂದು ವಿದ್ಯಾರ್ಥಿನಿಯನ್ನು ಹತ್ಯೆ ಮಾಡಲು ಸಾಧ್ಯವಾಗಿರಬೇಕಾದರೆ ಕೊಲೆಗಾರನಿಗೆ ಕಾನೂನಿನ ಯಾವುದೇ ಭಯವೂ ಇಲ್ಲದೆ ರಾಜಾರೋಷವಾಗಿ ಕೃತ್ಯ ಮಾಡುವ ಸ್ಥಿತಿ ನಿರ್ಮಾಣವಾಗಿದೆ. ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಕುಸಿದು ಹೋಗಿದೆ ಎನ್ನುವುದು ಸ್ಪಷ್ಟವಾಗಿ ತಿಳಿಯುವಂತಾಗಿದೆ. ಈ ಘಟನೆಯಿಂದ ರಾಜ್ಯದ ವಿದ್ಯಾರ್ಥಿ ಸಮುದಾಯ ಭಯಭೀತಗೊಂಡಿದೆ. ಪೊಲೀಸರು ಕೂಡಲೇ ಸೂಕ್ತ ತನಿಖೆಯನ್ನು ಕೈಗೊಂಡು, ಅಪರಾಧಿ ಫಯಾಜ್‌ಗೆ ಉಗ್ರ ಶಿಕ್ಷೆ ಆಗುವ ಹಾಗೆ ಮಾಡಿ ವಿದ್ಯಾರ್ಥಿನಿಯ ಕುಟುಂಬಕ್ಕೆ ನ್ಯಾಯ ಒದಗಿಸಬೇಕಾಗಿದೆ ಎಂದು ಒತ್ತಾಯಿಸಿದರು.

ಪ್ರತಿಭಟನೆಯಲ್ಲಿ ಎಬಿವಿಪಿ ನಗರ ಕಾರ್ಯದರ್ಶಿ ಅಂಕಿತ್, ಗಗನ್, ಚಂದನ್, ಜೀವನ್, ಶ್ರೇಯಸ್, ತೇಜಸ್, ತೇಜಸ್ವಿನಿ, ಮಾದಲಾಂಬಿಕಾ, ಪ್ರೀತಿ, ಸವಿತಾ, ಮೇಘ ವಿವಿಧ ಕಾಲೇಜಿನ ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು.

ಪ್ರೊ.ಮಹೇಶ್ ಚಂದ್ರಗುರು ವಿರುದ್ಧ ಪ್ರತಿಭಟನೆ



ಚಾಮರಾಜನಗರ: ಪ್ರೊ.ಮಹೇಶ್‌ಚಂದ್ರ ಗುರು ಹೇಳಿಕೆಯನ್ನು ಖಂಡಿಸಿ ನಗರದಲ್ಲಿ ಬಿಜೆಪಿ ಯುವ ಮೋರ್ಚಾ ಕಾರ್ಯಕರ್ತರು ಹಾಗೂ ಪದಾಧಿಕಾರಿಗಳು ಶನಿವಾರ ಪ್ರತಿಭಟನೆ ನಡೆಸಿದರು.

ನಗರದ ಚಾಮರಾಜೇಶ್ವರ ದೇವಸ್ಥಾನದ ಮುಂಭಾಗದಲ್ಲಿ ಯುವ ಮೋರ್ಚಾ ಅಧ್ಯಕ್ಷ ಸೂರ್ಯ ಬಾಲರಾಜ್ ನೇತೃತ್ವದಲ್ಲಿ ಜಮಾಯಿಸಿದ ಕಾರ್ಯಕರ್ತರು, ಕಾಂಗ್ರೆಸ್ ಏಜೆಂಟ್ ಮಹೇಶ್ ಚಂದ್ರಗುರು ಎಂದು ಘೋಷಣೆಗಳನ್ನು ಕೂಗಿದರು. ಭುವನೇಶ್ವರಿ ವೃತ್ತದಲ್ಲಿ ಕೆಲಕಾಲ ಪ್ರತಿಭಟನೆ ನಡೆಸಿ, ಮಹೇಶ್ ಚಂದ್ರಗುರು ಭಾವಚಿತ್ರವನ್ನು ಹರಿದು ಹಾಕಿ ಆಕ್ರೋಶ ವ್ಯಕ್ತಪಡಿಸಿದರು.

ಪ್ರತಿಭಟನೆಯಲ್ಲಿ ಬಿಜೆಪಿ ಜಿಲ್ಲಾ ಪ್ರಧಾನ ಕಾರ್ಯದರ್ಶಿಗಳಾದ ಪಿ.ವೃಷಬೇಂದ್ರಪ್ಪ, ಮೂಡ್ನಾಕೂಡು ಪ್ರಕಾಶ್, ಕಾರ್ಯದರ್ಶಿ ನಟರಾಜು, ನಗರ ಘಟಕದ ಅಧ್ಯಕ್ಷ ಶಿವರಾಜ್, ಯುವ ಮೋರ್ಚಾ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಆನಂದ್ ಭಗೀರಥ, ಟೌನ್ ಅಧ್ಯಕ್ಷ ಪೃಥ್ವಿ, ಗುರುಪ್ರಸಾದ್, ಮಹೇಶ್ ನಾಯಕ, ಪ್ರವೀಣ್, ರಾಜೇಶ್ ಬೂದಂಬಳ್ಳಿ, ಹರೀಶ್‌ಪ್ರಸಾದ್, ಮಣಿಕಂಠ, ಕೂಸಣ್ಣ, ಆನಂದ್, ಮಾರ್ಕೆಟ್ ಕುಮಾರ್, ಬಂಗಾರನಾಯಕ, ಫೋಟೋ ಕೃಷ್ಣ, ಮಹೇಶ್, ಅರಳಿಕಟ್ಟೆ ಮಹೇಂದ್ರ ಮೊದಲಾದವರು ಇದ್ದರು.

ಬಿವಿಬಿಯಲ್ಲಿ ಚಿಲ್ಕುಂದ ಸಹೋದರಿಯರ ಗಾನಮೋಡಿ



ಮೈಸೂರು, ಏ.20(ಎಂಕೆ)– ಚಿಲ್ಕುಂದ ಸಹೋದರಿಯರ ಕರ್ನಾಟಕ ಶಾಸ್ತ್ರೀಯ ಸಂಗೀತ ಸವಿಗಾನ ಕಲಾ ಪ್ರಿಯರ ಮನಸ್ಸಿಗೆ ಬೇಸಿಗೆಯ ದಗೆಯ ನಡುವೆ ತಣ್ಣನೆಯ ಹಿತಾನುಭವ ನೀಡಿತು.

ಮೈಸೂರಿನ ವಿಜಯನಗರ 1ನೇ ಹಂತದಲ್ಲಿರುವ ಭಾರತೀಯ ವಿದ್ಯಾ ಭವನದಲ್ಲಿ ಇನ್ಫೋಸಿಸ್ ಪ್ರತಿಷ್ಠಾನದ ಸಂಯುಕ್ತಾಶ್ರಯದಲ್ಲಿ ಆಯೋಜಿಸಿದ್ದ 127ನೇ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಚಿಲ್ಕುಂದ ಸಹೋದರಿಯರೆಂದೇ ಖ್ಯಾತರಾದ ವಿದುಷಿ ಇಂದೂ ನಾಗರಾಜ್ ಮತ್ತು ವಿದುಷಿ ಲಕ್ಷ್ಮಿ ನಾಗರಾಜ್ ಶಾಸ್ತ್ರೀಯ ಸಂಗೀತ ಸಮ್ಮಿಲನ ಸಂಗೀತಾಭಿಮಾನಿಗಳ ಮನತಣಿಸಿತು.

ಆರಂಭದಲ್ಲೇ ತಮ್ಮ ಪರಮ ಗುರುಗಳಾದ ವೆಂಕಟನಾರಾಯಣ ಉಡುಪ ಶಾಸ್ತ್ರಿಗಳು ರಚಿತ 'ವನಜಾಸನ' ಕೃತಿಯನ್ನು ಕದನ ಕುತೂಹಲ ರಾಗದಲ್ಲಿ ಪ್ರಸ್ತುತಪಡಿಸಿದರು. ಬಳಿಕ ಹಂಸಧ್ವನಿ ರಾಗದಲ್ಲಿ ಮುತ್ತುಸ್ವಾಮಿ ದೀಕ್ಷಿತರು ರಚಿತ 'ವಾತಾಪಿ ಗಣಪತಿಮ್', ಖಮಾಚ್ ರಾಗದಲ್ಲಿ ಮೈಸೂರು ವಾಸುದೇವ ಚಾರ್ಯರು ರಚಿತ 'ಬ್ರೋಚೇವ ರೇವರುರ', ಸುನಾದ ವಿನೋದಿನಿ ರಾಗದಲ್ಲಿ 'ದೇವಾದಿದೇವ', ಅಭೇರಿ ರಾಗದಲ್ಲಿ 'ಭಜರೇ ಮಾನಸ' ಕೃತಿಗಳನ್ನು ಸುಶ್ರಾವ್ಯವಾಗಿ ಹಾಡಿ ನೆರೆದಿದ್ದವರ ಮನಗೆದ್ದರು.

ಹಾಗೆಂಯೇ ಆರಭಿ ರಾಗದಲ್ಲಿ ಊತುಕಾಡು ವೆಂಕಟಾಸುಬ್ಬಯ್ಯ ರಚಿತ 'ಮರಕತ ಮಣಿಮಯ', ಪುರಂದರ ದಾಸರ 'ರಾಮಮಂತ್ರವ ಜಪಿಸೋ', 'ಹರಿಕುಣಿದ', 'ವೆಂಕಟಾಚಲ ನಿಲಯಂ', ಕನಕದಾಸರ 'ಬಾರೋ ಕೃಷ್ಣಯ್ಯ' ಹಾಗೂ ಎಂ.ಬಾಲಮುರಳಿ ಕೃಷ್ಣ 'ಕುಂತಳ ವರಾಳಿ ತಿಲ್ಲಾನ' ಕೃತಿಗಳನ್ನು ಸುಮಧುರವಾಗಿ ಪ್ರಸ್ತುತಪಡಿಸುವ ಮೂಲಕ ಶಾಸ್ತ್ರೀಯ ಸಂಗೀತ ಸುಧೆ ಹರಿಸಿದರು. ಅವರೊಂದಿಗೆ ಪಿಟೀಲು ವಾದನದಲ್ಲಿ ವಿದ್ವಾನ್ ಜನಾರ್ಧನ್ ಶ್ರೀನಾಥ್, ಮೃದಂಗದಲ್ಲಿ ವಿದ್ವಾನ್ ಕೇಶವದತ್ತ, ಘಟಂನಲ್ಲಿ ವಿದ್ವಾನ್ ಸುಮಿತ್ ಎಸ್.ಗೌಡ ಉತ್ತಮ ಸಹಕಾರ ನೀಡಿದರು.

ಇದಕ್ಕೂ ಮುನ್ನ ಸಾಂಸ್ಕೃತಿಕ ಕಾರ್ಯಕ್ರಮವನ್ನು ದೀಪ ಬೆಳಗಿಸುವ ಮೂಲಕ ಉದ್ಘಾಟಿಸಲಾಯಿತು. ಭಾರತೀಯ ವಿದ್ಯಾಭವನ ಮೈಸೂರು ಗೌರವ ಕಾರ್ಯದರ್ಶಿ ಪಿ.ಎಸ್.ಗಣಪತಿ, ಗೌರವ ಖಜಾಂಚಿ ಎ.ಟಿ.ಭಾಷ್ಯಂ, ವಿದುಷಿ ತುಳಸಿ ರಾಮಚಂದ್ರ, ಭಾರತೀಯ ವಿದ್ಯಾಭವನ ಮೈಸೂರು ಪ್ರಾಂಶುಪಾಲರಾದ ರೇಖಾ ನಾಯರ್, ಆಡಳಿತಾಧಿಕಾರಿ ಎಸ್.ಆರ್.ರವಿಕುಮಾರ್ ಮತ್ತಿತರರು ಉಪಸ್ಥಿತರಿದ್ದರು.

ರಾಜ್ಯದಲ್ಲಿ ಮತದಾನ ಶೇ.80ರಷ್ಟಕ್ಕೆ ಹೆಚ್ಚಿಸುವ ಗುರಿ



ಮೈಸೂರು ಏ.20(ಎಸ್‌ಪಿಎನ್)– ರಾಜ್ಯದಲ್ಲಿ 2024ರ ಲೋಕಸಭಾ ಚುನಾವಣೆಯಲ್ಲಿ ಮತದಾನವನ್ನು ಶೇ.80ರಷ್ಟಕ್ಕೆ ಹೆಚ್ಚಿಸುವ ಗುರಿ ಹೊಂದಲಾಗಿದೆ ಎಂದು ರಾಜ್ಯ ಸ್ವೀಪ್ ಸಮಿತಿ ನೋಡಲ್ ಅಧಿಕಾರಿ ಪಿ.ಎಸ್.ವಸ್ತ್ರದ್ ಹೇಳಿದರು.

ಮೈಸೂರು ಶೇಷಾದ್ರಿ ಅಯ್ಯರ್ ರಸ್ತೆಯ ಮೈಸೂರು ನಗರ ಪಾಲಿಕೆ ವಲಯ ಕಚೇರಿ ಮುಂಭಾಗದ ಮತದಾನ ಜಾಗೃತಿ ಕುರಿತು ಗೋಡೆ ಬರಹಗಳನ್ನು ಪರಿಶೀಲಿಸಿದ ನಂತರ ಮಾತನಾಡಿದ ಅವರು, ಮೈಸೂರು – ಕೊಡಗು, ಹಾಸನ, ಮಂಡ್ಯ ಹಾಗೂ ಚಾಮರಾಜನಗರ ಸೇರಿದಂತೆ ರಾಜ್ಯದ ಎಲ್ಲಾ ಲೋಕಸಭಾ ಕ್ಷೇತ್ರಗಳಲ್ಲೂ ಮತದಾನ ಪ್ರಮಾಣ ಶೇಕಡವಾರು ಹೆಚ್ಚಿಸಲು ಕೇಂದ್ರ ಚುನಾವಣಾ ಆಯೋಗ ಹಲವು ಸುಧಾರಣಾ ಕ್ರಮಗಳನ್ನು ಜಾರಿಗೆ ತಂದಿದೆ ಎಂದರು.

ಮತದಾರರ ಪಟ್ಟಿಯಲ್ಲಿರುವ ವ್ಯಕ್ತಿ ಮತದಾನದಿಂದ ದೂರ ಉಳಿಯದಂತೆ ಜಾಗೃತಿ ಮೂಡಿಸಲು ರಾಜ್ಯದ ಎಲ್ಲಾ ಗ್ರಾಮ ವ್ಯಾಪ್ತಿಯಲ್ಲಿ ಸ್ವೀಪ್ ಸಮಿತಿ ಸಿಬ್ಬಂದಿಯಿಂದ ಜಾಗೃತಿ ಮೂಡಿಸಲಾಗುತ್ತಿದೆ ಎಂದ ಅವರು, ಮತದಾರರು ಹಣ, ಹೆಂಡ ಸೇರಿದಂತೆ ಯಾವುದೇ ಆಸೆ–ಆಮಿಷಗಳಿಗೆ ಒಳಗಾಗದೇ ನೈತಿಕ ಮತದಾನವನ್ನು ಬೆಂಬಲಿಸಬೇಕು. ಏ.26ರಂದು ತಮ್ಮ ಕುಟುಂಬ ಸಮೇತ ಕಡ್ಡಾಯವಾಗಿ ಮತದಾನ ಮಾಡಬೇಕು ಎಂದು ಮನವಿ ಮಾಡಿದರು. ಈ ವೇಳೆ ಜಿಲ್ಲಾ ಸ್ವೀಪ್ ಸಮಿತಿ ಅಧ್ಯಕ್ಷೆ ಕೆ.ಎಂ.ಗಾಯಿತ್ರಿ, ಪಾಲಿಕೆ ಆಯುಕ್ತೆ ಮಧು, ಅಧಿಕಾರಿಗಳಾದ ಸಿಂಧೂ, ಎಸ್.ಮೈತ್ರಿ ಸೇರಿದಂತೆ ಇತರೆ ಅಧಿಕಾರಿಗಳು ಉಪಸ್ಥಿತರಿದ್ದರು.

ಒಂದೇ ಒಂದು ಮತ ಹಾಕಿಸಲು ಕಾಡಿನಲ್ಲಿ ಚುನಾವಣಾ ತಂಡ 18 ಕಿ.ಮೀ. ಟ್ರೆಕ್ಕಿಂಗ್!

ಇಡುಕ್ಕಿ, ಏ.20– ಮತದಾನ ಪ್ರತೀ ನಾಗರಿಕನ ಹಕ್ಕು.. ಅದನ್ನು ಸಾಧಿಸಲು ಚುನಾವಣಾ ಅಧಿಕಾರಿಗಳು ಒಂದೇ ಒಂದು ಮತ ಹಾಕಿಸಲು ಕಾಡಿನಲ್ಲಿ ಬರೊಬ್ಬರಿ 18 ಕಿಮೀ ನಡೆದಿದ್ದು ಆ ಮೂಲಕ ಕರ್ತವ್ಯ ಪ್ರಜ್ಞೆ ಮೆರೆದಿದ್ದಾರೆ.

ಲೋಕಸಭಾ ಚುನಾವಣೆಯ ಮೊದಲ ಹಂತದ ಮತದಾನ ಮುಕ್ತಾಯ ವಾಗಿದ್ದು, ಈ ಬಾರಿ ಚುನಾವಣಾ ಆಯೋಗ ಕೆಲ ವೃದ್ಧ, ಅಸಕ್ತ, ನಡೆಯಲು ಬಾರದ ಮತದಾರರಿಗೆ ಮನೆಯಿಂದಲೇ ವೋಟು ಹಾಕುವ ಅವಕಾಶ ವನ್ನು ಕಲ್ಪಿಸಿತ್ತು. ಅದರಂತೆ ಈ ಸೌಲಭ್ಯಕ್ಕಾಗಿ ಅರ್ಜಿ ಸಲ್ಲಿಸಿದ 92 ವರ್ಷದ ವೃದ್ಧರೊಬ್ಬರಿಗಾಗಿ ಚುನಾವಣಾ ಸಿಬ್ಬಂದಿ ಬರೋಬ್ಬರಿ 18 ಕಿ.ಮೀ. ಕಾಡು ದಾರಿಯಲ್ಲಿ ನಡೆದಿದ್ದಾರೆ.

ಇಡುಕ್ಕಿ ಲೋಕಸಭಾ ಕ್ಷೇತ್ರದ ಹಿರಿಯ ನಾಗರಿಕ ಮತದಾರರಾದ ಶಿವಲಿಂಗಂ ಅನಾರೋಗ್ಯದಿಂದ ಹಾಸಿಗೆ ಹಾಸಿಗೆ ಹಿಡಿದಿದ್ದಾರೆ. ಆದರೂ ತಮ್ಮ ಹಕ್ಕನ್ನು ಚಲಾಯಿಸಬೇಕೆಂಬ ಮಹದಾಸೆ ಹೊಂದಿದ್ದರು. ಇಡುಕ್ಕಿ ಜಿಲ್ಲೆಯ ಎಡಮಲಕ್ಕುಡಿ ಎಂಬ ಬುಡಕಟ್ಟು ಗ್ರಾಮದಲ್ಲಿ ವಾಸಿಸುತ್ತಿ ರುವ ಶಿವಲಿಂಗಂ ಅವರ ಮತದಾನಕ್ಕಾಗಿ ಚುನಾವಣಾ ಸಿಬ್ಬಂದಿ ದುರ್ಗಮ ಕಾಡಿನಲ್ಲಿ ಸುಮಾರು 18 ಕಿ.ಮೀ. ನಡೆದಿದ್ದಾರೆ.

ಸಿಸಿ ಕ್ಯಾಮರಾ ಫುಟೇಜ್ ಸುಳಿವಿನ ಮೇರೆಗೆ ಆರೋಪಿಗಳ ಪತ್ತೆಗೆ ಕ್ರಮ

ಮೈಸೂರು, ಏ. 20(ಆರ್‌ಕೆ)– ಪ್ರಧಾನಿ ನರೇಂದ್ರ ಮೋದಿ ಸಾಂಗ್ ಶೇರ್ ಮಾಡಿ ಎಂದು ಹೇಳಿದ ಯುವಕನ ಮೇಲೆ ಹಲ್ಲೆ ನಡೆಸಿ ತಲೆಮರೆಸಿಕೊಂಡಿರುವ ಆರೋಪಿಗಳ ಪತ್ತೆಗೆ ನಜರ್‌ಬಾದ್ ಠಾಣೆ ಪೊಲೀಸರು ವ್ಯಾಪಕ ಶೋಧ ನಡೆಸುತ್ತಿದ್ದಾರೆ.

ಘಟನೆ ನಡೆಯಿತೆನ್ನಲಾದ ಮೈಸೂರಿನ ಸರ್ಕಾರಿ ಅತಿಥಿ ಗೃಹದಲ್ಲಿರುವ ಸಿಸಿ ಕ್ಯಾಮರಾಗಳ ಫುಟೇಜ್ ಪರಿಶೀಲಿಸಿ ಹಲ್ಲೆ ನಡೆಸಿದ ಯುವಕರನ್ನು ಗುರ್ತಿಸಲೆತ್ನಿಸುತ್ತಿರುವ ಪೊಲೀಸರು, ಮೊಬೈಲ್ ನಂಬರ್ ಸಂಗ್ರಹಿಸಿ ಸಿಡಿಆರ್ ಮಾಹಿತಿ ಪಡೆದು ಶೋಧ ನಡೆಸುತ್ತಿದ್ದಾರೆ.

ಹಲ್ಲೆಗೊಳಗಾದ ಲಕ್ಷ್ಮೀನಾರಾಯಣ ನೀಡಿದ ದೂರಿನನ್ವಯ ಸ್ಥಳ ಮಹಜರು ನಡೆಸಿ, ಕೃತ್ಯ ನಡೆಯಿತೆನ್ನಲಾದ ಸ್ಥಳದಲ್ಲಿರುವ ಸರ್ಕಾರಿ ಅತಿಥಿ ಗೃಹದ ಸಿಸಿಟಿವಿ ಕ್ಯಾಮರಾಗಳಲ್ಲಿ ಸೆರೆಯಾಗಿರುವ ದೃಶ್ಯಾವಳಿಯನ್ನು ಪರಿಶೀಲಿಸಿ ಫುಟೇಜ್ ಆಧಾರದ ಮೇಲೆ ಆರೋಪಿಗಳನ್ನು ಗುರುತಿಸಲು ತೀವ್ರ ಪ್ರಯತ್ನ ಮಾಡುತ್ತಿದ್ದಾರೆ. ನಿತ್ಯ ಆ ಸ್ಥಳಕ್ಕೆ ಬಂದು ಹೋಗಿರುವವರನ್ನು ಪತ್ತೆ ಮಾಡಿ ವಿಚಾರಣೆ ನಡೆಸುತ್ತಿರುತ್ತಿದ್ದಾಡೆ.ನಜರ್‌ಬಾದ್ ಠಾಣೆ ಪೊಲೀಸರು, ದೇವರಾಜ ಉಪ ವಿಭಾಗದ ಎಸಿಪಿ ಶಾಂತಮಲ್ಲಪ್ಪ ನೇತೃತ್ವದಲ್ಲಿ ಇನ್‌ಸ್ಪೆಕ್ಟರ್ ಮಹದೇವಸ್ವಾಮಿ ಕಾರ್ಯಾಚರಣೆ ನಡೆಸುತ್ತಿದ್ದಾರೆ. ಸರ್ಕಾರಿ ಅತಿಥಿ ಗೃಹದ ಸಿಬ್ಬಂದಿಗಳಿಂದ ಅಲ್ಲಿಗೆ ನಿತ್ಯ ಬರುವವರ ಮಾಹಿತಿ ಸಂಗ್ರಹಿಸಿ ಬೇರೆ ಬೇರೆ ಆಯಾಮಗಳ ಮೂಲಕ ಆರೋಪಿಗಳ ಪತ್ತೆಗೆ ಪೊಲೀಸರು ಯತ್ನಿಸುತ್ತಿದ್ದಾರೆ.

ಮೈಸೂರಿನ ಹೆಸರಾಂತ ಉದ್ಯಮಿಗಳಾದ ಡಾ.ಜಗನ್ನಾಥ್ ಶೆಣೈ, ಡಾ.ಅಲೋಕ್ ಗುಪ್ತಾರಿಗೆ 'ಜೀವಮಾನ ಸಾಧನೆ ಪ್ರಶಸ್ತಿ' ಪ್ರದಾನ

● ದೇಶದ ಬಡ ಮಹಿಳೆಯರಿಗೆ ಪ್ಯಾಡ್ ಬಳಕೆಯ ಅರಿವೇ ಇಲ್ಲ; ಸಾಮಾಜಿಕ ಉದ್ಯಮಿ 'ಪ್ಯಾಡ್ ಮ್ಯಾನ್' ಅರುಣಾಚಲಂ ಮುರುಗನಂತಂ ವಿಷಾದ ● ಕಡಿಮೆ ಖರ್ಚಿನಲ್ಲಿ ಈ ಸಮಸ್ಯೆಗೆ ಪರಿಹಾರ ಕಲ್ಪಿಸಿದ ಧನ್ಯತಾ ಭಾವ



ಅರುಣಾಚಲಂ ಮುರುಗನಂತಂ,



ಟೈ ಜಾಗತಿಕ ಶೃಂಗಸಭೆ–2024ರ ಪೂರ್ವಭಾವಿ ಸಮ್ಮೇಳನದಲ್ಲಿ ಮೈಸೂರಿನ ಖ್ಯಾತ ಉದ್ಯಮಿಗಳಾದ ಡಾ.ಜಗನ್ನಾಥ್ ಶೆಣೈ ಹಾಗೂ ಡಾ.ಅಲೋಕ್ ಗುಪ್ತಾ ಅವರಿಗೆ 'ಜೀವಮಾನ ಸಾಧನೆ ಪ್ರಶಸ್ತಿ' ನೀಡಿ ಗೌರವಿಸಲಾಯಿತು. ಟೈ ಮೈಸೂರು ಅಧ್ಯಕ್ಷ ಮಹೇಶ್ ರಾವ್, ಮಂಡಳಿ ಸದಸ್ಯರು ಮತ್ತಿತರಿದ್ದರು.

ಮೈಸೂರು, ಏ.20(ಎಂಕೆ)– ಟೈ(TiE) ಜಾಗತಿಕ ಶೃಂಗಸಭೆ–2024ರ ಪೂರ್ವಭಾವಿ ಸಮ್ಮೇಳನ(ಕರ್ಟನ್ ರೈಸರ್)ದಲ್ಲಿ ಮೈಸೂರಿನ ಖ್ಯಾತ ಉದ್ಯಮಿಗಳಾದ ಡಾ.ಜಗನ್ನಾಥ್ ಶೆಣೈ ಹಾಗೂ ಡಾ.ಅಲೋಕ್ ಗುಪ್ತಾ ಅವರಿಗೆ 'ಜೀವಮಾನ ಸಾಧನೆ ಪ್ರಶಸ್ತಿ' ನೀಡಿ ಗೌರವಿಸಲಾಯಿತು.

ಮೈಸೂರಿನ ಹುಣಸೂರು ಮುಖ್ಯರಸ್ತೆಯಲ್ಲಿರುವ ಲೀ ರುಚಿ ಹೋಟೆಲ್‌ನಲ್ಲಿ ಟೈ ಮೈಸೂರು ವಿಭಾಗದ ವತಿಯಿಂದ ಆಯೋಜಿಸಿದ್ದ ಪೂರ್ವಭಾವಿ ಸಮ್ಮೇಳನದಲ್ಲಿ ಪ್ಯಾಡ್ ಮ್ಯಾನ್ ಖ್ಯಾತಿಯ ಸಾಮಾಜಿಕ ಉದ್ಯಮಿ, ಪದ್ಮಶ್ರೀ ಪುರಸ್ಕೃತ ಅರುಣಾಚಲಂ ಮುರುಗನಂತಂ ಅವರು, ಖ್ಯಾತ ಉದ್ಯಮಿಗಳಿಗೆ ಪ್ರಶಸ್ತಿ ಪ್ರದಾನ ಮಾಡಿ, ಅಭಿನಂದಿಸಿದರು.

ಇದಕ್ಕೂ ಮುನ್ನ ಪೂರ್ವಭಾವಿ ಸಮ್ಮೇಳನ ಉದ್ಘಾಟಿಸಿ ಮಾತನಾಡಿದ ಅವರು, ಭಾರತ ಸಮಸ್ಯೆಗಳಿಂದ ತುಂಬಿರುವ ದೇಶ. ಇಲ್ಲಿ ಪ್ರತಿ ಹೆಜ್ಜೆಗೂ ಸಮಸ್ಯೆಗಳಿದ್ದು, ಪ್ರತಿಯೊಬ್ಬ ಭಾರತೀಯ ದೇಶದಲ್ಲಿ ಒಂದೊಂದು ಸಾಮಾಜಿಕ ಸಮಸ್ಯೆಗೆ ಪರಿಹಾರ ಕಂಡುಹಿಡಿಯಲು ಪ್ರಯತ್ನಿಸಬೇಕು ಎಂದು ತಿಳಿಸಿದರು.

ಯೂರೋಪ್ ರಾಷ್ಟ್ರಗಳಲ್ಲಿ ಸಾಮಾಜಿಕ ಸಮಸ್ಯೆಗಳು ಕಡಿಮೆ. ಹಾಗೆಂಯೇ ಸಾಮಾಜಿಕ ಸಮಸ್ಯೆಗಳನ್ನು ಎದುರಿಸಿದ ಅನುಭವವೂ ಆ ದೇಶದವರಿಗೆ ಕಡಿಮೆ. ಆದರೆ ಭಾರತದಲ್ಲಿ ಹೆಜ್ಜೆ ಹೆಜ್ಜೆಗೂ ಸಾಮಾಜಿಕ ಸಮಸ್ಯೆಗಳಿವೆ. ಸಂಕಷ್ಟಗಳ ನಡುವೆ ಜೀವಿಸುತ್ತಿರುವ ಭಾರತೀಯರೇ ತಮ್ಮ ತಮ್ಮ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಬೇಕಾಗಿದೆ. ಸಾಧ್ಯವಾದಷ್ಟು ಸಾಮಾಜಿಕ ಮೌಲ್ಯ ಹೊಂದಿರುವ ನವೋದ್ಯಮ ಸ್ಥಾಪನೆಗೆ ಯುವ ಜನರು ಮುಂದಾಗಬೇಕು. ಇದರಿಂದ ಸುಸ್ಥಿರ ಅಭಿವೃದ್ಧಿಗೆ ಮುನ್ನುಡಿ ಬರೆದಂತಾಗುತ್ತದೆ. ದೇಶದ ಸಾಮಾಜಿಕ ಸಮಸ್ಯೆಗಳಿಗೂ ಪರಿಹಾರ ಒದಗಿಸುತ್ತದೆ. ಹೆಚ್ಚು ಜನ ಸಂಖ್ಯೆ ಇರುವ ಗ್ರಾಮೀಣ ಪ್ರದೇಶಗಳಲ್ಲಿ ಮಾರುಕಟ್ಟೆ ಸೃಷ್ಟಿ ಮಾಡಿಕೊಳ್ಳಬೇಕು. ಇದು ಸಫಲತೆ ತಂದು ಕೊಡುತ್ತದೆ ಎಂದು ಯುವ ಉದ್ದಿಮೆದಾರರಿಗೆ, ವಿದ್ಯಾರ್ಥಿ ಗಳಿಗೆ ಕಿವಿಮಾತು ಹೇಳಿದರು.

ಆರಂಭದಲ್ಲೇ ತಾವು ವಿಶ್ವದ ಮೊದಲ ಕಡಿಮೆ ವೆಚ್ಚದ ಸ್ಯಾನಿಟರಿ ಪ್ಯಾಡ್ ತಯಾರಿಕಾ ಯಂತ್ರ ಸಂಶೋಧನೆ ಕುರಿತು ತಿಳಿಸಿದ ಅವರು, ಭಾರತದಲ್ಲಿ ಶೇ.90ರಷ್ಟು ಮಹಿಳೆಯರು ಸ್ಯಾನಿಟರಿ ಪ್ಯಾಡ್ ಬಳಸುವುದಿಲ್ಲ. ಇದು ಬ್ರಿಟನ್ನರಿಗೆ ದೊಡ್ಡ ವಿಷಯವಾದರೆ, ಭಾರತೀಯರಿಗೆ ವಿಷಯವೇ ಅಲ್ಲ. ಋತುಸ್ರಾವದ ಸಂದರ್ಭದಲ್ಲಿ ಮಹಿಳೆಯರು ನ್ಯೂಸ್ ಪೇಪರ್, ಎಲೆ, ಮರಳು, ಬೂದಿ ಬಳಕೆ ಮಾಡಿರುವ ಉದಾಹರಣೆಗಳಿವೆ ಎಂದರು.

ಜೀವನದ ಅನಿ ವಾರ್ಯತೆಯಿಂದ 9ನೇ ತರಗತಿಗೆ ವಿದ್ಯಾ ಭ್ಯಾಸವನ್ನು ಮೊಟಕು ಗೊಳಿಸಿ, ತಮಿಳುನಾಡಿನ ಕೊಯ ಮತ್ತೂರಿನ ವೆಲ್ಡಿಂಗ್ ವರ್ಕ್ ಶಾಪ್ ವೊಂದರಲ್ಲಿ ಸಹಾಯಕನಾಗಿ ಕೆಲಸ ಮಾಡುತ್ತಿದ್ದೆ. ಮದುವೆ ಬಳಿಕ ನನ್ನ ಪತ್ನಿ ಋತು ಸ್ರಾವದ ಸಮಯ ದಲ್ಲಿ ಎದುರಿಸುತ್ತಿದ್ದ ಸಮಸ್ಯೆಗೆ ಪರಿಹಾರ ಕಂಡು ಹಿಡಿಯಲು ಪ್ರಾರಂಭಿಸಿದ ಪ್ರಯತ್ನ ಹೊಸದೊಂದು ಯಂತ್ರದ ಅಭಿವೃದ್ಧಿಗೆ ನಾಂದಿ ಆಯಿತು. ಸ್ಯಾನಿಟರಿ ಪ್ಯಾಡ್ ಒಂದಕ್ಕೆ ಬಹುರಾಷ್ಟ್ರೀಯ ಕಂಪನಿಗಳು 60 ರೂಪಾಯಿ ನಿಗದಿಪಡಿಸಿ ದ್ದವು. ಒಂದು ಪ್ಯಾಡ್‌ನಲ್ಲಿ ಬಳಸಿರುವ 10 ಗ್ರಾಂ ತೂಕದ ಹತ್ತಿಗೆ ಇಷ್ಟು ಹಣವೇ? ನಾಲ್ಕು ಪಟ್ಟು ಹೆಚ್ಚಿನ ಬೆಲೆ ನಿಗದಿ ಮಾಡಿದ್ದರಿಂದ ಬಡ ಕುಟುಂಬದ ಮಹಿಳೆಯರು ಪ್ಯಾಡ್ ಬಳಕೆಯಿಂದ ದೂರ ಉಳಿದಿದ್ದರು ಎಂದು ತಮ್ಮ ಸಾಧನೆ ಹಿಂದಿನ ಕಥೆಯನ್ನು ವಿವರಿಸಿದರು.

4 ಯಂತ್ರಗಳ ಮೂಲಕ 4 ಹಂತಗಳಲ್ಲಿ ಕಡಿಮೆ ವೆಚ್ಚದಲ್ಲಿ ಉತ್ತಮ ಗುಣಮಟ್ಟದ ಸ್ಯಾನಿಟರಿ ಪ್ಯಾಡ್ ತಯಾರಿಸುವ ಮಾದರಿ ಸಿದ್ಧಪಡಿಸಿದೆ. ಅದಕ್ಕೆ ಮದ್ರಾಸ್ ಐಐಟಿ ಮೆಚ್ಚುಗೆ ಸೂಚಿಸಿತು. ನೂತನ ಅನ್ವೇಷಣೆಗಾಗಿ ನೀಡುವ ಪ್ರಶಸ್ತಿಯೂ ಒಲಿಯಿತು. ಅನ್ವೇಷಿಸುವ ಸ್ವಭಾವದಿಂದಲೇ ವರ್ಕ್‌ಶಾಪ್‌ನ ಸಾಮಾನ್ಯ ಸಹಾಯಕನಾದ ನಾನು, ದೇಶದ ಅತೀ ಪ್ರಮುಖ ಸಮಸ್ಯೆಗೆ ಅತ್ಯುತ್ತಮ ಪರಿಹಾರ ಕಲ್ಪಿಸಲು ಸಾಧ್ಯವಾಯಿತು ಎಂದು ತಿಳಿಸಿದರು.

65 ಸಾವಿರಕ್ಕೆ ಯಂತ್ರ ರೆಡಿ: ಬಹುರಾಷ್ಟ್ರೀಯ ಕಂಪನಿಗಳು ಮಹಿಳೆಯರಿಗೆ ಅವಶ್ಯವಾದ ಸ್ಯಾನಿಟರಿ ಪ್ಯಾಡ್ ತಯಾರಿಸಲು 3.5 ಕೋಟಿ ರೂ. ಮೊತ್ತದ ಯಂತ್ರಗಳನ್ನು ಬಳಸುವಾಗ, ಕೇವಲ 65 ಸಾವಿರ ರೂ. ಯಂತ್ರ ಸಿದ್ಧಪಡಿಸಿ ಅತಿ ಕಡಿಮೆ ಬೆಲೆಯಲ್ಲಿ ಗುಣಮಟ್ಟದ ಸ್ಯಾನಿಟರಿ ಪ್ಯಾಡ್‌ಅನ್ನು ಉತ್ಪಾದನೆ ಮಾಡಿತೋರಿಸಿದೆ.

> "ತಾನೊಬ್ಬನೇ ಕಡಿಮೆ ಬೆಲೆಯಲ್ಲಿ ಉತ್ಪಾದನೆ ಮಾಡು ವುದಕ್ಕಿಂತಲೂ ದೇಶದ ಎಲ್ಲ ಮಹಿಳೆಯರು, ಸಂಘ–ಸಂಸ್ಥೆಗಳಿಗೂ ಇದರ ಉಪಯೋಗ ನೀಡಲು ಜಯಶ್ರೀ ಇಂಡಸ್ಟ್ರೀಸ್ ಮೂಲಕ 80 ಸಾವಿರ ರೂ.ಗಳಿಗೆ ಯಂತ್ರ ಸಿದ್ಧಪಡಿಸಿ ಮಾರಾಟ ಮಾಡಿದ್ದು, ಈ ಯಂತ್ರಗಳು ದೇಶ–ವಿದೇಶಗಳ ಅನೇಕ ಭಾಗಗಳಲ್ಲಿ ಉಪಯೋಗಿಸಲಾಗುತ್ತಿದೆ.
> –ಅರುಣಾಚಲಂ ಮುರುಗನಂತಂ, ಸಾಮಾಜಿಕ ಉದ್ಯಮಿ

ಮಹಿಳಾ ಸಂಘಗಳು ಹಾಗೂ ಸ್ವ–ಸಹಾಯಕ ಸಂಘಗಳಿಗೆ ತಾನೇ ಸಿದ್ಧಪಡಿಸಿದ ಸ್ಯಾನಿಟರಿ ಪ್ಯಾಡ್‌ಗಳನ್ನು ವಿತರಿಸಲು ಶುರು ಮಾಡಿದ್ದು ಫಲ ಕೊಟ್ಟಿತು. ಇದೀಗ ನಾನು ಸಿದ್ಧಪಡಿಸಿರುವ ಯಂತ್ರಗಳಿಂದ ಲಕ್ಷಾಂತರ ಜನರು ಉದ್ಯೋಗ ಪಡೆದಿದ್ದಾರೆ. ಮಹಿಳೆಯರು ಸ್ವಾವಲಂಬಿಗಳಾಗಿದ್ದಾರೆ ಎಂದರು.

ನಂತರ ಟೈ ಮೈಸೂರು ಸದಸ್ಯ ಆದರ್ಶ್ ರಮೇಶ್ ನೇತೃತ್ವದಲ್ಲಿ 'ಮೈಸೂರು ಟು ದಿ ವರ್ಲ್ಡ್' ಶೀರ್ಷಿಕೆ ಕುರಿತು ವೇದವ್ಯಾಸ ಯೋಗ ಫೌಂಡೇಷನ್‌ನ ಸಂಸ್ಥಾಪಕ ಡಾ.ರಾಘವೇಂದ್ರ ಪೈ, ರಾಮ್‌ಸನ್ಸ್ ಕಲಾ ಪ್ರತಿಷ್ಠಾನದ ಪಾಲುದಾರ ಆರ್.ಜಿ.ಸಿಂಗ್, ಪ್ರಜ್ಞಾಕುಟೀರ ಆಯುರ್ವೇದ ಸೆಂಟರ್ ನಿರ್ದೇಶಕ ಡಾ.ಎನ್.ವಿ.ಕೃಷ್ಣಮೂರ್ತಿ, ಉದ್ಯಮಿಗಳಾದ ಆದರ್ಶ್ ಸುಧೀಂದ್ರ, ಡಾ.ಚೈತ್ರ ನಾರಾಯಣ್, ವಿನಯ್ ಬಾಬು ಅವರೊಂದಿಗೆ ಸಂವಾದ ಕಾರ್ಯಕ್ರಮ ನಡೆಯಿತು. ಟೈ ಮೈಸೂರು ಅಧ್ಯಕ್ಷ ಮಹೇಶ್ ರಾವ್, ಮಂಡಳಿ ಸದಸ್ಯರಾದ ಪವನ್ ರಂಗ, ಅಜಿತ್ ಪೈ, ನಾಗರಾಜನ್ ಶ್ರೀನಿವಾಸನ್, ಬಾಸ್ಕರ್ ಕಳಲೆ, ಕಾರ್ಯನಿರ್ವಾಹಕ ನಿರ್ದೇಶಕ ಮಹೇಶ್ ಕಟ್ಟಾಳೆ ಮತ್ತಿತರರಿದ್ದರು.

ಬಂಡೀಪುರದ ಊಟಿ ಮುಖ್ಯ ರಸ್ತೆಯಲ್ಲಿ ಆನೆ ಮರಿ ಬಲಿ ಪಡೆದ ಹುಲಿರಾಯ

- ಆನೆ ಮರಿ ಕಳೇಬರದ ಮುಂದೆ ರೋದಿಸಿದ ತಾಯಿ
- ಎರಡು ಗಂಟೆಗೂ ಹೆಚ್ಚು ಸಮಯ ಟ್ರಾಫಿಕ್ ಜಾಮ್
- ಮನಕಲಕುವ ಘಟನೆ ವೀಕ್ಷಿಸಿ ಕಣ್ಣೀರಾದ ಪ್ರಯಾಣಿಕರು



ಬಂಡೀಪುರ,ಏ.20(ಎಂಟಿವೈ)– ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದಲ್ಲಿ ಹಾದು ಹೋಗಿರುವ ಊಟಿ ಹೆದ್ದಾರಿಯಲ್ಲಿ ಹುಲಿಯೊಂದು ಆನೆ ಮರಿ ಬಲಿ ಪಡೆದಿದೆ. ಮರಿ ಕಳೇಬರದ ಮುಂದೆ ತಾಯಿ ಆನೆ ರೋದಿಸಿದೆ. ಈ ಸನ್ನಿವೇಶದಲ್ಲಿ ಎರಡು ಗಂಟೆಗೂ ಹೆಚ್ಚು ಕಾಲ ವಾಹನ ಸಂಚಾರ ಸ್ಥಗಿತಗೊಂಡು ಪ್ರಯಾಣಿಕರು ಪರದಾಡಿದ್ದಾರೆ.

ಬೇಟೆಗಾಗಿ ಹೊಂಚು ಹಾಕುತ್ತಿದ್ದ ಹುಲಿ, ತಾಯಿಯೊಂದಿಗಿದ್ದ 3 ತಿಂಗಳ ಗಂಡು ಆನೆ ಮರಿ ಮೇಲೆ ದಾಳಿ ನಡೆಸಿದೆ. ಮರಿಯನ್ನು ರಕ್ಷಿಸಿಕೊಳ್ಳಲು ತಾಯಿ ಯತ್ನಿಸಿದೆ. ಈ ವೇಳೆ ಊಟಿ ಮುಖ್ಯ ರಸ್ತೆಯತ್ತ ಮರಿಯೊಂದಿಗೆ ತಾಯಿ ಆನೆ ಬಂದಿದೆ. ಆದರೂ ಹಿಂಬಾಲಿಸಿ ಬಂದ ಹುಲಿ, ದಾಳಿ ಮಾಡಿ, ಗಂಭೀರ ಗಾಯಗೊಳಿಸಿದೆ. ಮತ್ತೆ ತನ್ನ ಮರಿಯನ್ನು ರಕ್ಷಿಸಿಕೊಂಡು ಮುಖ್ಯ ರಸ್ತೆ ದಾಟಿ ಕರೆದೊಯ್ಯುವ ಪ್ರಯತ್ನವನ್ನು ತಾಯಿ ಮಾಡಿದೆ. ಆದರೆ, ಅಷ್ಟರಲ್ಲಾಗಲೇ ತೀವ್ರ ರಕ್ತಸ್ರಾವದಿಂದ ನಿತ್ರಾಣಗೊಂಡಿದ್ದ ಮರಿ ಮುಖ್ಯ ರಸ್ತೆಯಲ್ಲೇ ಕುಸಿದಿದೆ.

ಕರುಳ ಕುಡಿಯ ರಕ್ಷಣೆಗಾಗಿ ತಾಯಿ ಆನೆ ಮುಖ್ಯ ರಸ್ತೆಯಲ್ಲೇ ನಿಂತಿದ್ದರಿಂದ ಊಟಿ ಮುಖ್ಯ ರಸ್ತೆಯಲ್ಲಿ ವಾಹನ ಸಂಚಾರ ಸ್ಥಗಿತಗೊಂಡಿದೆ. ಮರಿ ಒದ್ದಾಡುತ್ತಿದ್ದುದ್ದನ್ನು ಕಂಡು ತಾಯಿ ರೋದಿಸಿದೆ. ಈ ವೇಳೆ ಪ್ರವಾಸಿ ಬಸ್ ಸೇರಿದಂತೆ ಕೆಲ ವಾಹನಗಳು ಮುಂದೆ ಸಾಗಲೆತ್ನಿಸಿದಾಗ ತಾಯಿ ಆನೆ ವಾಹನಗಳ ಮೇಲೆ ದಾಳಿಗೆ ಮುಂದಾಗಿದೆ. ಅಪಾಯದ ಮುನ್ಸೂಚನೆ ಅರಿತ ಅರಣ್ಯ ಸಿಬ್ಬಂದಿ ಆ ಮಾರ್ಗದಲ್ಲಿ ವಾಹನ ಸಂಚಾರ ಸ್ಥಗಿತಗೊಳಿಸಿದರು. ವಾರಾಂತ್ಯ ರಜೆ ಹಿನ್ನೆಲೆಯಲ್ಲಿ ಮೈಸೂರು–ಬೆಂಗಳೂರು–ಊಟಿ ನಡುವೆ ಪ್ರವಾಸಿ ಹಾಗೂ ಖಾಸಗಿ ವಾಹನಗಳ ಸಂಖ್ಯೆ ಹೆಚ್ಚಾಗಿದ್ದರಿಂದ ಎರಡೂ ಬದಿಯಲ್ಲೂ ಸಾವಿರಕ್ಕೂ ಹೆಚ್ಚು ವಾಹನಗಳು ಸಾಲುಗಟ್ಟಿ ನಿಂತಿದ್ದವು.

ಆನೆ ರೋದನಕ್ಕೆ ಮರುಗಿದ ಪ್ರಯಾಣಿಕರು: ನೋವಿನಿಂದ ಒದ್ದಾಡಿ ತಾಯಿ ಮುಂದೆಯೇ ಆನೆ ಮರಿ ಮೃತಪಟ್ಟ ದೃಶ್ಯ ಕಂಡ ಪ್ರಯಾಣಿಕರು ಮರುಗಿದರು. ವಾಹನದಿಂದ ಕೆಳಗಿಳಿದು ಗುಂಪುಗೂಡಿ ಆನೆಯ ನೋವನ್ನು ಕಂಡು ಕಂಬನಿ ಮಿಡಿದರು.

ಅರಣ್ಯ ಸಿಬ್ಬಂದಿಗಳ ಹರಸಾಹಸ: ರಸ್ತೆ ಮಧ್ಯೆ ಮರಿಯ ಕಳೇಬರದ ಮುಂದೆ ನಿಂತಿದ್ದ ತಾಯಿ ಆನೆಯನ್ನು ಕಾಡಿಗೆ ಓಡಿಸಲು ಅರಣ್ಯ ಸಿಬ್ಬಂದಿ ಹರಸಾಹಸ ಮಾಡಬೇಕಾಯಿತು. ಜೆಸಿಬಿ ತಂದು ಮುಖ್ಯ ರಸ್ತೆಯಿಂದ ಆನೆಯನ್ನು ಕಾಡಿಗೆ ಕಳುಹಿಸಿ, ಮರಿಯ ಕಳೇಬರವನ್ನು ಸ್ಥಳಾಂತರಿಸಲು ಪರದಾಡಿದರು. ಒಂದು ಹಂತದಲ್ಲಿ ತಾಯಿ ಆನೆ ಜೆಸಿಬಿ ಮೇಲೆ ದಾಳಿ ಮಾಡುವ ಪ್ರಯತ್ನ ಮಾಡುತ್ತಿತ್ತು.

ಸ್ಥಳಾಂತರ: ಸಾಕಷ್ಟು ಪ್ರಯತ್ನದ ಬಳಿಕ ತಾಯಿ ಆನೆಯನ್ನು ಕಾಡಿಗೆ ಓಡಿಸುವಲ್ಲಿ ಅರಣ್ಯ ಸಿಬ್ಬಂದಿ ಯಶಸ್ವಿಯಾದರು. ಬಳಿಕ ಆನೆ ಮರಿಯ ದೇಹವನ್ನು ಅರಣ್ಯ ಪ್ರದೇಶಕ್ಕೆ ಸ್ಥಳಾಂತರಿಸ ಲಾಯಿತು. ಮರಿ ದೇಹವಿದ್ದ ಮುಖ್ಯ ರಸ್ತೆಗೆ ಮತ್ತೆ ತಾಯಿ ಆನೆ ಬರುವ ಸಾಧ್ಯತೆ ಇದ್ದರಿಂದ ತಾಯಿ ಆನೆ ಓಡಿಸಿದ ದಿಕ್ಕಿನಲ್ಲಿಯೇ ಜೆಸಿಬಿಯಲ್ಲಿ ಮರಿ ದೇಹವನ್ನು ಕೊಂಡೊಯ್ದು ಅರಣ್ಯ ಪ್ರದೇಶದಲ್ಲಿಡಲಾಯಿತು.

ಸಂಚಾರ ಪುನಾರಂಭ: ಮರಿಯ ದೇಹವನ್ನು ಸ್ಥಳಾಂತರಿಸಿ, ತಾಯಿ ಆನೆ ಇರುವ ಸ್ಥಳ ಗುರುತಿಸಿದ ಸಿಬ್ಬಂದಿ ಕಣ್ಗಾವಲು ಹಾಕಿದ ನಂತರ ವಾಹನ ಸಂಚಾರ ಪುನರಾರಂಭಿಸಲಾಯಿತು. ಕರ್ನಾಟಕ–ತಮಿಳುನಾಡು ಗಡಿದಾಟಿ, ಅರಣ್ಯ ಪ್ರದೇಶದುದ್ದಕ್ಕೂ ವಾಹನಗಳು ಸಾಲುಗಟ್ಟಿ ನಿಂತಿದ್ದವು. ವಾಹನ ಸಂಚಾರ ಸಹಜ ಸ್ಥಿತಿಗೆ ಬರಲು ಎರಡು ಗಂಟೆಗೂ ಹೆಚ್ಚಿನ ಸಮಯಬೇಕಾಯಿತು.

ಸ್ಥಳಕ್ಕೆ ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದ ನಿರ್ದೇಶಕ ಪ್ರಭಾಕರನ್, ಎಸಿಎಫ್ ನವೀನ್‌ಕುಮಾರ್, ಆರ್‌ಎಫ್‌ಓ ದೀಪಾ ಸೇರಿದಂತೆ ಇನ್ನಿತರರು ಭೇಟಿ ನೀಡಿ, ಪರಿಸ್ಥಿತಿ ತಿಳಿಗೊಳಿಸಲು ಶ್ರಮಿಸಿದರು.

ಮತೀಯ ಶಕ್ತಿಗಳಿಗೆ ಕಾಂಗ್ರೆಸ್ ಬೆಂಬಲವೇ ಅಪರಾಧ ಕೃತ್ಯ ಹೆಚ್ಚಳ

ಬಿಜೆಪಿ ರಾಜ್ಯ ವಕ್ತಾರ ಎಂ.ಜಿ.ಮಹೇಶ್ ಆರೋಪ



ಮೈಸೂರಿನ ಬಿಜೆಪಿ ಕಚೇರಿಯಲ್ಲಿ ರಾಜ್ಯ ವಕ್ತಾರ ಎಂ.ಜಿ.ಮಹೇಶ್ ಸುದ್ದಿಗೋಷ್ಠಿಯಲ್ಲಿ ನಡೆಸಿದರು.

ಮೈಸೂರು,ಏ.20(ಎಂಟಿವೈ)– ರಾಜ್ಯದಲ್ಲಿ ಮತೀಯ ಶಕ್ತಿಗಳಿಗೆ ಕಾಂಗ್ರೆಸ್ ಸರ್ಕಾರ ಬೆಂಬಲ ನೀಡುತ್ತಿರುವುದರಿಂದ ಅಪರಾಧ ಕೃತ್ಯಗಳ ಸಂಖ್ಯೆ ಹೆಚ್ಚಾಗಿದೆ ಎಂದು ಬಿಜೆಪಿ ರಾಜ್ಯ ವಕ್ತಾರ ಎಂ.ಜಿ.ಮಹೇಶ್ ಆರೋಪಿಸಿದ್ದಾರೆ.

ಮೈಸೂರಿನ ಚಾಮರಾಜ ಮೊಹಲ್ಲಾದಲ್ಲಿರುವ ಬಿಜೆಪಿ ಕಚೇರಿಯಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದ ನಂತರ ಅಪರಾಧ ಕೃತ್ಯಗಳ ಸಂಖ್ಯೆ ಹೆಚ್ಚಾಗಿದೆ. ಸರ್ಕಾರಕ್ಕೆ ಕಾನೂನು ಸುವ್ಯವಸ್ಥೆ ಹತೋಟಿಯಲ್ಲಿಟ್ಟುಕೊಳ್ಳಲು ಸಾಧ್ಯವಾಗುತ್ತಿಲ್ಲ. ಮತೀಯ ಶಕ್ತಿಗಳು ಉನ್ಮಾದದಿಂದ ವರ್ತಿಸುತ್ತಿವೆ. ಹಿಂದೂಗಳಲ್ಲಿ ಭಯ ಮೂಡಿಸಲು ಮತೀಯ ಶಕ್ತಿಗಳು ಸಂಚು ನಡೆಸುತ್ತಿವೆ. ಕಾಂಗ್ರೆಸ್ ಟೂಲ್ ಕಿಟ್‌ನ ಭಾಗವಾಗಿ ಅಪರಾಧ ಕೃತ್ಯಗಳನ್ನು ಮತೀಯ ಶಕ್ತಿಗಳು ನಡೆಸುತ್ತಿವೆ. ಹುಬ್ಬಳ್ಳಿಯಲ್ಲಿ ನಡೆದ ನೇಹಾ ಕೊಲೆ ಪ್ರಕರಣ ಇದಕ್ಕೆ ಪುಷ್ಟಿ ನೀಡುತ್ತಿದೆ. ಕಾಂಗ್ರೆಸ್ ಸರ್ಕಾರ ಮೊದಲಿನಿಂದಲೂ ದುಷ್ಟ ಶಕ್ತಿಗಳನ್ನು ನಿಗ್ರಹಿಸುವಲ್ಲಿ ವಿಫಲವಾಗಿದೆ ಎಂದು ದೂರಿದರು.

ಉತ್ತರ ಪ್ರದೇಶದಲ್ಲಿ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಮತೀಯ ಶಕ್ತಿಗಳನ್ನು ನಿಗ್ರಹಿಸುವಲ್ಲಿ ಕಟ್ಟುನಿಟ್ಟಿನ ಕ್ರಮ ಕೈಗೊಂಡಿದ್ದಾರೆ. ಬುಲ್ಡೋಜರ್ ಕಾರ್ಯಾಚರಣೆ ನಡೆಸಿ ದುಷ್ಟಶಕ್ತಿಗಳ ಸದ್ದು ಅಡಗಿಸಿದ್ದಾರೆ. ರಾಜ್ಯದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಗೃಹ ಸಚಿವ ಡಾ.ಜಿ.ಪರಮೇಶ್ವರ್ ಮತೀಯ ಶಕ್ತಿಗಳನ್ನು ಅಡಗಿಸುವ ಬದಲು ಮೃದು ಧೋರಣೆ ತಾಳುತ್ತಿದ್ದಾರೆ. ಈ ಕಾರಣದಿಂದಲೇ ಅಪರಾಧ ಕೃತ್ಯಗಳು ಎಗ್ಗಿಲ್ಲದೆ ನಡೆಯುತ್ತಿವೆ ಎಂದು ಕಿಡಿಕಾರಿದರು.

ಸುದ್ದಿಗೋಷ್ಠಿಯಲ್ಲಿ ವಕ್ತಾರ ಮೋಹನ್, ಮಾಧ್ಯಮ ಸಂಚಾಲಕ ಮಹೇಶ್ ರಾಜೇ ಅರಸ್ ಇದ್ದರು.

ಏ.29ರಿಂದ ಪಿಯು ಪರೀಕ್ಷೆ–2: 1.60 ಲಕ್ಷ ವಿದ್ಯಾರ್ಥಿಗಳು ನೋಂದಣಿ

ಬೆಂಗಳೂರು, ಏ.20– ದ್ವಿತೀಯ ಪಿಯು ವಾರ್ಷಿಕ ಪರೀಕ್ಷೆ–2 ಏ.29ರಿಂದ ಆರಂಭವಾಗಲಿದ್ದು, 1.60 ಲಕ್ಷ ವಿದ್ಯಾರ್ಥಿಗಳು ಹೆಸರು ನೋಂದಾಯಿಸಿಕೊಂಡಿದ್ದಾರೆ.

ಫಲಿತಾಂಶ ಉತ್ತಮಪಡಿಸಿಕೊಳ್ಳಲು ವಿಜ್ಞಾನ ವಿಷಯದ ವಿದ್ಯಾರ್ಥಿಗಳು ಹೆಚ್ಚಿನ ಸಂಖ್ಯೆಯಲ್ಲಿ ಹೆಸರು ನೋಂದಾಯಿಸಿಕೊಂಡಿದ್ದಾರೆ.

ಇಂದು ಬಿಜೆಪಿ ಬೆಂಬಲಿಸಿ ಕಾಯಕ ಸಮಾಜಗಳ ಕಾರ್ಯಕರ್ತರ ಸಭೆ

ಬಿಜೆಪಿ ಹಿಂದುಳಿದ ವರ್ಗಗಳ ಮೋರ್ಚಾ ರಾಜ್ಯಾಧ್ಯಕ್ಷ ರಘು ಕೌಟಿಲ್ಯ ವಿವರಣೆ



ಮೈಸೂರಿನ ಬಿಜೆಪಿ ಕಚೇರಿಯಲ್ಲಿ ರಾಜ್ಯ ಬಿಜೆಪಿ ಹಿಂದುಳಿದ ಮೋರ್ಚಾ ಅಧ್ಯಕ್ಷ ರಘು ಆರ್. ಕೌಟಿಲ್ಯ ಸುದ್ದಿಗೋಷ್ಠಿ ನಡೆಸಿದರು.

ಮೈಸೂರು,ಏ.20(ಎಂಟಿವೈ)– ಮೈಸೂರು–ಕೊಡಗು ಹಾಗೂ ಚಾಮರಾಜನಗರ ಲೋಕಸಭಾ ಕ್ಷೇತ್ರದಲ್ಲಿ ಬಿಜೆಪಿ ಅಭ್ಯರ್ಥಿಗಳಿಗೆ ಬೆಂಬಲ ಸೂಚಿಸಲು, ನಾಳೆ(ಏ.21) ಬೆಳಗ್ಗೆ 11 ಗಂಟೆಗೆ ದಸರಾ ವಸ್ತು ಪ್ರದರ್ಶನ ಆವರಣದಲ್ಲಿ ಕಾಯಕ ಸಮಾಜಗಳ ಕಾರ್ಯಕರ್ತರ ಸಭೆ ಆಯೋಜಿಸಲಾಗಿದೆ ಎಂದು ರಾಜ್ಯ ಬಿಜೆಪಿ ಹಿಂದುಳಿದ ವರ್ಗಗಳ ಮೋರ್ಚಾ ಅಧ್ಯಕ್ಷ ರಘು ಆರ್. ಕೌಟಿಲ್ಯ ತಿಳಿಸಿದ್ದಾರೆ.

ಮೈಸೂರಿನ ಬಿಜೆಪಿ ಕಚೇರಿಯಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಅಭ್ಯರ್ಥಿ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್, ಚಾಮರಾಜನಗರ ಮೀಸಲು ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಎಸ್.ಬಾಲರಾಜ್ ಅವರಿಗೆ ಕಾಯಕ ಸಮಾಜಗಳು ಬೆಂಬಲ ನೀಡಲಿವೆ. ಈ ಎರಡೂ ಲೋಕಸಭಾ ಕ್ಷೇತ್ರಗಳ ವ್ಯಾಪ್ತಿಯ ಎಲ್ಲಾ ವಿಧಾನಸಭಾ ಕ್ಷೇತ್ರಗಳಲ್ಲೂ ಕಾಯಕ ಸಮುದಾಯಗಳ 60 ರಿಂದ 70 ಸಾವಿರ ಮತಗಳಿವೆ. ಈ ಎಲ್ಲಾ ಮತಗಳು ಬಿಜೆಪಿ ಅಭ್ಯರ್ಥಿಗಳಿಗೆ ಲಭಿಸುವುದರಿಂದ ಈ ಎರಡೂ ಕ್ಷೇತ್ರಗಳಲ್ಲೂ ಬಿಜೆಪಿ ಅಭ್ಯರ್ಥಿಗಳ ಗೆಲುವು ನಿಶ್ಚಿತ ಎಂದರು.

ಮೈಸೂರಿನ ದಸರಾ ವಸ್ತು ಪ್ರದರ್ಶನದ ಆವರಣದಲ್ಲಿ ಕಾಯಕ ಸಮಾಜದ ಕಾರ್ಯಕರ್ತರ ಸಭೆ ಆಯೋಜಿಸಲಾಗಿದೆ. ಏ.21ರಂದು ಬೆಳಗ್ಗೆ 11 ಗಂಟೆಗೆ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಉದ್ಘಾಟಿಸಲಿದ್ದಾರೆ. ಎರಡು ಕ್ಷೇತ್ರಗಳ ಅಭ್ಯರ್ಥಿಗಳು, ಮುಖಂಡರು ಸಭೆಯಲ್ಲಿ ಪಾಲ್ಗೊಳ್ಳಲಿದ್ದಾರೆ ಎಂದು ತಿಳಿಸಿದರು.

ಸಣ್ಣ ಸಮುದಾಯಗಳು ಕಾಂಗ್ರೆಸ್ ಭಾಗ್ಯಗಳ ಸಂಭ್ರಮದಲ್ಲಿ ಹಿನ್ನಡೆ ಅನುಭವಿಸುತ್ತಿವೆ. ಗ್ಯಾರಂಟಿ ಕಾರ್ಯಕ್ರಮ ತಾತ್ಕಾಲಿಕ ಕಾರ್ಯಕ್ರಮವಾಗಿದೆ. ಕಾಯಕ ಸಮಾಜಗಳಿಗೆ ಶಾಶ್ವತ ಕಾರ್ಯಕ್ರಮಗಳ ಅಗತ್ಯವಿದೆ. ಕಾಯಕ ಸಮಾಜಗಳ ನಿಗಮ ಮಂಡಳಿಗಳಿಗೆ ಈ ಹಿಂದೆ ಬಿಜೆಪಿ ಸರ್ಕಾರ 500 ಕೋಟಿ ರೂ. ನೀಡಿತ್ತು. ಆದರೆ, ಇಂದಿನ ರಾಜ್ಯ ಸರ್ಕಾರ ಕೇವಲ 170 ಕೋಟಿ ನೀಡಿದೆ. ಹಿಂದುಳಿದ ವರ್ಗಗಳ ಹಿತಾಸಕ್ತಿ ಕಡೆಗಣಿಸುತ್ತಿದೆ. ಈ ಹಿನ್ನೆಲೆಯಲ್ಲಿ ಕಾಯಕ ಸಮಾಜಗಳಿಗೆ ಜಾಗೃತಿ ಮೂಡಿಸಲು ಸಮಾವೇಶ ನಡೆಸಲಾಗುತ್ತಿದೆ ಎಂದು ಹೇಳಿದರು.


ಕಾಂಗ್ರೆಸ್ ಸರ್ಕಾರ ಜಾಹಿರಾತುಗಳಿಂದ ಜನರನ್ನು ದಿಕ್ಕು ತಪ್ಪಿಸುತ್ತಿದೆ. ರೈತರು, ಕಾಯಕ ಸಮುದಾಯಕ್ಕೆ ಚೊಂಬು ನೀಡಿದ್ದಾರೆ. ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಹದಗೆಟ್ಟಿದೆ. ಹೆಣ್ಣು ಮಕ್ಕಳ ಮೇಲಿನ ದೌರ್ಜನ್ಯ ಪ್ರಕರಣ ಹೆಚ್ಚುತ್ತಿದೆ. ಸರ್ಕಾರ ಗೂಂಡಾ, ಭಯೋತ್ಪಾದಕರಿಗೆ ಬೆಂಬಲ ನೀಡುತ್ತಿದೆ. ಈ ಹಿನ್ನೆಲೆಯಲ್ಲಿ ರಾಜ್ಯದಲ್ಲಿ ರಾಷ್ಟ್ರಪತಿ ಆಡಳಿತ ಹೇರಲು ಶಿಫಾರಸ್ಸು ಮಾಡುವಂತೆ ರಾಜ್ಯಪಾಲರಿಗೆ ಪತ್ರ ಬರೆಯಲು ನಿರ್ಧರಿಸಿರುವುದಾಗಿ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ವಿಶ್ವಕರ್ಮ ಸಮುದಾಯ ಬಾಬು ಪತ್ತಾರ್, ಗಾಣಿಗ ಸಮುದಾಯ ಚನ್ನಕೇಶವ, ನೇಕಾರ ಸಮುದಾಯದ ಚಲುವರಾಜ್ ಕುಮಾರ್, ರಂಗಪ್ಪಚಾರ್, ರಶ್ಮಿ ಹಾಗೂ ಇನ್ನಿತರರು ಇದ್ದರು.

ವಾರದ ಮಿತ್ರ
ಸಾಪ್ತಾಹಿಕ ಪುರವಣಿ
ಮೈಸೂರು ಮಿತ್ರ
ಭಾನುವಾರ 21-4-2024

ಚಂದ್ರೀ...!

ದ್ವಿತೀಯ ಬಹುಮಾನ



ಜೆ.ಸಿ.ಮಧುಸೂದನ
ವಿಳಾಸ: ನಂ.179, 6ನೇ ಕ್ರಾಸ್, ನವಿಲುರಸ್ತೆ, 'ಎ' ಮತ್ತು 'ಬಿ' ಬ್ಲಾಕ್, ಕುವೆಂಪುನಗರ, ಮೈಸೂರು-570023 ಮೊ: 9900718762



'ಅರಮನೀಯಂತ ಮನೆ, ಸುಖದ ಸುಪ್ಪತ್ತಿಗೇಲೆ ತೇಲಾಡ್ತಳ ನನ್ನ ಕಂದ ಅಂದ್ಕೊಂಡಿದ್ವಲ್ಲಪ್ಪ ಶಿವನೆ, ಎಲ್ಲಾ ಬರೀ ಕನಸಾ ಆತಲ್ಲೋ ಯಪ್ಪಾ.' ಎಂದು ಏನೇನೋ ಗೊಣಿಕೋತ ಸುಂಕವ್ವ ಸೀಮೆಎಣ್ಣೆ ಬುಡ್ಡಿ ಕೆಳಗೆ ಅಕ್ಕಿ ಮೊರದಾಗ ಕಲ್ ಆಯೋದು ಕತ್ಯಾಳ. 'ಹಾಂಗ್ಯಾಕ್ ಹೇಳ್ತೀ ಬಿಡವ್ವ, ಅಲ್ಲಾ, ಅವಳ ಬಾಳು ಹಾಂಗಾ ಆಗ್ಬೇಕು ಅಂತಾ ಇದ್ರ ನಾವೇನ್ ಮಾಡಾಕ್ ಆಗತೈತಿ; ಮುಖ್ಯ ನಮ್ ನಸೀಬೇ ಚೆಂದಿಲ್ಲೇಳು.' ಸುಂಕವ್ವನ ಕೊರಗಿಗೆ ಸಮಾಧಾನ ಹೇಳ್ದ ಅವಳ ಮಗ ದೇವೀರ. ಇಬ್ಬರೂ ಹಾಗೇ ಮಾತಾಡ್ತಿದ್ಹಂಗೆ ಹೊರಗೆ ಮಳೆ ತೊಟ್ಟಿಕ್ಕಕ್ ಪ್ರಾರಂಭವಾಯ್ತು. ಮಳೆ, ತುಂತುರು ತುಂತುರು ಮಳೆ... ಗಾಳೀನೂ ಜೋರಾಗ್ ಬೀಸೋಕ್ ಶುರುವಾಯ್ತು. ಆ ಗಾಳೀ ಹೊಡೆತಕ್ಕೆ ಸುಂಕವ್ವನ ಮನೇ ಕಿಟಕೀ ಬಾಗಿಲು ಶಬ್ದ ಮಾಡೋಕ್ ಹತ್ತಿದ್ವು.. ಸೀಮೇಎಣ್ಣೆ ಬುಡ್ಡೀ ಬೇರೆ ಆರೋಯ್ತು. 'ಲೋ ದೇವೀರಾ... ವಸಿ ಈ ದೀಪ ಹೊತ್ತಿಸೋ..' ಸುಂಕವ್ವ ಹೀಗೆ ಹೇಳಿದ್ದೇ ತಡ ದೇವೀರ ತನ್ನ ಕಿಸೆಯೊಳಗಿದ್ದ ಬೆಂಕಿಪೊಟ್ಟಣದಿಂದ ಒಂದು ಕಡ್ಡೀ ಗೀರಿ ಆ ದೀಪ ಹೊತ್ತಿಸಿದ.... ಒಮ್ಮೆಲೇ ಅವನ ನೋಟಾ ಎಲ್ಲಾ ಆ ದೀಪದ ಮ್ಯಾಲೆ ಹೋಯ್ತು. ಸುಂಕವ್ವ ಎದ್ದು ಹೋಗಿ ಬಡಿದುಕೊಳ್ಳುತ್ತಿದ್ದ ಕಿಟಕೀ ಬಾಗಿಲುಗಳನ್ನು ಮುಚ್ಚಿದ್ಲು.

'ಅವ್ವಾ, ಆರೋದ ಈ ದೀಪಾನೇನೋ ಹತ್ತಿಸ್ದೆ. ಕತ್ಲಲ್ಲಿರೋ ನನ್ನ ಮಗೀ ಬಾಳಿನ್ ದೀಪಾ ನನ್ ಕೈಲೀ......' ಒಂದೇ ಸಮನೆ ಅಳೋದುಕ್ ಪ್ರಾರಂಭಿಸಿದ ದೇವೀರ.

'ಸಮಾಧಾನ ತಂದ್ಕೋ ಮಗ... ನೀನೇ ಹೇಳ್ದಲ್ಲ ಎಲ್ಲಾ ನಮ್ ನಸೀಬು. ನೋಡವ ಆ ಶಿವ ಯಾವತ್ತಾದ್ರು ಕಣ್ ಬುಟ್ಟಾನಾ ಅಂತ.' ಸುಂಕವ್ವನ ಈ ಮಾತು ದೇವೀರನ ದುಃಖ ಶಮನಾ ಮಾಡ್ತು... ಸ್ವಲ್ಪ ಹೊತ್ತು ಮೌನ. ಇಬ್ಬರೂ ಅದೇನೋ ಯೋಚನೆಯಲ್ಲಿ ಮುಳುಗೋದ್ರು... ಹೊರಗೆ ತುಂತುರು ಮಳೇ ಸುರಿತಾನೇ ಇತ್ತು. ದೀಪದ ಉರೀನಾ ಕಡಿಮೆ ಮಾಡ್ತಾ ಸುಂಕವ್ವ ಹೇಳಿದ್ಲು ... 'ಏಯ್ ದೇವೀರ ಆವತ್ತು .... ಆವತ್ತೂ ಹೀಂಗಾ ಮಳೇ ಬಿಳ್ತಿತ್ತು ಅಲ್ಲೇನೋ' 'ಯಾವತ್ತು?' 'ಅದೇ ನಮ್ ಚಂದ್ರೀ ನೋಡಾಕ್ ಗಂಡಿನ್ ಕಡೆಯೋರ್ ಬಂದಿದ್ರಲ್ಲಾ ಆವತ್ತು'

ಹಾಗೇ ಒಂದು ಘಳಿಗೆ ಸುಂಕವ್ವ ಒಂದು ವರ್ಷದ ಹಿಂದೇನಾ ಹೋದ್ಲು...

'ಹಾಳಾದ್ ಮಳೆ ಈವತ್ತೇ ಹಿಡ್ಕೋ ಬೇಕಾ ಥತ್, ಕೆಲ್ಸಾ ಎಲ್ಲಾ ಹಾಳಾತು.' ದೇವೀರ ಬಡಬಡಿಸುತ್ತಿದ್ದ. ಅವನ ದೃಷ್ಟಿಯೆಲ್ಲಾ ಬೀದೀ ಮೇಲೇ ಇತ್ತು. ಇತ್ತ ಒಳಗೆ ತನ್ನ ಮೊಮ್ಮಗಳು ಚಂದ್ರೀನ ಪಕ್ಕದ ಮನೇ ಹೆಂಗಸರ ಸಹಾಯದಿಂದ ಸಿಂಗರಿಸುತ್ತಿದ್ದಳು ಸುಂಕವ್ವ.

'ಖರೇ ಹೇಳ್ತೀನ್ ಮಗಳ... ಈ ರೇಷ್ಮೆ ವಸ್ತ್ರದಾಗ ಒಳ್ಳೆ, ಒಳ್ಳೆ ರಾಜ್‌ಕುಮಾರಿ, ರಾಜ್‌ಕುಮಾರಿ ಕಂಡಂಗ್ ಕಾಣ್ತಿಯಲ್ಲೇ, ನನ್ ಕಣ್ಣಾ ತಾಗೋಕತ್ತೈತಿ'.... ಎಂದು ಮೊಮ್ಮಗಳ ಸಿಂಗಾರ ನೋಡಿ ಸಂತೋಷ ಪಡ್ತಾ, ಅವಳ ಕೆನ್ನೇ ಸವರಿ ನಟಿಕೇ ತೆಗೆದಳು. 'ರಾಜ್‌ಕುಮಾರ, ರಾಜ್ ಕುಮಾರ ಬರ್ತಾನ ಚಂದ್ರೀ.... ನಿನ್ನ ಕರ್ಕೊಂಡ್ ಹೋಗಾಕ, ಗಾಡೀ ಮ್ಯಾಲ್ ಬರ್ತಾನಂತ, ಮೋಟಾರ್ ಗಾಡೀ ಮ್ಯಾಲ... ಆಮೇಲಿಂದ ಈ ಸುಂಕವ್ವ ನಿಂಗ್ ನೆನಪ್ಪಾಗ್ತಾಳಾ ಚಂದ್ರಿ....' ಎಂದು ಮುಂತಾಗಿ ಸುಂಕವ್ವ ಮೊಮ್ಮಗಳನ್ನ ರೇಗಿಸೋಕ್ ಹೇಳಿದ ಮಾತಿಗೆ ಚಂದ್ರಿ ನಾಚಿದ್ಲು, ನಾಚಿ ನೀರಾಗಿ ಹೋದ್ಲು.

'ಥೂ ಹೋಗಜ್ಜಿ.' ಅಂತಾ ಮುಖ ಮುಚ್ಚಿಕೊಂಡಳು. ಆಮೇಲೆ ಇದ್ದಕ್ಕಿದ್ದಂತೆ 'ಅಜ್ಜಿ ಒಂದ್ ಮಾತಾ ಹೇಳ್ತೀನ್ ಕೇಳು, ನನ್ನ ಪ್ರಾಣ ಬೇಕಾದ್ರೂ ಬಿಡೋ ಆಕಿ ನಾ, ಆದ್ರೆ.. ಆದ್ರೆ ನಿನ್ನ ನಾ ಮರಿಯಲ್ಲೇಳು.' ಎಂದು ಅಜ್ಜೀನಾ ತಬ್ಬಿಕೊಂಡು ಗೊಳೋ ಅಂತಾ ಅಳೋದುಕ್ ಪ್ರಾರಂಭಿಸಿದಳು. ಸುಂಕವ್ವಗಂತೂ ದುಃಖ ತಡೀದಾಯ್ತು. ಒತ್ತರಿಸಿ ಬಂದ ಅಳೂನ ಬಲವಂತದಿಂದ ತಡೆದ್ಲು, ಮೊಮ್ಮಗಳನ್ನ ಸಮಾಧಾನ ಮಾಡಿದ್ಲು....

ಅಷ್ಟೊತ್ತಿಗೆ ಹೊರಗಡೆ ಮೋಟಾರು ಗಾಡಿ ಬಂದ ಸದ್ದಾಯಿತು. ತುಂತುರು ಮಳೆ ಹಾಗೇ ಬರ್ತಿತ್ತು. ಗಂಡಿನ್ ಕಡೆಯವರನ್ನು ದೇವೀರ ಬಹಳ ದೈನ್ಯವಾಗಿ ವಂದಿಸಿ ಮನೆ ಒಳಗೆ ಬರಮಾಡಿಕೊಂಡ. ಅವರ ಪೈಕಿ, ಹುಡುಗ ಸೋಮಯಾಜಿ ಅಂತ. ಸರ್ಕಾರಿ ಚಾಕ್ರಿ ಗಿಟ್ಟಿಸಿದ್ದ. ಅಷ್ಟೇ ಅಲ್ಲ ತಾತನಿಂದ ಬಂದ ಬಳುವಳಿ ಮನೆ, ತೋಟಾ.... ಹೀಗಾಗಿ ಅವ ಭಾರಿ ಹುಡುಗನೇ. ಮುತ್ತೈದೇರು ಚಂದ್ರೀನಾ ಗಂಡಿನೋರ್ ಮುಂದೆ ಕೂರಿಸಿದ್ರು. ಅವಳಂತೂ ನಾಚಿಕೆಯಿಂದ್ಲೂ, ಭಯದಿಂದ್ಲೂ ತಲೆ ತಗ್ಗಿಸಿಕೊಂಡು ಹಾಗೇ ಕೆಳಗೆ ನೋಡ್ತಿದ್ಲು.


'ಸ್ವಲ್ಪ ತಲೆಯೆತ್ತು ಮಗ, 'ಇವನಾ ನನ್ನ ಮಗ ಸೋಮಯಾಜಿ, ನಿನ್ನ ಮದ್ವೀ ಆಗವ' ಹುಡುಗನ ತಂದೆ ಹೀಗೆ ಹೇಳಿದ್ದನ್ನು ಕೇಳಿದ ಚಂದ್ರಿ ತನ್ನ ಮುಖ ಮೇಲೆತ್ತಿ ಹುಡುಗನ ಕಡೆಗೆ ಒಂದು ಸಣ್ ನೋಟಾ ಬೀರಿದ್ಲು. ಅವನೂ ಚಂದ್ರೀನ ನೋಡ್ದ. ಇಬ್ಬರಿಗೂ ಒಪ್ಪಿಗೇ ಆಗಿದೆ ಅಂತ ಅವರ ನೋಟಾನೇ ಹೇಳ್ತಿತ್ತು.

'ದೇವೀರಾ ಚಿಂತೀ ಮಾಡ್ಬ್ಯಾಡ ಇವ್ರಿಗೆ ನಿನ್ನ ಚಂದ್ರಿ ಮಾತ್ರ ಬೇಕು. ಬೇರೇ ಏನೂ ಇವರು ಆಸೆ ಪಡೊಂಗಿಲ್ಲ. ಮದ್ವೇ ಆದ್ಮೇಲೆ ಚಂದ್ರಿ, ರಾಜ್‌ಕುಮಾರಿ ಹಾಂಗ್ ಇರ್ತಾಳ, ಅರಮನಿಯಂತ ಮನಿ, ಆಳುಕಾಳು, ಎಲ್ಲಾ..... ಇನ್ನೇನು ಸುಮ್ನೆ ಒಪ್ಕೋ.' .... ಮಧ್ಯಸ್ಥಿಕೆದಾರ ಈ ಮಾತನ್ನು ಹೇಳಿದ್ದೇ ತಡ, ದೇವೀರನಿಗೆ ತುಂಬ, ತುಂಬಾನೇ ಖುಷಿಯಾಗೋಯ್ತು "ಏನೋ ಯಪ್ಪಾ, ಈ ನನ್ನ ಮಗೀನಾ, ಮಲ್ಲಿಗೆ, ಮಲ್ಲಿಗೆ ಹಾಂಗ್ ಸಾಕೀನಿ, ಇದು ಬಾಡೋಗ್ದಂಗ್ ನೋಡ್ಕೋಳ್ತೀವಿ ಅಂತ ಮಾತ್ ಕೊಟ್ರೆ....ನನಗೆ ಈ ಸಂಬಂಧ ಒಪ್ಪಿಗ್ಯಾನೆ' ಅಂತ ತನ್ನ ಬಾಯಿಗ್ ಬಂದ ಮಾತುಗಳ್ನ ಹಾಗೇ ಆಡ್ದ ದೇವೀರ.

'ನಮ್ಗ ಹೆಣ್ಮಕ್ಳಿಲ್ಲೇಳಿ, ನಿಮ್ ಮಗಳು ಚಂದ್ರೀ ನಮ್ಗ ಬರೀ ಸೊಸೀ ಮಾತ್ರ ಅಂತ ತಿಳ್ಕೊಬ್ಯಾಡ್ರೀ, ಆಕಿ ನಮ್ ಮಗಳಾ ಅಂತಾ ತಿಳ್ಕೊಂಡು ಜೋಪಾನವಾಗ್ ನೋಡ್ಕೋತೀವಿ, ಇದು ಖರೇ ಮಾತ ಅನ್ನೋದ್ ತಿಳೀರಿ'..... ಹುಡುಗನ ತಾಯಿ ತನ್ನ ಕಡೇ ಮಾತು ಹೇಳಿದ್ಲು..... ಅಲ್ಲಿಗೆ ಈ ಸಂಬಂಧ ಕುದುರ್ದಂಗಾಯ್ತು. ಸುಂಕವ್ವನ ಕಣ್ಣಲ್ಲಿ ನೀರು ತುಂಬುಕೊಂಡವು. 'ಆ ದಿನ, ಆ ದಿನ...... ನಮ್ ಚೆಂದುಳ್ಳಿ ಚಂದ್ರಿ ಲಗ್ನಾ ಆಗಿ ಗಂಡನ್ ಮನೀಗ್ ಹೋಗಾಗ ನಾನಾ ..... ನಾನಾ ಈ ಕೈಯಾರೆ ಹರಿಸಿದ್ದೆ....'

'ಚಂದ್ರಿ, ನಿನ್ನ ಬಾಳ್ ಬೆಳಕಾಗ್ಲಿ ಮಗಳ, ಇಷ್ಟು ದಿವ್ಸ ಆಡ್ಕೊಂಡ್, ನಕ್ಕೊಂಡ್, ನಲೀತಿದ್ ನೀನು ಈವತ್ತ ಗಂಡನ್ ಮನೀಗ್ ಹೋಗ್ತಾ ಇದ್ದಿ, ಆ ದೇವರು ನಿನ್ನ ಸಂದಾಕ್ ಇಟ್ಟಿರ್ಲಿ.... ಇನ್ನೂ ಏನೇನೋ. ಆದ್ರ.... ಆದ್ರ.... ನನ್ನ ಹರಕೆ ಫಲಿಸ್ಲಿಲ್ವಲ್ಲೋ ದೇವೀರಾ, ಎಲ್ಲಾ ಬೇರೇನೋ ಆಗ್ಬುಡ್ತಲ್ಲೋ....' ಅಂತಾ ಚಂದ್ರೀನ ನೆನೆಸ್ಕೊಂಡು ಬಿಕ್ಕಳಿಸಿ ಬಿಕ್ಕಳಿಸಿ ಅತ್ತಳು ಸುಂಕವ್ವ.

ಮದುವೆ ಆಗಿ ಗಂಡನ ಮನೆಗೆ ಹೋದ ಚಂದ್ರಿ ಸುಖವಾಗಿದ್ದುದು ಕೇವಲ ಎರಡೇ ತಿಂಗಳು ಮಾತ್ರ ಆಮೇಲೆ ಅವಳ ಜೀವನದಲ್ಲಿ ಆವರಿಸಿದ್ದು ಬರೀ ಕರಿ ಮೋಡಗಳಂತ ಕಷ್ಟಗಳು. ಆ ಮೋಡಗಳು ಮಳೆಯಾಗಿ ಹರಿದ್ಹಾಂಗೆ, ಅವಳ ಜೀವನದ ಮುಂದಿನ ದಿನಗಳೆಲ್ಲಾ ಬರೀ ಕಣ್ಣೀರೆ ಆಗಿ ಹೋಯಿತು. ಅವಳ ಅತ್ತೆ, ಮಾವ, ಗಂಡ ಎಲ್ಲಾ ಅವಳನ್ನ ಮೊದಮೊದಲು ರಾಜಕುಮಾರಿ ತರಾನೆ ನೋಡಿಕೊಳ್ಳುತ್ತಿದ್ದರು. ಆದರೆ ಆ ಮಮಕಾರಕ್ಕೆ ವಿಧಿಯು ಕಪ್ಪು ಛಾಯೆ ಆವರಿಸಿತ್ತು. ...... ಇದ್ದಕ್ಕಿದ್ದ ಹಾಗೆ ಅವಳ ಮಾವ ಕ್ಯಾನ್ಸರ್ ಕಾಯಿಲೆಗೆ ತುತ್ತಾಗಿ ಇಹಲೋಕ ತ್ಯಜಿಸಿದ. ಹುಡುಗನ ತಂಗಿಯ ಗಂಡು ಮಗುವೊಂದು ಕೊರೋನ ಹೆಮ್ಮಾರಿ ಬಂದು ತೀರಿಕೊಂಡಿತು.



ಇವೆಲ್ಲಾ ಒಂದರ ಮೇಲೊಂದರಂತೆ ನಡೆದು ಹೋದವು. ಇಷ್ಟು ಸಾಲದು ಎಂಬಂತೆ ಆಸ್ತಿಯ ವಿವಾದವೊಂದು ಹುಟ್ಟಿ ಕೋರ್ಟಿಗೆ ಸಾಕಷ್ಟು ಅಲೆದು ಅಲೆದೂ ಸಾಕಾಗಿ ಹೋಯ್ತು. ಕಡೆಗೆ ಜಮೀನೊಂದು ಕೈ ತಪ್ಪಿಹೋಯಿತು. ಇದಕ್ಕೆಲ್ಲಾ ಹುಡುಗನ ತಾಯಿ, ಯಾರದೋ ಹೇಳಿಕೆ ಮಾತು ಕೇಳಿಕೊಂಡು ಚಂದ್ರೀನ ಹೊಣೆ ಮಾಡಿದಳು. ಅವಳ ಮೇಲೆ ಇಲ್ಲಸಲ್ಲದ ಕಾರಣ ನೀಡಿ, 'ಅನಿಷ್ಟ 'ಅಂತ ಹಣೆಪಟ್ಟಿ ಕಟ್ಟಿದಳು. 'ಚಂದ್ರಿಯ ಕಾಲ್ಗುಣದಿಂದ ನಮ್ಮ ಮನೇಗೆ ಗ್ರಹಚಾರ ವಕ್ಕರಿಸಿತು' ಎಂದು ಅವಳನ್ನು ಮೊದ ಮೊದಲು ಚುಚ್ಚೀಚುಚ್ಚೀ ಮಾತನಾಡುತ್ತಿದ್ದಳು. ಬರ್ತಾಬರ್ತಾ ಶಿಕ್ಷೆ ಕೊಡೋದುಕ್ಕೂ ಪ್ರಾರಂಭಿಸಿದಳು. ಪಾಪ! ಅವಳ ಗಂಡ ತಾನೇ ಏನು ಮಾಡಿಯಾನು. ಹೊರಗಡೆ ಚಾಕ್ರಿ ಮಾಡೋಕೆ ಹೋಗೋನು. ಅವನಿಗೆ ಇವೆಲ್ಲಾ ತಿಳೀತಾನೇ ಇವಲಿಲ್ಲ.

ದಿನೇದಿನೇ ಚಂದ್ರೀಗೆ ಕೊಡುತ್ತಿದ್ದ ಕಾಟ ಜಾಸ್ತಿನೇ ಆಗಿಹೋಯ್ತು. ಬಡವರ ಮನೆ ಮಗಳು, ಅಂತಾ ಬೇರೆ ಹೊಸ ರಾಗನೂ ಪ್ರಾರಂಭವಾಗಿತ್ತು. ಗಂಡನ ತಾಳ್ಮೆಯೂ ಕೆಟ್ಟಿತ್ತು. ಸಮಯ ನೋಡಿ ಅವನ ಕಿವಿಯನ್ನೂ ತಾಯಿ ನುಲಿದಿದ್ದಳು. ಮನಸ್ಸನ್ನೂ ಚಿಟ್ಟಿಗೆಬ್ಬಿಸುತ್ತಿದ್ದಳು. ಕಾಲ ಕ್ರಮೇಣ ಅವನೂ ಚಂದ್ರಿಯ ಪಾಲಿಗೆ ಚುಚ್ಚೋ ಮುಳ್ಳಾದ. ಹೀಗೆ ಚಂದ್ರಿಯ ಬಾಳು ದುಃಖದ ಮಡುವಾಗಿ ಹೋಯ್ತು. ಇದನ್ನೆಲ್ಲಾ ನೆನೆಸಿಕೊಂಡು ಸಂಕಟಪಡ್ತಾ ದೇವೀರ ಮತ್ತು ಸುಂಕವ್ವ ಒಬ್ಬರಿಗೊಬ್ಬರು ಸಮಾಧಾನ ಹೇಳ್ಕೊಳ್ತಾಯಿದ್ರು. ಅಷ್ಟರಲ್ಲಿ ಹೊರಗಡೆ ಬಾಗಿಲು ಬಡಿಯೋ ಸದ್ದು. 'ಯಾರಿರಬಹುದು? ಇಷ್ಟೊತ್ತಲ್ಲಿ !' ಎಂದು ತಡವರಿಸಿಕೊಂಡು ಹೋಗಿ ಬಾಗಿಲು ತರೆದು ನೋಡ್ತಾಳೆ ಸುಂಕವ್ವ.... ಮಳೇಲೇ ನೆನೆದುಕೊಂಡು, ಹಣೆಯಲ್ಲಿ ರಕ್ತ ಸುರೀತಾ, ಹುಚ್ಚಿಯಂತೆ ತಲೆ ಕೆದರಿಕೊಂಡಿರೋ ಚಂದ್ರಿ ನಿಂತಿದ್ದಾಳೆ! 'ಚಂದ್ರಿ..... ಚಂದ್ರೀ, ದೇವೀರ, ನೋಡು ಬಾರೋ, ನಿನ್ನ ಮಗೀನ ....ಅಯ್ಯೋ, ಬಾ ಕಂದಾ ಒಳಗ್' ಅಂತಾ ಚಂದ್ರೀನ ಎದೇಗೊರಗಿಸ್ಕೊಂಡು ಒಳಗೆ ಕರೆದುಕೊಂಡು ಹೋದಳು ಸುಂಕವ್ವ. ದೇವೀರಗಂತೂ ಏನು ಮಾಡಬೇಕೋ ತೋಚದೇ ಹೋಯ್ತು. ತಲೇಮೇಲೆ ಕೈ ಹೊತ್ತು ಕೂತ್ಬಿಟ್ಟ, ಒಳಗೆ ಬಂದ ಚಂದ್ರಿ ಯಾರ ಜೊತೆನೂ ಮಾತೇ ಆಡ್ಲಿಲ್ಲ. ಸುಂಕವ್ವ 'ಏನವ್ವಾ ಕೂಸೇ ನಿನ್ನ ಕತೀ, ಇಂಗ್ಯಾಕೆ ಆತೋ ಶಿವನಾ, ಇದನ್ನೆಲ್ಲಾ ನೋಡಾಕ ನನ್ನ ಜೀವ ಉಳಿಸಿದ್ದೀಯಾ ನನ್ನಪ್ಪಾ' ಎಂದು ಹಣೆ ಹಣೆ ಚೆಚ್ಕೋತಾ ಗೋಳಾಡ್ತಿದ್ದಳು. ದೇವೀರ 'ಚಂದ್ರೀ ಏನಾಯ್ತು ಮಗಳ, ಈಟೋತ್ನಾಗ ಹೀಂಗ್ಯಾಕ್ ಬರೋಕೋ ದವ್ವ ಅಂತಾದ್ ಏನ್ ನಡೀತು ಹೇಳವ್ವ?' ಅಂತಾ ಪ್ರಶ್ನೆ ಮಾಡತೊಡಗಿದ. ಚಂದ್ರಿ ಒಮ್ಮೆ ದೇವೀರನ್ನ, ಒಮ್ಮೆ ಸುಂಕವ್ವನ್ನ ನೋಡಿದಳು. ಸ್ವಲ್ಪ ಹೊತ್ತು ಮೌನವಾಗಿ ಕುಳಿತಿದ್ದಳು. ಅವಳ ಅಂತರ್ಯದಲ್ಲಿ ದುಃಖದ ಪ್ರವಾಹಾನೇ ತುಂಬಿ ತುಳುಕುತ್ತಿತ್ತು ಎಲ್ಲವನ್ನೂ ಅದುಮಿ ಇಟ್ಟುಕೊಂಡಿದ್ದಳು. ಆದರೆ, ಅದನ್ನ ಇನ್ನೆಷ್ಟು ತಡೆಯೋಕಾಗುತ್ತೆ,...... 'ಅಜ್ಜೀ...... ಯವ್ವಾ' ಎಂದು ಕಿರುಚುತ್ತಾ ಓಡಿಹೋಗಿ ಸುಂಕವ್ವನ್ನ ತಬ್ಬಿಕೊಂಡು ಅವಳ ಕಣ್ಣೀರೆಲ್ಲ ಖಾಲೀ ಆಗೋವಷ್ಟು ಅತ್ತಳು. ಗಂಡನ ಮನೆಯವರ ಕಾಟ ವಿಪರೀತವಾಗಿ ತನ್ನನ್ನು ಸಾಯಿಸೋಕೆ ನೋಡಿದ್ದು, ಆದರೆ ತಾನು ಪಕ್ಕದ ಮನೆಯವರ ಸಹಾಯದಿಂದ ತಪ್ಪಿಸಿಕೊಂಡು ಬಂದದ್ದು. ಎಲ್ಲವನ್ನೂ ವಿಷದವಾಗಿ ವಿವರಿಸಿದಳು. ಸುಂಕವ್ವ, ದೇವೀರ ಅದನ್ನೆಲ್ಲಾ ಕೇಳಿ ಸಂಕಟ ಪಟ್ಟರು. ಸುಂಕವ್ವ, ಚಂದ್ರಿಗೆ ಸಮಾಧಾನ ಹೇಳಿದಳು. ಆದರೆ ಒಮ್ಮೆಗೇ ದೇವೀರನಿಗೆ ಕೋಪ ಬಂದು, ಉದ್ರಿಕ್ತನಾಗಿ 'ಅವರ್ನೆಲ್ಲಾ ಸಿಗ್ದಾಕ್ಬಿಡ್ತೀನಿ.' ಅಂತೆಲ್ಲಾ ಎಗರಾಡ್ದ. ಸುಂಕವ್ವ ಅವನಿಗೆ ಬುದ್ಧಿ ಹೇಳಿ ಸುಮ್ಮನಿರಿಸಿದಳು. ಕಡೆಗೆ ಚಂದ್ರಿ ಗಂಡನ ಮನೆಗೆ ಹೋಗೋದೆ ಬೇಡ ಅಂತ ತೀರ್ಮಾನವಾಯ್ತು. ಸುಂಕವ್ವ 'ಚಂದ್ರೀನ ಕಣ್ಣಾಗಿ ನೋಡಿಕೊಳ್ಳುತ್ತೇನೆ 'ಅಂತಾ ಹೇಳಿ, ಅವಳನ್ನ ಮತ್ತೆ ಸಂತೈಸಿದಳು. ಅಜ್ಜಿಯ ಪ್ರೀತಿಗೆ, ಚಂದ್ರಿ ತಲೆ ಬಾಗಿದಳು. ಅಪ್ಪನ ಆಸರೆಯಲ್ಲಿ, ಅಜ್ಜಿಯ ಅಕ್ಕರೆಯ ಪೋಷಣೆಯಲ್ಲಿ ದಿನ ನೂಕುತ್ತಿದ್ದಳು...


> ಕಾಲನ ಕರೆ ಬಂದಾಗ ಯಾರು ತಾನೇ ಈ ಭೂಮಿಯ ಮೇಲೆ ಉಳಿಯಲು ಸಾಧ್ಯ. ಈ ಲೋಕದ ಋಣ ಸುಂಕವ್ವನ ಪಾಲಿಗೆ ಇನ್ನಿಲ್ಲ ವಾಗಿತ್ತು. ಒಂದು ದಿನ ಅವಳು ಚಂದ್ರೀನ, ದೇವೀರನ್ನ, ಈ ಪ್ರಪಂಚಾನ ಬಿಟ್ಟು ಶಿವನ ಪಾದ ಸೇರಿದ್ಲು. ಬಳ್ಳಿಗೆ ಆಸರೆಯಂತಿದ್ದ ಮರಮೊಂದು ಬಿದ್ದ ಹಾಗಾಗಿತ್ತು. ಚಂದ್ರೀ ದಿಕ್ಕೇ ತೋಚದಂತಾದಳು. ಕಣ್ಣಿಗೆ ಕಣ್ಣಿನಂತಿದ್ದ ಸುಂಕವ್ವನ ಇಲ್ಲದಿರುವಿಕೆ ಚಂದ್ರಿಯ ಪಾಲಿಗೆ ಶೂನ್ಯವೊಂದನ್ನು ಸೃಷ್ಟಿಸಿತ್ತು. ಇನ್ನುಳಿದಿದ್ದು ದೇವೀರನ ಆಸರೆ. ಅಜ್ಜಿಯ ನೆನಪುಗಳೊಂದಿಗೆ ಅವಳ ಬದುಕು ಸಾಗಿತ್ತು.

ಕಾಲನ ಕರೆ ಬಂದಾಗ ಯಾರು ತಾನೇ ಈ ಭೂಮಿಯ ಮೇಲೆ ಉಳಿಯಲು ಸಾಧ್ಯ. ಈ ಲೋಕದ ಋಣ ಸುಂಕವ್ವನ ಪಾಲಿಗೆ ಇನ್ನಿಲ್ಲವಾಗಿತ್ತು. ಒಂದು ದಿನ ಅವಳು ಚಂದ್ರೀನ, ದೇವೀರನ್ನ, ಈ ಪ್ರಪಂಚಾನ ಬಿಟ್ಟು ಶಿವನ ಪಾದ ಸೇರಿದ್ಲು. ಬಳ್ಳಿಗೆ ಆಸರೆಯಂತಿದ್ದ ಮರವೊಂದು ಬಿದ್ದ ಹಾಗಾಗಿತ್ತು. ಚಂದ್ರೀ ದಿಕ್ಕೇ ತೋಚದಂತಾದಳು. ಕಣ್ಣಿಗೆ ಕಣ್ಣಿನಂತಿದ್ದ ಸುಂಕವ್ವನ ಇಲ್ಲದಿರುವಿಕೆ ಚಂದ್ರಿಯ ಪಾಲಿಗೆ ಶೂನ್ಯವೊಂ ದನ್ನು ಸೃಷ್ಟಿಸಿತ್ತು. ಇನ್ನುಳಿದಿದ್ದು ದೇವೀರನ ಆಸರೆ. ಅಜ್ಜಿಯ ನೆನಪುಗಳೊಂದಿಗೆ ಅವಳ ಬದುಕು ಸಾಗಿತ್ತು.

ಜೀವನದಲ್ಲಿ ಆಗುವ ತಿರುವುಗಳನ್ನು ಎಂತು ಹೇಳುವುದು. ಕಾಲಚಕ್ರದಲ್ಲಿ ಸಿಲುಕಿ ಸುತ್ತುವ ನಾವು ಒಮ್ಮೆಗೇ ಎದುರಾಗುವ ಆಘಾತಗಳನ್ನು, ನೋವುಗಳನ್ನು ಎದುರಿಸಲೇಬೇಕಲ್ಲವೆ? ಅಂತೆಯೇ ಚಂದ್ರಿಯ ಪಾಲಿಗೆ ಅವಳ ಅಪ್ಪ, ದೇವೀರನೂ 'ಅಷ್ಟಕ್ಕಷ್ಟೇ' ಎನ್ನುವಂತಾದ. ದಿನೇ ದಿನೇ ಅಕ್ಕಪಕ್ಕದ ಮನೆಯವರ ಕುಹಕ್ತಿಗಳು, ಎಲ್ಲಿ ಹೋದರೆ ಅಲ್ಲಿ ಅವಮಾನವಾಗುವ ಪ್ರಸಂಗಗಳು, ಇವುಗಳಿಂದ ನೊಂದ ಆತನಿಗೆ ಚಂದ್ರಿ ಒಂದು ರೀತಿಯಲ್ಲಿ ನೋವಿನ ಹೊರೆಯಾಗಿ ಕಂಡಳು. ಕಾಲ ಕ್ರಮೇಣ ಈ ನೋವಿನ ಬೇಗೆಯಿಂದ ಅವನಿಗೆ ಮಗಳ ಮೇಲಿನ ಮಮಕಾರ ದೂರವಾಗುತ್ತಾ ಹೋಯಿತು. ಇದನ್ನರಿತ ಚಂದ್ರಿ, ಒಂದು ದಿನ ತನ್ನ ಎಲ್ಲಾ ಕಷ್ಟಗಳಿಗೆ, ದುಃಖ-ದುಮ್ಮಾನಗಳಿಗೆ ಇತಿಶ್ರೀ ಹಾಡಬೇಕೆಂದು ತೀರ್ಮಾನಿಸಿದಳು. ದೇವೀರನಿಲ್ಲದಿದ್ದಾಗ, ಮನೆಯಿಂದ ಕಾಲ್ತೆಗೆದಳು. ದೂರ......ದೂರ...... ಬಹುದೂರ ಕಾಲು ನಡಿಗೆಯಲ್ಲಿ ಹೊರಟಳು. ಅವಳ ದಾರಿ ಅವಳಿಗೇ ಗೊತ್ತಿರಲಿಲ್ಲ. ದಾರಿ ಇರುವ ಕಡೆಗೆ ಅಡಿಯಿಡತೊಡಗಿದಳು......ಸಿಕ್ಕಿತು! ಕಡೆಗೊಂದು ಪ್ರಶಸ್ತವಾದ ಸ್ಥಳ. ಅದೇ.... ಅದೇ ದೊಡ್ಡಕೆರೆ. ಚಿಕ್ಕಂದಿನಲ್ಲಿ ಅಮ್ಮನೊಡನೆ ಯಾವಾಗಲೋ ಅಲ್ಲಿಗೆ ಬಂದಿದ್ದ ನೆನಪು. ಪಕ್ಕದಲ್ಲಿಯೇ ಇತ್ತೊಂದು ದೇವಸ್ಥಾನ. ಸಿಡಿಲ ಮಲ್ಲಿಕಾರ್ಜುನ...... 'ನನ್ನ ಬಾಳಿನಲ್ಲಿ ಬಂದೆರಗಿರುವ ಘೋರ ಸಿಡಿಲನ್ನ ಈ ಮಲ್ಲಿಕಾರ್ಜುನ ತಪ್ಪಿಸಿಯಾನೆ?' ಮನಸ್ಸಿನಲ್ಲಿಯೇ ಪ್ರಶ್ನಿಸಿಕೊಂಡಳು. ದೇವರೀಗ ಅವಳ ಪಾಲಿಗೆ ಬರೀ ಕಲ್ಲಾಗಿತ್ತು. ಒಮ್ಮೆ ತಾನು ಬಂದ ದಾರಿಯನ್ನು ಅವಲೋಕಿಸಿದಳು. ಬರೀ ಕಲ್ಲು,ಮುಳ್ಳು, ಸರಿ, 'ಈ ಲೋಕದ ನಂಟು ಇನ್ನು ನನಗೇಕೆ' ಎಂದು ತನ್ನ ಬದುಕಿಗೆ ವಿದಾಯ ಹೇಳಲು ಕೆರೆಯ ಏರಿ ಮೇಲೆ ನಿಂತಳು. ಇನ್ನೇನು ಧುಮುಕ ಬೇಕು, ಅಷ್ಟರಲ್ಲಿ 'ನಿಲ್ಲು ಮಗಳ.' ದನಿ ಯೊಂದು ಕೇಳಿಸಿತು. ಹಿಂದಿರುಗಿ ನೋಡುತ್ತಾಳೆ. ಯಾರೋ ವಯಸ್ಸಾದ ಮುದುಕಿ. ಅವಳನ್ನ ನೋಡುತ್ತಿ ದ್ದರೆ ತನ್ನ ಅಜ್ಜಿಯೇನೋ ಎಂದೆನಿಸಿತು ಚಂದ್ರಿಗೆ. ಆಕೆ ಚಂದ್ರೀ ಕೂಡ ಮಾತಾ ಡಿದ್ಲು. ಜೀವನದಲ್ಲಿ ಸೋತು ಸುಣ್ಣವಾ ಗಿದ್ದ ಚಂದ್ರಿಯ ಮನಸ್ಸನ್ನು ಬದಲಿಸೋ ವಿಶ್ವಾಸದ ಮಾತಾಡಿದ್ಲು. 'ಮಗಳ, ಸಾಯಾಕ್ ಬಂದೇನು, ಅದ್ಕೆ ನಿಂಗ ಇನ್ನೂ ಸಮಯ ಬಂದಿಲ್ಲೇಳು. ನೋಡ್ ಕೂಸೇ ಈ ಜಗತ್ತು ಎಷ್ಟು ವಿಶಾಲವಾಗೈತಿ, ನೀನು ನಿನಾಗಿ ಬ್ಯಾಡ, ನಿನ್ನಂತವರಿಗಾಗಿ ನೀನು ಬದುಕ್ಬೇಕ, ನಿನ್ನಂತ ನೊಂದೋರ್ಗೆ ಕಣ್ಣಾಗಬೇಕ; ಸತ್ತು ಏನ್ ಸಾಧಿಸ್ತೀಯೇ ತಾಯಿ, ಹೋಗು ನಿನ್ನ ಮುಂದಿನ ದಾರಿ ಚಲೋ ಇರ್ತದ, ಏನಾದ್ರು ಸಾಧನೆ ಮಾಡ, ನೊಂದಿರೋ ಹೆಣ್ಣುಮಕ್ಳ ಕಣ್ಣೀರು ಒರಸು.' ಅಂತಾ ಏನೇನೋ. ಚಂದ್ರಿ ತನ್ನ ಮನಸ್ಸು ಬದಲಿಸಿದಳು. ಬದುಕಿನಲ್ಲಿ ಅವಳಿಗೆ ಭರವಸೆಯ ಆಶಾಕಿರಣವೊಂದು ಮೂಡಿತ್ತು. 'ಇಲ್ಲ ನಾ ಸಾಯೋ ಆಕಿಯಲ್ಲ, ನಾ ಬದುಕ್ತೀನಿ, ಬದುಕಿ ಸಾಧಿಸ್ತೀನಿ' ಎಂಬ ಹುಮ್ಮಸ್ಸಿನಿಂದ ತನ್ನ ಬದಲಾದ ದಾರಿ ಹಿಡಿದಳು. ಆ ಮುದುಕಿಯ ಮಾತೇ ಅವಳ ಪಾಲಿಗೆ ದಾರಿದೀಪವಾಯಿತು. ಆ ಸಂದರ್ಭದಲ್ಲಿ ಅವಳ ನೆರವಿಗೆ ಬಂದದ್ದು ಕರ್ನಾಟಕ ರಾಜ್ಯ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಅಭಿವೃದ್ಧಿ ಇಲಾಖೆ. ಇದರ ನಿರ್ದೇಶಕಿಯಾದ ಕಮಲಮ್ಮನವರು 'ಕರುಣಾಳು ಬಾ ಬೆಳಕೆ 'ಎನ್ನುವಂತೆ ಚಂದ್ರಿಯ ಅಂಧಕಾರದ ಬದುಕಿಗೆ ಬೆಳಕಾಗಿ ಬಂದರು. ಅಕಸ್ಮಾತ್ ಚಂದ್ರಿಯ ಪರಿಚಯ ಮಾಡಿಕೊಂಡ ಅವರು ಅವಳನ್ನು ಕರೆದುಕೊಂಡು ಬಂದು, ಸರ್ಕಾರದ ನೆರವಿನೊಂದಿಗೆ, ಗೃಹೋಪಯೋಗಿ ವಸ್ತುಗಳ ತಯಾರಿಕೆಯಲ್ಲಿ ತರಬೇತಿ ವಿಭಾಗಕ್ಕೆ ಸೇರಿಸಿದರು. ಅಲ್ಲಿ ಮೂರು ವರ್ಷ ತರಬೇತಿ ಪಡೆದ ಚಂದ್ರಿ, ಮುಂದೆ ತಾನೇ ಸ್ವತಃ 'ಚಂದ್ರಿಕಾ ಗೃಹೋಪಯೋಗಿ ವಸ್ತುಗಳ ಮಾರಾಟ ಮಳಿಗೆ 'ಯನ್ನು ಪ್ರಾರಂಭಿಸಿದಳು. ಆ ಮಳಿಗೆಯೇ ಮುಂದೆ ಚೆನ್ನಾಗಿ ಅಭಿವೃದ್ಧಿ ಹೊಂದಿ ನೂರಾರು ಕಾರ್ಮಿಕರಿಗೆ ಅನ್ನ ನೀಡುವ 'ಚಂದ್ರಿಕಾ ಹೋಂ ವರ್ಲ್ಡ್' ಆಯಿತು. ಚಂದ್ರಿ ಚಂದ್ರಿಕಾ ಆಗಿ ದೊಡ್ಡ ಹೆಸರು, ಕೀರ್ತಿ, ಐಶ್ವರ್ಯ ಎಲ್ಲವನ್ನೂ ಸಂಪಾದಿಸಿದಳು. ಅಲ್ಲಿಯವರೆಗೂ ಚಂದ್ರಿಯ ಬಗ್ಗೆ ಗಮನವನ್ನೇ ಹರಿಸದಿದ್ದ, ಅವಳ ಗಂಡ ಸೋಮಯಾಜಿ, ಅವಳನ್ನು ಅರಸುತ್ತಾ, ಅವಳ ಮನೆಗೆ ಬಂದ. 'ನಾನು ತಪ್ಪುಮಾಡಿದೆ, ನಿನ್ನನ್ನು ಸರಿಯಾಗಿ ಅರ್ಥ ಮಾಡಿಕೊಳ್ಳಲಿಲ್ಲ, ದಯಮಾಡಿ ಕ್ಷಮಿಸು,' ಎಂದು ಪರಿ ಪರಿಯಾಗಿ ವಿನಂತಿಸಿಕೊಂಡ. ಆದರೆ.... ಆದರೆ ಚಂದ್ರಿ ಅವನ ಅಂದಿನ ದಿಢೀರ್ ಬದಲಾವಣೆಯ ಹಿಂದಿನ ಗುಟ್ಟನ್ನು ಅರಿತಿದ್ದಳು. ಅವಳು ಅವನಿಗೆ ಹೇಳೀದ್ದು ಒಂದೇ ಮಾತು. 'ನೀನ್ಯಾಕೋ ನಿನ್ನ ಹಂಗ್ಯಾಕೋ.... ಇನ್ನು ನಿನ್ನ ದಾರಿ ನಿನಗೆ, ನನ್ನ ದಾರಿ ನನಗೆ, ನನಗೀಗ ನಿನ್ನ ಜೊತೆಯಲ್ಲಿರಲು ಮನಸ್ಸಿಲ್ಲ, ನನಗಾಗಿ ನೂರಾರು ನೊಂದ ಹೃದಯಗಳು ಕಾಯುತ್ತಿವೆ. ಅವುಗಳಿಗೆ ಸಾಂತ್ವನ ಹೇಳಿ, ಅವರಿಗೆ ದಾರಿದೀಪವಾಗಿ ಬೆಳಗೋದೇ ನನ್ನ ನನ್ನ ಜೀವನದ ಗುರಿ'.

ಹೌದು, ಚಂದ್ರಿ ನಿಜವಾಗಲೂ ಈ ಕಾಲದ ಮಾದರಿ ಹೆಣ್ಣು, ನೊಂದ ಯಾವುದೇ ಹೆಣ್ಣು ಮಗಳು ಜೀವನದಿಂದ ವಿಮುಖರಾಗದೆ ಚಂದ್ರಿಯಂತೆ ಸಾಧಿಸಿ, ತಮ್ಮಂತವರ ಬದುಕಿಗೆ ಕಣ್ಣಾಗಬೇಕು ಎಂಬುದೇ ನಮ್ಮ ಆಶಯ.

> ಚಂದ್ರಿ ಬದುಕಿನಲ್ಲಿ ಭರವಸೆಯ ಆಶಾಕಿರಣವೊಂದು ಮೂಡಿತ್ತು. 'ಇಲ್ಲ ನಾ ಸಾಯೋ ಆಕಿಯಲ್ಲ, ನಾ ಬದುಕ್ತೀನಿ, ಬದುಕಿ ಸಾಧಿಸ್ತೀನಿ' ಎಂಬ ಹುಮ್ಮಸ್ಸಿನಿಂದ ತನ್ನ ಬದಲಾದ ದಾರಿ ಹಿಡಿದಳು. ಆ ಮುದುಕಿಯ ಮಾತೇ ಅವಳ ಪಾಲಿಗೆ ದಾರಿದೀಪವಾಯಿತು. ಆ ಸಂದರ್ಭದಲ್ಲಿ ಅವಳ ನೆರವಿಗೆ ಬಂದದ್ದು ಕರ್ನಾಟಕ ರಾಜ್ಯ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಅಭಿವೃದ್ಧಿ ಇಲಾಖೆ. ಇದರ ನಿರ್ದೇಶಕಿಯಾದ ಕಮಲಮ್ಮನವರು 'ಕರುಣಾಳು ಬಾ ಬೆಳಕೆ 'ಎನ್ನುವಂತೆ ಚಂದ್ರಿಯ ಅಂಧಕಾರದ ಬದುಕಿಗೆ ಬೆಳಕಾಗಿ ಬಂದರು. ಆಕಸ್ಮಾತ್ ಚಂದ್ರಿಯ ಪರಿಚಯ ಮಾಡಿಕೊಂಡ ಅವರು ಅವಳನ್ನು ಕರೆದುಕೊಂಡು ಬಂದು, ಸರ್ಕಾರದ ನೆರವಿನೊಂದಿಗೆ, ಗೃಹೋಪಯೋಗಿ ವಸ್ತುಗಳ ತಯಾರಿಕೆಯಲ್ಲಿ ತರಬೇತಿ ವಿಭಾಗಕ್ಕೆ ಸೇರಿಸಿದರು. ಅಲ್ಲಿ ಮೂರು ವರ್ಷ ತರಬೇತಿ ಪಡೆದ ಚಂದ್ರಿ, ಮುಂದೆ ತಾನೇ ಸ್ವತಃ 'ಚಂದ್ರಿಕಾ ಗೃಹೋಪಯೋಗಿ ವಸ್ತುಗಳ ಮಾರಾಟ ಮಳಿಗೆ 'ಯನ್ನು ಪ್ರಾರಂಭಿಸಿದಳು. ಆ ಮಳಿಗೆಯೇ ಮುಂದೆ ಚೆನ್ನಾಗಿ ಅಭಿವೃದ್ಧಿ ಹೊಂದಿ ನೂರಾರು ಕಾರ್ಮಿಕರಿಗೆ ಅನ್ನ ನೀಡುವ 'ಚಂದ್ರಿಕಾ ಹೋಂ ವರ್ಲ್ಡ್' ಆಯಿತು. ಚಂದ್ರಿ ಚಂದ್ರಿಕಾ ಆಗಿ ದೊಡ್ಡ ಹೆಸರು, ಕೀರ್ತಿ, ಐಶ್ವರ್ಯ ಎಲ್ಲವನ್ನೂ ಸಂಪಾದಿಸಿದಳು.



ವಾರಭವಿಷ್ಯ

21.4.2024 ರಿಂದ 27.4.2024

ಈ ವಾರದಲ್ಲಿ ಗ್ರಹಗಳ ರಾಶಿ ಸಂಚಾರ:-ರವಿ-ಮೇಷ, ಚಂದ್ರ-ಕನ್ಯಾ, ತುಲಾ, ವೃಶ್ಚಿಕ, ಕುಜ-ಕುಂಭ, ಮೀನ, ಬುಧ-ಮೀನ, ಗುರು-ಮೇಷ, ಶುಕ್ರ-ಮೀನ, ಶನಿ-ಕುಂಭ, ರಾಹು-ಮೀನ ಮತ್ತು ಕೇತು-ಕನ್ಯಾ

ವಿ.ಕೇಶವಮೂರ್ತಿ
ಜ್ಯೋತಿಷ್ಯ ವಿದ್ವಾಂಸರು, 'ಭಾವಸಾರ ರತ್ನ'
'ಚೈತನ್ಯಶ್ರೀ ಪ್ರಶಸ್ತಿ ಪುರಸ್ಕೃತರು'
ಕಲ್ಪದ್ರುಮ ಜ್ಯೋತಿಷ್ಯ ಅಧ್ಯಯನ ಕೇಂದ್ರ
ವಿಳಾಸ: 533, 6ನೇ ಕ್ರಾಸ್, ಬೋಗಾದಿ ಉತ್ತರ, ೯ ಹಂತ, ಮೈಸೂರು ನಿರ್ಮಿತಿ ಕೇಂದ್ರ ಹತ್ತಿರ, ಮೈಸೂರು.
ಮೊ.9740973224, 9739548720



ಮೇಷ (ಚು.ಚೆ.ಲ.ಲಿ.ಲು.ಲೆ.ಲೋ.ಅ)

ನಡೆಯಬೇಕಿದ್ದ ಕಾರ್ಯ ಕಲಾಪಗಳು ಅಲ್ಲಲ್ಲೇ ನಿಂತು ಮನಸ್ಸಿಗೆ ಬೇಸರ. ಆದಾಯ-ವ್ಯಯಗಳನ್ನು ಸರಿದೂಗಿಸಲು ಪರದಾಡುವಿರಿ. ಸ್ಥಿರಾಸ್ತಿ ಮಾರಾಟ ವಿಷಯಗಳು ನಿಮಗೆ ಅನುಕೂಲಕರವಾಗಿ ಇಲ್ಲ. ಸರ್ಕಾರಿ ನೌಕರರು ಕಾನೂನುಬಾಹಿರ ಕೃತ್ಯವೆಸಗಿ ತೊಂದರೆಗೆ ಗುರಿಯಾಗುವರು. ವಾರದ ಕಡೆಗೆ ಸತ್ಕರ್ಮಾಚರಣೆಯಿಂದ ಧನ್ಯತೆಯ ಭಾವ. ಧರ್ಮಕ್ಷೇತ್ರ ಸಂದರ್ಶನದಿಂದ ಮನಃಶಾಂತಿ.

ಶ್ರೀ ಗಣೇಶ ಸ್ತುತಿ. ಶುಭ ಸಂಖ್ಯೆ-1.

ವೃಷಭ (ಇ.ಉ.ಎ.ಒ.ವ.ವಿ.ವು.ವೆ.ವೊ)

ವಾರದಾರಂಭಕ್ಕೆ ವಿನಾಕಾರಣ ವಾದ-ವಿವಾದಗಳಿಂದ ನಷ್ಟವೇ ಹೆಚ್ಚು. ಮನೆ ಮಂದಿಯೊಂದಿಗೆ ಮನಸ್ತಾಪವಾಗುವುದನ್ನು ತಡೆದರೆ ಒಳ್ಳೆಯದು. ಕೈಗೆ ಬಂದ ಹಣಕ್ಕೆ ನೂರಾರು ಖರ್ಚುಗಳು. ಸರ್ಕಾರಿ ಅಧಿಕಾರಿಗಳು ಇಲ್ಲ-ಸಲ್ಲದ ಕೆಲಸ ಮಾಡಿ ಸಂಕಷ್ಟಕ್ಕೆ ಗುರಿಯಾಗುವರು. ವಾರದ ಕಡೆಗೆ ನಿಮ್ಮ ರಾಶ್ಯಾಧಿಪತಿ ಶುಕ್ರ ಬಲದಿಂದ ಮನಸ್ಸಿಗೆ ಮುದ ನೀಡುವ ಪ್ರಸಂಗಗಳು ನಡೆಯುವುದು.

ಶ್ರೀ ಕುಲದೇವತಾ ದರ್ಶನ. ಶುಭ ಸಂಖ್ಯೆ-2.

ಮಿಥುನ (ಕ.ಕಿ.ಕು.ಘ.ಙ.ಛ.ಕೆ.ಕೊ.ಹ)

ವಾರದಾರಂಭಕ್ಕೆ ಮಿತ್ರ ವೃಂದದವರಿಂದ ಪ್ರಶಂಸೆಗೆ ಪಾತ್ರರಾಗುವಿರಿ. ಸರ್ಕಾರಿ ನೌಕರರಿಗೆ ಜವಾಬ್ದಾರಿಗಳು ಹೆಚ್ಚುವುದು. ಪ್ರಯಾಣಗಳು ಲಾಭಪ್ರದವೆನಿಸಿದರೂ ದೇಹಕ್ಕೆ ದಣಿವು ತಪ್ಪಿದ್ದಲ್ಲ. ದೇಹದಲ್ಲೂ ಮನಸ್ಸಿನಲ್ಲೂ ಜಢತೆ ಕಾಣಿಸುತ್ತದೆ. ವಾಮ ಮಾರ್ಗದ ಹಣಕ್ಕೆ ಆಸೆ ಪಟ್ಟರೆ ಅದು ಅಪಮಾರ್ಗದಲ್ಲಿ ವ್ಯಯವಾಗುವುದು. ಏಜೆನ್ಸಿ ವ್ಯಾಪಾರಿಗಳಿಗೆ ಉತ್ತಮ ಆದಾಯವಿದೆ.

ಶ್ರೀ ಶ್ರೀನಿವಾಸ-ಪದ್ಮಾವತಿ ದರ್ಶನ. ಶುಭ ಸಂಖ್ಯೆ-8.

ಕಟಕ (ಹೊ.ಹು.ಹೆ.ಹೊ.ಡ.ಡಿ.ಡು)

ಅಷ್ಟಮ ಶನಿಕಾಟ, ಗುರುಬಲವೂ ಕ್ಷೀಣ, ಬಂದದ್ದೆಲ್ಲಾ ಬರಲಿ ಗೋವಿಂದನ ದಯೆ ಇರಲಿ ಎಂಬ ಭಾವನೆಯಿಂದ ಮುಂದೆ ಸಾಗಿ. ಗಹನ ಕಾರ್ಯಗಳು ಕೈಗೂಡಬೇಕಾದರೆ ಉನ್ನತಾಧಿಕಾರಿಗಳು ಹಾಗೂ ಮಠಾಧಿಪತಿಗಳ ಸಂಪರ್ಕದಿಂದ ಸಾಕಾರವಾಗುವುದು. ನ್ಯಾಯಾಲಯದ ಕೆಲಸಗಳು ನಿಮ್ಮ ಅನುಕೂಲಕ್ಕೆ ನಡೆಯದು. ಅನ್ಯ ಜನರ ದೂಷಣೆಗೆ ಗುರಿಯಾಗುವಿರಿ. ಸಹನೆ, ತಾಳ್ಮೆಯೊಂದೇ ನಿಮ್ಮ ಆಯ್ಕೆ.

ಶ್ರೀ ದೇವೀಚರಣದಲ್ಲಿ ಭಕ್ತಿಯನ್ನಿಡಿ. ಶುಭ ಸಂಖ್ಯೆ-4.

ಸಿಂಹ (ಮ.ಮಿ.ಮು.ಮೊ.ಮೆ.ಟ.ಟಿ.ಟು.ಟೆ)

ನಿಮ್ಮ ವೈಯಕ್ತಿಕ ಪ್ರಭಾವದಿಂದ ಕೆಲಸ ಕಾರ್ಯಗಳು ಮುಂದುವರೆಯುವುದು. ಬಿಲ್ಡಿಂಗ್ ಕಂಟ್ರಾಕ್ಟರುಗಳಿಗೆ ಹೊಸ ಯೋಜನೆಗಳು ದೊರಕುತ್ತದೆ. ವಿದ್ಯಾರ್ಥಿಗಳಿಗೆ ಉತ್ತಮ ಫಲಿತಾಂಶ ಬಂದು ಪ್ರಶಂಸೆಗೆ ಗುರಿಯಾಗುವರು. ವಿವಾಹಯೋಗ್ಯರಿಗೆ ಸೂಕ್ತ ವಧು-ವರರು ದೊರಕುವ ಸಾಧ್ಯತೆ ಇದೆ. ದೀರ್ಘ ಪ್ರವಾಸಗಳನ್ನು ತೀವ್ರ ಬಿಸಿಲಿನ ಕಾರಣ ಮುಂದೂಡಿ. ಸಂಧಿವಾತ, ಮಂಡಿನೋವು ತೀವ್ರವಾಗಬಹುದು.

ಶ್ರೀ ಸೂರ್ಯಾಷ್ಟಕ ಪಠಿಸಿ. ಶುಭ ಸಂಖ್ಯೆ-6

ಕನ್ಯಾ (ಟೊ.ಪ.ಪಿ.ಪು.ಘ.ಣ.ಠ.ಪೆ.ಪೊ)

ವಾರದಾರಂಭಕ್ಕೆ ನಿಮ್ಮ ರಾಶಿಗೆ ಬರುವ ಚಂದ್ರ ಮಾನಸಿಕವಾಗಿ ಉತ್ಸಾಹವನ್ನೂ, ಆತುರ ಬುದ್ಧಿಯನ್ನೂ ನೀಡಲಿದ್ದಾನೆ. ಈ ವಾರದಲ್ಲಿ ಧನಾದಾಯ ಮತ್ತು ಖರ್ಚುಗಳು ಸಮಸಮವಾಗಿ ನಡೆಯುವುದು. ಬಂಧು ಬಾಂಧವರೊಡಗೂಡಿ ಸಂತೋಷವಾಗಿರುವಿರಿ. ಸ್ನೇಹಿತ ವಲಯದಲ್ಲಿ ಮೌನದಿಂದಿದ್ದರೆ ಕಲಹಗಳು ಉಂಟಾಗದು. ಸಾಲ ಕೊಟ್ಟು ನಿಷ್ಠೂರ ಕಟ್ಟಿಕೊಳ್ಳದಿರಿ. ವಾರಾಂತ್ಯಕ್ಕೆ ಜ್ಯೋತಿಷಿಗಳ ಭೇಟಿ.

ಶ್ರೀ ವಿಷ್ಣು ಆರಾಧನೆ. ಶುಭ ಸಂಖ್ಯೆ-5.

ತುಲಾ (ರ.ರಿ.ರು.ರೆ.ರೊ.ತ.ತಿ.ತು.ತೆ)

ನಿಮ್ಮ ಶ್ರೇಷ್ಠ ಸಂಕಲ್ಪಗಳು ಸಾಕಾರವಾಗುವ ಸಮಯ ಬಂದಿದೆ. ಬಹಳ ಸಮಯದ ನಂತರ ಸಂತಾನದ ನಿರೀಕ್ಷೆಯಲ್ಲಿದ್ದವರಿಗೆ ಸಿಹಿ ಸುದ್ದಿ ಬಂದೀತು. ಬಂಧು-ಮಿತ್ರರೊಂದಿಗೆ ಸಂತೋಷದಲ್ಲಿ ಸಮಯ ಕಳೆಯುವುದು. ವೃತ್ತಿ ಸಂಬಂಧ ಕೆಲಸಗಳಲ್ಲಿ ಉಂಟಾಗಿದ್ದ ವಿಘ್ನಗಳು ನಿವಾರಣೆ ಆಗುವುದು. ಸರ್ಕಾರಿ ನೌಕರರಿಗೆ ತನಿಖಾ ಸಂಸ್ಥೆಗಳಿಂದ ತೊಂದರೆ ಉಂಟಾದೀತು.

ಶ್ರೀ ತ್ರಿಪುರ ಸುಂದರೀ ಉಪಾಸನೆ. ಶುಭ ಸಂಖ್ಯೆ-9

ವೃಶ್ಚಿಕ (ತೊ.ನ.ನಿ.ನು.ನೆ.ನೊ.ಯು.ಯಿ.ಯ

ವಾರದಾರಂಭಕ್ಕೆ ಮನೆಯಲ್ಲಿ ಸಂತೋಷದ ವಾತಾವರಣ. ನಿರೀಕ್ಷೆಯಂತೆ ಧನಾಗಮ ಆಗುವುದರಿಂದ ಮುಂಗಡ ಸಾಲವನ್ನು ಮಾಡಬೇಕಾದ ಅಗತ್ಯವಿರದು. ಯಾವುದೇ ಕೆಲಸವನ್ನು ಪ್ರಾಮಾಣಿಕವಾಗಿ ಮಾಡುವುದರಿಂದ ಶುಭ ಫಲವನ್ನು ಹೊಂದುವಿರಿ. ಸಹೋದರ ಹಾಗೂ ದಾಯಾದಿಗಳಿಂದ ದಿಕ್ಕು ತಪ್ಪಿಸುವ ಕೆಲಸ ನಡೆದೀತು. ಅನಗತ್ಯ ವಾಹನ ಸಂಚಾರಗಳನ್ನು ಅವಾಯ್ಡ್ ಮಾಡಿ.

ಶ್ರೀ ನೃಸಿಂಹ ಸ್ತುತಿ. ಶುಭ ಸಂಖ್ಯೆ-5.

ಧನುಸ್ಸು (ಯೆ.ಯೊ.ಬ.ಬಿ.ಬು.ಧ.ಭ.ಢ.ಬೆ)

ಮುಂಬರುವ ದಿನಗಳಲ್ಲಿ ಜೀವನದಲ್ಲಿ ಉಂಟಾಗುವ ಬದಲಾವಣೆಗಳಿಗೆ ಸಿದ್ಧರಾಗಿರಿ. ಹಣಕಾಸು ಸಂಸ್ಥೆಗಳಿಂದ ಹಣಕಾಸು ನೆರವು ದೊರೆಯುವುದು. ಇತರರನ್ನು ನಂಬಿ ಯೋಜನೆಗಳನ್ನು ರೂಪಿಸಬೇಡಿ. ಅಪನಾ ಹಾತ್ ಜಗನ್ನಾಥ್ ಸ್ವಂತದಲ್ಲಿ ವಿಶ್ವಾಸ ಇಡಿ. ಉನ್ನತ ಶಿಕ್ಷಣಾಕಾಂಕ್ಷಿಗಳಿಗೆ ಉತ್ತಮ ಸಂಸ್ಥೆಯಲ್ಲಿ ಸ್ಥಾನ ದೊರೆಯುವುದು. ಅಜೀರ್ಣ ಸಂಬಂಧಿ ಕಾಯಿಲೆ ಕಾಡಬಹುದು.

ಶ್ರೀ ಶಿರಡಿ ಬಾಬಾ ಉಪಾಸನೆ. ಶುಭ ಸಂಖ್ಯೆ-3.

ಮಕರ (ಬೊ.ಜ.ಜಿ.ಶಿ.ಶು.ಶೆ.ಶೊ.ಗ.ಗಿ.)

ಕೈಗೊಂಡ ಕೆಲಸ ಕಾರ್ಯಗಳು ನಿಧಾನವಾಗಿಯಾದರೂ ಮನಸ್ಸಿನಂತೆ ಫಲಿಸಿ ಸಂತೋಷ. ಮನೆಯಲ್ಲಿನ ಮನಸ್ತಾಪಗಳನ್ನು ಮನೆಯಲ್ಲೇ ಬಗೆಹರಿಸಿಕೊಳ್ಳಿ. ವಾರ ಮಧ್ಯೆ ಧನಾದಾಯ ಚೆನ್ನಾಗಿದೆ. ಆದರೆ ಅದಕ್ಕೆ ತಕ್ಕಂತೆ ಖರ್ಚುಗಳೂ ಎದುರಾಗುತ್ತವೆ. ಗುರುಹಿರಿಯರ ಬುದ್ಧಿ ಮಾತನ್ನು ಗೌರವಿಸುವುದರಿಂದ ಒಳಿತಾಗುವುದು. ಮನೆ ಕೆಲಸದವರಿಂದ ಮೋಸ ಹೋಗುವ ಸಾಧ್ಯತೆ ಇರುತ್ತದೆ. ಜಾಗರೂಕರಾಗಿರಿ.

ಶ್ರೀ ಸುದರ್ಶನ ಚಕ್ರ ಮಂತ್ರ ಜಪಿಸಿ. ಶುಭ ಸಂಖ್ಯೆ-7

ಕುಂಭ (ಗು.ಗೆ.ಗೊ.ಸ.ಸಿ.ಸು.ಸೆ.ಸೊ.ದ)

ಸಪ್ತಾಹದ ಆದಿಗೆ ಅನಿರೀಕ್ಷಿತ ಖರ್ಚುಗಳು ಎದುರಾಗುವುದು. ಮನೆಯಲ್ಲಿ ಹಿರಿಯರೊಬ್ಬರ ಆರೋಗ್ಯದಲ್ಲಿ ಏರು-ಪೇರುಗಳು ಉಂಟಾಗಬಹುದು. ಎಣ್ಣೆ ಕಾಳು ಧಾನ್ಯ ವ್ಯಾಪಾರದಲ್ಲಿ ಹೆಚ್ಚಿನ ಲಾಭ ದೊರೆಯುವುದು. ಪಶು-ದನ ವ್ಯಾಪಾರದಿಂದಲೂ ಧನಲಾಭ ಉಂಟಾಗುವುದು. ವಾರಾಂತ್ಯಕ್ಕೆ ಬಂಧು-ಮಿತ್ರರ ಸಹಾಯದಿಂದ ಗೃಹದಲ್ಲಿ ಹರುಷದ ವಾತಾವರಣ. ಅನ್ಯರಿಂದ ಪ್ರೇರಿತರಾಗಿ ನ್ಯಾಯಮಾರ್ಗ ಬಿಡಬೇಡಿ.

ಶ್ರೀ ವೆಂಕಟೇಶನಿಗೆ ತುಳಸಿ ಮಾಲೆ ಸಮರ್ಪಣೆ. ಶುಭ ಸಂಖ್ಯೆ-5

ಮೀನ (ದಿ.ದು.ಖ.ಝ.ಥ.ತೆ.ದೊ.ಚ.ಚಿ)

ನಿಮ್ಮ ರಾಶಿಯಲ್ಲಿ ಉಂಟಾಗಿರುವ ಚತುರ್ಗ್ರಹ ಯೋಗ ಮಾನಸಿಕ ದ್ವಂದ್ವಕ್ಕೂ ನಿಮ್ಮ ಹಿತಕ್ಕೆ ವಿರುದ್ಧ ವಾದ ಸಂಗತಿಗಳು ಜರುಗಲು ಕಾರಣವಾಗುತ್ತದೆ. ದುಡುಕು ನಿರ್ಧಾರಗಳಿಂದ ಆರ್ಥಿಕ ನಷ್ಟವನ್ನು ಅನುಭವಿಸುವಿರಿ. ಯತ್ರ ನಾರ್ಯಸ್ತು ಪೂಜ್ಯಂತೇ ತತ್ರ ರಮಂತೇ ದೇವತಾಃ ಎಂಬಂತೆ ಅನ್ಯ ಸ್ತ್ರೀಯರಲ್ಲಿ ಗೌರವದ ನಡೆ ಇರಲಿ. ಆ ಕಾರಣ ಸಂಚಾರಗಳನ್ನು ತ್ಯಜಿಸಿ.

ಶ್ರೀ ರಾಘವೇಂದ್ರ ಅರ್ಚನೆ. ಶುಭ ಸಂಖ್ಯೆ-8.

ಮೋದಿಯನ್ನು ಪ್ರಧಾನಿ ಮಾಡುವ ಜವಾಬ್ದಾರಿ ನಮ್ಮ ಮೇಲಿದೆ

ಚಾಮರಾಜನಗರ ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಬಾಲರಾಜ್

ಹೆಚ್.ಡಿ.ಕೋಟೆ, ಏ.20– ದೇಶವನ್ನು ಪಾಕಿಸ್ತಾನ, ಚೀನಾ ಸೇರಿದಂತೆ ವಿವಿಧ ದೇಶಗಳ ಆಕ್ರಮಣಗಳಿಂದ ತಪ್ಪಿಸಲು ಪ್ರಧಾನಿ ಮೋದಿ ಅವಿತರವಾಗಿ ಶ್ರಮಿಸಿದ್ದಾರೆ. ಹೀಗಾಗಿ ಮೋದಿ ಅವರನ್ನು ಮತ್ತೊಮ್ಮೆ ಪ್ರಧಾನಿ ಮಾಡುವ ಜವಾಬ್ದಾರಿ ನಮ್ಮೆಲ್ಲರ ಮೇಲಿದೆ ಎಂದು ಚಾಮರಾಜನಗರ ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಬಾಲರಾಜ್ ತಿಳಿಸಿದರು.

ತಾಲೂಕಿನ ಹ್ಯಾಂಡ್‌ಪೋಸ್ಟ್‌ನಲ್ಲಿರುವ ಮಂಜುನಾಥ ಕಲ್ಯಾಣ ಮಂಟಪದಲ್ಲಿ ನಡೆದ ಕಾರ್ಯಕರ್ತರ ಸಭೆಯಲ್ಲಿ ಮತಯಾಚಿಸಿ ಮಾತನಾಡಿದ ಅವರು, ಕಾಂಗ್ರೆಸ್‌ನವರು ಬಾಲರಾಜು ದುಡ್ಡು ಪಡೆದಿದ್ದಾರೆ ಎಂದು ಅಪಪ್ರಚಾರ ಮಾಡುತ್ತಿದ್ದಾರೆ. ಆದರೆ ಆ ರೀತಿ ನಾವು ಹಣಕ್ಕಾಗಿ ಕೈ ಚಾಚುವುದಿಲ್ಲ. ನಾನು ಪ್ರಾಮಾಣಿಕವಾಗಿ ಜನಸೇವೆ ಮಾಡಿಕೊಂಡು ಬಂದಿದ್ದೇನೆ. ಮುಂದೆಯೂ ಕೆಲಸ ಮಾಡಲು ಈ ಚುನಾವಣೆಯಲ್ಲಿ ಅಧಿಕ ಮತಗಳಿಂದ ಗೆಲ್ಲಿಸಿಕೊಡಿ ಎಂದು ಮನವಿ ಮಾಡಿದರು.



ಹೆಚ್.ಡಿ.ಕೋಟೆ ತಾಲೂಕಿನ ಹ್ಯಾಂಡ್‌ಪೋಸ್ಟ್‌ನ ಮಂಜುನಾಥ ಕಲ್ಯಾಣ ಮಂಟಪದಲ್ಲಿ ನಡೆದ ಕಾರ್ಯಕರ್ತರ ಸಭೆಯಲ್ಲಿ ಚಾಮರಾಜನಗರ ಕ್ಷೇತ್ರದ ಮೈತ್ರಿ ಅಭ್ಯರ್ಥಿ ಬಾಲರಾಜ್ ಮಾತನಾಡಿದರು.

ಬಾಲರಾಜು ಗೆದ್ದರೆ ಸಂವಿಧಾನ ಬದಲಿಸುತ್ತಾರೆ ಎಂದು ಕಿಡಿಗೇಡಿಗಳು ನನ್ನ ಹೆಸರಲ್ಲಿ ಅಪಪ್ರಚಾರ ಮಾಡಿದ್ದಾರೆ. ಆದರೆ ಯಾರೇ ಬಂದರೂ ಸಂವಿಧಾನ ಬದಲಿಸಲು ಸಾಧ್ಯವಿಲ್ಲ. ಬದಲಿಸಲು ಒತ್ತಾಯಿಸಿದರೂ ಸಹ ನಾವು ಬಿಡುವುದಿಲ್ಲ. ಒಬ್ಬ ಸಾಮಾನ್ಯ ವ್ಯಕ್ತಿ ಪ್ರಧಾನಿಯಾಗುತ್ತಾರೆ ಎಂದರೆ ಅದಕ್ಕೆ ಅಂಬೇಡ್ಕರ್ ಅವರ ಸಂವಿಧಾನವೇ ಕಾರಣ ಎಂದರು.

ಬಿಜೆಪಿ ಎಸ್‌ಟಿ ಮೋರ್ಚಾ ರಾಜ್ಯ ಪ್ರಧಾನ ಕಾರ್ಯದರ್ಶಿ ಕೆ.ಎಂ.ಕೃಷ್ಣನಾಯಕ ಮಾತನಾಡಿ, ದೇಶದ ಮುಂದಿನ ಪ್ರಧಾನಿ ಮೋದಿ ಅವರಂತೆಯೇ ನಮ್ಮ ಚಾಮರಾಜನಗರ ಲೋಕಸಭಾ ಕ್ಷೇತ್ರದ ಎನ್‌ಡಿಎ ಅಭ್ಯರ್ಥಿ ಬಾಲರಾಜು ಸರಳ ಸಜ್ಜನಿಕೆಯ ವ್ಯಕ್ತಿಯಾಗಿದ್ದಾರೆ. ಅವರನ್ನು ಗೆಲ್ಲಿಸುವ ಭಾರ ನಮ್ಮ ಮೇಲಿದೆ ಎಂದರು.

ರಾಜ್ಯ ಸರ್ಕಾರ ಗ್ಯಾರಂಟಿಗಳ ರೂಪದಲ್ಲಿ ನೀಡಿ, ದಿನಬಳಕೆ ವಸ್ತುಗಳ ಬೆಲೆ ಏರಿಸುವ ಮೂಲಕ ಮತದಾರನಿಗೆ ಅರಿವಿಲ್ಲದಂತೆ ಬರೆ ಎಳೆಯುತ್ತಿದೆ ಎಂದು ಆರೋಪಿಸಿದರು.

ಜೆಡಿಎಸ್, ಬಿಜೆಪಿ ಕಾರ್ಯಕರ್ತರು ಒಟ್ಟಾಗಿ ಕ್ಷೇತ್ರದ ಅಭ್ಯರ್ಥಿ ಬಾಲರಾಜ್ ಅವರನ್ನು ಗೆಲ್ಲಿಸಬೇಕು. ರಾಜ್ಯ ಸರ್ಕಾರ ಲೋಕಸಭಾ ಚುನಾವಣೆ ಬಳಿಕ ಗ್ಯಾರಂಟಿಗಳನ್ನು ನಿಲ್ಲಿಸಲಿದೆ. ಸರ್ಕಾರ ಚುನಾವಣೆ ಮುಗಿಯುವುದನ್ನೇ ಕಾಯುತ್ತಿದೆ ಎಂದರು.

ರಾಜಕೀಯ ಸನ್ಯಾಸತ್ವ ಸ್ವೀಕರಿಸಿದ್ದ ಬಾಲರಾಜು ಅವರನ್ನು ಮತ್ತೆ ಬಿಜೆಪಿ ರಾಜಕೀಯಕ್ಕೆ ಕರೆ ತಂದಿದೆ. ಅವರ ಸನ್ಯಾಸತ್ವ ತೊಡೆದು ಹಾಕಲು ಈ ಬಾರಿ ಅವರನ್ನು ಭಾರಿ ಅಂತರದಲ್ಲಿ ಗೆಲ್ಲಿಸಬೇಕಿದೆ ಎಂದು ಮನವಿ ಮಾಡಿದರು.

ಇದೇ ವೇಳೆ ಹಲವು ಮುಖಂಡರು ಕಾಂಗ್ರೆಸ್ ತೊರೆದು ಬಿಜೆಪಿಗೆ ಸೇರ್ಪಡೆಗೊಂಡರು. ಸಭೆಯಲ್ಲಿ ಸರಗೂರು, ಬಿಜೆಪಿ ಅಧ್ಯಕ್ಷರಾದ ಶಂಭುಗೌಡ, ಗುರುಸ್ವಾಮಿ, ಜೆಡಿಎಸ್ ಅಧ್ಯಕ್ಷರಾದ ರಾಜೇಂದ್ರ ಗೋಪಾಲಸ್ವಾಮಿ, ಮುಖಂಡರಾದ ರಮೇಶ್ ಕುಮಾರ್, ವೆಂಕಟಸ್ವಾಮಿ, ಜಯಪ್ರಕಾಶ್ ಚಿಕ್ಕಣ್ಣ, ಎಂ.ಕೆ.ಗಣೇಶ್, ಜೆ.ಪಿ.ಚಂದ್ರಶೇಖರ್, ಹಂಚಿಪುರ ಗುರುಸ್ವಾಮಿ, ಬಸವರಾಜಪ್ಪ, ದೊಡ್ಡನಾಯಕ, ಸಿ.ಕೆಗಿರೀಶ್, ನರಸಿಂಹೇಗೌಡ, ಡಿ.ಸುರೇಂದ್ರ ಗೌಡ ಯತೀಶ್ ರಾಜ್, ಬಿಡಗಲು ರಾಜು, ಎಂ.ಡಿ.ಮಂಚಯ್ಯ, ಅಕ್ರಂ ಪಾಷ, ಶಾಂತ, ರಂಗೇಗೌಡ, ಬಡಗಲಪುರ ವೆಂಕಟೇಶ್, ಶ್ಯಾಮ್ ಸುಂದರ್, ಮೆಸ್ ಮಂಜು, ಕಾಶಿಪತಿ, ನಾಗೇಗೌಡ, ಸಿರಿ, ಅನು, ನಾಗನಾಯಕ ಓಕೆ ಮಹೇಂದ್ರ ದಿನೇಶ್, ಸೋಮೇಶ್, ಯೋಗೇಶ್, ಶ್ರೀಧರಮೂರ್ತಿ ಇನ್ನಿತರರಿದ್ದರು.

ಯದುವೀರ್ ಗೆಲುವು ನಿಶ್ಚಿತ: ಹರೀಶ್‌ಗೌಡ



ಹುಣಸೂರು, ಏ.20– ಚುನಾವಣೆಯಲ್ಲಿ ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಮೈತ್ರಿ ಅಭ್ಯರ್ಥಿ ಯದುವೀರ್ ಗೆಲುವು ನಿಶ್ಚಿತ ಎಂದು ಶಾಸಕ ಜಿ.ಡಿ.ಹರೀಶ್‌ಗೌಡ ವಿಶ್ವಾಸ ವ್ಯಕ್ತಪಡಿಸಿದರು.

ತಾಲೂಕಿನ ಹನಗೋಡು ಜಿಪಂ ವ್ಯಾಪ್ತಿಯ ಕಾರ್ಯಕರ್ತರ ಸಭೆಯಲ್ಲಿ ಮಾತನಾಡಿದ ಅವರು, ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದ ಬಳಿಕ ಅಭಿವೃದ್ಧಿ ಕಾರ್ಯಗಳಿಗೆ ಆದ್ಯತೆ ನೀಡದೆ ನಿರ್ಲಕ್ಷಿಸಿದೆ ಎಂದ ಅವರು, ಕೇಂದ್ರ ಬಿಜೆಪಿ ಸರ್ಕಾರ ನೀಡಿದ ಎಲ್ಲಾ ಭರವಸೆಗಳನ್ನು ಈಡೇರಿಸಿದೆ. ಯದುವೀರ್ ಅವರು ರಾಜವಂಶಸ್ಥರಾದರೂ ಸಾಮಾನ್ಯ ಪ್ರಜೆಗಳ ಹಾಗೆ ಎಲ್ಲರಿಗೂ ಬಹಳ ಹತ್ತಿರದಿಂದ ಸಿಗುವ ವ್ಯಕ್ತಿಯಾಗಿದ್ದು, ಅವರನ್ನು ಹೆಚ್ಚು ಮತಗಳ ಅಂತರದಲ್ಲಿ ಗೆಲ್ಲಿಸುವಂತೆ ಮನವಿ ಮಾಡಿದರು.

ಈ ವೇಳೆ ಜಿಪಂ ಮಾಜಿ ಸದಸ್ಯ ಕಟ್ಟನಾಯಕ, ಜೆಡಿಎಸ್ ಮುಖಂಡ ಶ್ರೀಧರ್, ಎಪಿಎಂಸಿ ಮಾಜಿ ಅಧ್ಯಕ್ಷ ಸುಭಾಷ್, ಬಸವರಾಜ್, ಹೆಚ್.ಆರ್.ರಮೇಶ್ ಮಂಜುನಾಥ್, ಸತೀಶ್, ಪಾಪಣ್ಣ, ತಮ್ಮೇಗೌಡ, ಹನಗೋಡು ಗ್ರಾಪಂ ಅಧ್ಯಕ್ಷ ಚೆನ್ನಯ್ಯ, ಕಿರಂಗೂರು ಗ್ರಾಪಂ ಅಧ್ಯಕ್ಷ ಮಧು, ಚಿಲ್ಕುಂದ ಗ್ರಾಪಂ ಅಧ್ಯಕ್ಷ ಸತೀಶ್, ಟಿಎಪಿಸಿಎಂಎಸ್ ಮಾಜಿ ಅಧ್ಯಕ್ಷ ರಾಜೇಗೌಡ ಮತ್ತಿತರರಿದ್ದರು.

ಅಧಿಕ ಮತಗಳ ಅಂತರದಲ್ಲಿ ಗೆಲ್ಲಿಸಿ: ಲಕ್ಷ್ಮಣ ಮನವಿ

ಬೈಲಕುಪ್ಪೆ, ಏ.20– ಹಲವು ವರ್ಷಗಳಿಂದ ಪಕ್ಷ ಸಂಘಟಿಸಿದ್ದೇನೆ. ಹೀಗಾಗಿ ಕಾಂಗ್ರೆಸ್ ಹೈಕಮಾಂಡ್ ನನ್ನ ಸೇವೆ ಗುರುತಿಸಿ ಮೈಸೂರು–ಕೊಡಗು ಕ್ಷೇತ್ರದ ಟಿಕೆಟ್ ನೀಡಿದ್ದು, ಚುನಾವಣೆಯಲ್ಲಿ ನನ್ನನ್ನು ಅಧಿಕ ಮತಗಳ ಅಂತರದಲ್ಲಿ ಗೆಲ್ಲಿಸಬೇಕು ಎಂದು ಕಾಂಗ್ರೆಸ್ ಅಭ್ಯರ್ಥಿ ಲಕ್ಷ್ಮಣ ಮನವಿ ಮಾಡಿದರು.



ಪಿರಿಯಾಪಟ್ಟಣ ತಾಲೂಕಿನ ನವಿಲೂರು ಗ್ರಾಮದಲ್ಲಿ ನಡೆದ ಸಭೆಯಲ್ಲಿ ಮತಯಾಚಿಸಿ ಮಾತನಾಡಿದ ಅವರು, ಬಿಜೆಪಿ ಸರ್ಕಾರ ಬಡವರಿಗಾಗಿ ಯಾವುದೇ ಯೋಜನೆ ಜಾರಿಗೊಳಿಸಿಲ್ಲ. ಬದಲಿಗೆ ಸುಳ್ಳು ಭರವಸೆ ನೀಡಿ ಜನರ ದಾರಿ ತಪ್ಪಿಸುವ ಕೆಲಸ ಮಾಡುತ್ತಿದೆ. ಹೀಗಾಗಿ ಈ ಬಾರಿ ಚುನಾವಣೆಯಲ್ಲಿ ನನ್ನನ್ನು ಹೆಚ್ಚು ಮತಗಳಿಂದ ಗೆಲ್ಲಿಸಿ. ನಾನು ಕ್ಷೇತ್ರದ ಅಭಿವೃದ್ಧಿಗೆ ಶ್ರಮಿಸುತ್ತೇನೆ ಎಂದರು.

ಸಚಿವ ಕೆ.ವೆಂಕಟೇಶ್ ಮಾತನಾಡಿ, ರಾಜ್ಯ ಸರ್ಕಾರ ಚುನಾವಣಾ ಪೂರ್ವ ನೀಡಿದ್ದ ಭರವಸೆಯಂತೆ ಐದು ಗ್ಯಾರಂಟಿಗಳನ್ನು ಜಾರಿಗೊಳಿಸಿ ಕೊಟ್ಟ ಮಾತನ್ನು ಉಳಿಸಿಕೊಂಡಿದೆ. ಆ ಮೂಲಕ ಎಲ್ಲಾ ವರ್ಗದ ಜನರಿಗೆ ನೆರವಾಗಿದೆ. ಅಲ್ಲದೇ ರಾಜ್ಯದ ಅಭಿವೃದ್ಧಿಗೆ ಮತ್ತಷ್ಟು ಕಾರ್ಯಕ್ರಮಗಳನ್ನು ಹಾಕಿಕೊಂಡಿರುವುದರಿಂದ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಲಕ್ಷ್ಮಣ ಅವರನ್ನು ಗೆಲ್ಲಿಸಬೇಕು ಎಂದು ಮನವಿ ಮಾಡಿದರು.

ಇದೇ ವೇಳೆ ಆಲನಹಳ್ಳಿ ಅಂಬೇಡ್ಕರ್ ಕಾಲೋನಿಯ 20ಕ್ಕೂ ಹೆಚ್ಚು ಮುಖಂಡರು ಜೆಡಿಎಸ್ ತೊರೆದು ಕಾಂಗ್ರೆಸ್ ಸೇರ್ಪಡೆಗೊಂಡರು. ಈ ಸಂದರ್ಭ ಆಶ್ರಯ ಕಮಿಟಿ ಅಧ್ಯಕ್ಷ ನಿತಿನ್, ಬೆಟ್ಟದಪುರ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ರೆಹಮತ್ ಜಾನ್ ಬಾಬು, ತಾಲೂಕು ಅಧ್ಯಕ್ಷ ಡಿ.ಟಿ.ಸ್ವಾಮಿ, ಖಜಾಂಚಿ ಬಸವರಾಜ್, ವಿ.ಜಿ.ಕೊಪ್ಪಲು ಲೋಕೇಶ್, ನವಿಲೂರು ಗ್ರಾಪಂ ಅಧ್ಯಕ್ಷೆ ಸರೋಜಾ, ಸದಸ್ಯ ಮಾದೇವ್, ಬಸವರಾಜ್, ಮುಖಂಡರಾದ ನಿಂಗರಾಜೇಗೌಡ, ಸ್ವಾಮಿಗೌಡ, ಗುತ್ತಿಗೆದಾರ ಚೆನ್ನಪ್ಪ, ಬಸವರಾಜ್, ಸ್ವಾಮಿ, ಈರಣ್ಣ, ಹರೀಶ್, ಚಂದ್ರಶೇಖರ್, ನಾಗರಾಜಯ್ಯ, ದೊಡ್ಡಯ್ಯ, ಸೋಮಶೇಖರ್, ರಮೇಶ, ಸ್ವಾಮಿ ಮತ್ತಿತರರಿದ್ದರು.

ಅಂಬೇಡ್ಕರ್ ಭವನಕ್ಕೆ ಜಾಗ ನೀಡಲು ನಿರ್ಲಕ್ಷ್ಯ ಖಂಡಿಸಿ

ಚುನಾವಣೆ ಬಹಿಷ್ಕರಿಸಲು ತುರುಗನೂರು ಗ್ರಾಮಸ್ಥರ ನಿರ್ಧಾರ

ತಿ.ನರಸೀಪುರ, ಏ.20– ಡಾ.ಬಿ.ಆರ್.ಅಂಬೇಡ್ಕರ್ ಸಮುದಾಯ ಭವನ ಹಾಗೂ ಪುತ್ಥಳಿ ನಿರ್ಮಾಣಕ್ಕೆ ಜಾಗ ಮಂಜೂರು ಮಾಡಲು ತಾಲೂಕು ಆಡಳಿತದ ನಿರ್ಲಕ್ಷ್ಯ ಖಂಡಿಸಿ ತುರುಗನೂರು ಗ್ರಾಮದ ದಲಿತ ಸಮುದಾಯದವರು ಚುನಾವಣೆ ಬಹಿಷ್ಕರಿಸಲು ನಿರ್ಧರಿಸಿದ್ದಾರೆ.

ಪಟ್ಟಣದ ಎಪಿಎಂಸಿ ಆವರಣದಲ್ಲಿ ತಾಲೂಕಿನ ತುರುಗನೂರು ಗ್ರಾಮದ ನೂರಾರು ದಲಿತರು ಸಭೆ ಸೇರಿ ಇದೇ 26ರಂದು ನಡೆಯುವ ಚುನಾವಣೆ ಬಹಿಷ್ಕರಿಸುವ ಕುರಿತು ನಿರ್ಧಾರ ಕೈಗೊಂಡರು.

ಸಭೆಯಲ್ಲಿ ಮಾತನಾಡಿದ ಡಾ.ಬಿ.ಆರ್. ಅಂಬೇಡ್ಕರ್ ಸಂಘದ ಯುವ ಮುಖಂಡ ಟಿ.ಎಸ್.ಮಹೇಂದ್ರ, ಗ್ರಾಮದಲ್ಲಿ ಅಂಬೇಡ್ಕರ್ ಭವನ, ಪುತ್ಥಳಿ ನಿರ್ಮಾಣಕ್ಕೆ ಸ್ಥಳ ನೀಡುವಂತೆ ಗ್ರಾಪಂಗೆ ಮನವಿ ಸಲ್ಲಿಸಿದ್ದ ಹಿನ್ನೆಲೆಯಲ್ಲಿ ಸರ್ವೇ ನಂ.72/4 ಸಿ ಯಲ್ಲಿ ಖರಾಬು ಜಮೀನಿನ 6 ಗುಂಟೆ ಜಾಗವನ್ನು ಅಂಬೇಡ್ಕರ್ ಭವನ ನಿರ್ಮಿಸಲು ಸರ್ವ ಸದಸ್ಯರು ನಿರ್ಣಯ ಮಾಡಿ ಅದರ ಪ್ರತಿ ನೀಡಿದ್ದಾರೆ. ಅದರಂತೆ ಗ್ರಾಪಂ ನೀಡಿದ ಜಮೀನು ಸೂಕ್ತವೆಂದು ಪರಿಗಣಿಸಿ ತಹಸೀಲ್ದಾರ್ ಕಚೇರಿಯಿಂದ ಸರ್ವೇ ಮಾಡಿ ನಕ್ಷೆ ತಯಾರಿಸಿದ್ದಾಗ್ಯೂ ಸಂಘದ ಹೆಸರಿಗೆ ಖಾತೆ ಮಾಡಿಕೊಡದೆ ಹಾಗೂ ಆರ್‌ಟಿಸಿ ಆಗಿಲ್ಲ ಎಂದು ದೂರಿದರು.

2014–15ರಲ್ಲಿ ಕಂದಾಯ ಸಚಿವರಾಗಿದ್ದ ಮಹದೇವಪ್ಪನವರು ನಮ್ಮ ಮನವಿಗೆ ಸ್ಪಂದಿಸಿ ಅಂಬೇಡ್ಕರ್ ಭವನ ನಿರ್ಮಾಣಕ್ಕೆ 12 ಲಕ್ಷ ಮಂಜೂರು ಮಾಡಿರುವುದಾಗಿ ತಿಳಿಸಿದ್ದರೂ, ನಂತರ ಜಾಗವೇ ನಿಗದಿಯಾಗಿಲ್ಲವೆಂಬ ಕಾರಣಕ್ಕೆ ಹಣ ಬೇರೆ ಊರಿನ ಕಾಮಗಾರಿಗೆ ವರ್ಗಾವಣೆ ಮಾಡಲಾಗಿತ್ತು. ಈ ಸಂಬಂಧ ಜಾಗ ಮಂಜೂರು ಮಾಡಿಕೊಡುವಂತೆ ತಹಸೀಲ್ದಾರ್‌ಗೆ ಮನವಿ ಸಲ್ಲಿಸಲಾಗಿ ಜನಸ್ಪಂದನಾ ಸಭೆಯಲ್ಲಿ ಸಚಿವ ಮಹದೇವಪ್ಪನವರು ಸಮಾಜಕಲ್ಯಾಣ ಇಲಾಖೆ ಅಧಿಕಾರಿಗಳಿಗೆ ಸಮಸ್ಯೆ ಬಗೆಹರಿಸುವಂತೆ ನಿರ್ದೇಶನ ನೀಡಿದ ಹಿನ್ನೆಲೆಯಲ್ಲಿ ಸ್ಥಳ ಪರಿಶೀಲಿಸಿದ ತಾಲೂಕು ಸಮಾಜ ಕಲ್ಯಾಣಾಧಿಕಾರಿ ಭೀಮರಾವ್ ಉದ್ದೇಶಿತ ಜಾಗ ಅಂಬೇಡ್ಕರ್ ಭವನ ನಿರ್ಮಾಣಕ್ಕೆ ಸೂಕ್ತ ಜಾಗವೆಂದು ತಹಸೀಲ್ದಾರ್‌ಗೆ ವರದಿ ಸಲ್ಲಿಸಿರುತ್ತಾರೆ. ಗ್ರಾಮ ಲೆಕ್ಕಾಧಿಕಾರಿ ಹಾಗೂ ಬನ್ನೂರಿನ ಉಪ ತಹಸೀಲ್ದಾರ್ ಸಹ ಸೂಕ್ತ ಜಾಗವೆಂದು ವರದಿ ನೀಡಿದರೂ ತಹಸೀಲ್ದಾರ್ ಜಮೀನು ಮಂಜೂರು ಮಾಡಲು ಮೀನಾಮೇಷ ಎಣಿಸುತ್ತಿದ್ದಾರೆ ಎಂದು ಆರೋಪಿಸಿದರು.

ಈ ಸಂಬಂಧ ಕರ್ನಾಟಕ ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಬುಡಕಟ್ಟುಗಳ ಆಯೋಗಕ್ಕೂ ದೂರು ನೀಡಿದ್ದು, ಅಲ್ಲಿಂದಲೂ ತಹಸೀಲ್ದಾರ್‌ಗೆ ನೋಟೀಸ್ ಜಾರಿ ಮಾಡಿರುತ್ತಾರೆ. ಇಷ್ಟೆಲ್ಲಾ ಪುರಾವೆಗಳನ್ನು ನೀಡಿದರೂ ನಮಗೆ ನ್ಯಾಯ ಸಿಗುತ್ತಿಲ್ಲ. ತಾಲೂಕು ಆಡಳಿತದ ನಡವಳಿಕೆಯಿಂದ ಬೇಸತ್ತಿರುವ ನಾವು ಲೋಕಸಭೆ ಚುನಾವಣೆ ಬಹಿಷ್ಕರಿಸುವ ನಿರ್ಧಾರ ತೆಗೆದುಕೊಂಡಿದ್ದೇವೆ. ಹಾಗಾಗಿ ಸಂಬಂಧಪಟ್ಟ ಅಧಿಕಾರಿಗಳು, ಜನಪ್ರತಿನಿಧಿಗಳು ತಕ್ಷಣ ಕಾರ್ಯಪ್ರವೃತ್ತರಾಗಿ ಅಂಬೇಡ್ಕರ್ ಭವನ ಹಾಗೂ ಪುತ್ಥಳಿ ನಿರ್ಮಾಣಕ್ಕೆ 6 ಗುಂಟೆ ಖರಾಬು ಜಮೀನನ್ನು ಅಂಬೇಡ್ಕರ್ ಯುವಕರ ಸಂಘಕ್ಕೆ ಮಂಜೂರು ಮಾಡಿಕೊಡಬೇಕೆಂದು ಒತ್ತಾಯಿಸಿದರು.

ಈ ವೇಳೆ ತುರುಗನೂರು ಡಾ.ಬಿ.ಆರ್. ಅಂಬೇಡ್ಕರ್ ಯುವಕರ ಸಂಘದ ಅಧ್ಯಕ್ಷ ಟಿ.ಎಸ್.ಆನಂದ್, ಉಪಾಧ್ಯಕ್ಷ ಟಿ.ಎಸ್.ಮಹೇಶ್, ಯಜಮಾನರಾದ ಗುಲ್ಲಯ್ಯ, ಸುರೇಶ್, ಗುರುಸ್ವಾಮಿ ಸೇರಿದಂತೆ ನೂರಾರು ಮಂದಿ ಗ್ರಾಮಸ್ಥರು ಹಾಜರಿದ್ದರು.

ವಿಕಲಚೇತನ ಬಾಲಕನ ಪಾರ್ಥಿವ ಶರೀರದ ಅಂತ್ಯಕ್ರಿಯೆಗೆ ಮೈಸೂರು ಜಿಲ್ಲಾಡಳಿತ ಸಾಥ್

ನಂಜನಗೂಡು, ಏ.20– ಬಹಿಷ್ಕಾರಕ್ಕೆ ಒಳಗಾಗಿದ್ದ ಕುಟುಂಬದಲ್ಲಿ ಸಾವಿಗೀಡಾದ ವಿಕಲಚೇತನ ಬಾಲಕನ ಅಂತ್ಯಸಂಸ್ಕಾರಕ್ಕೆ ಸ್ಥಳೀಯರು ಬಾರದ ಹಿನ್ನೆಲೆಯಲ್ಲಿ ಮೃತದೇಹವನ್ನು ಜಿಲ್ಲಾಧಿಕಾರಿ ಕಚೇರಿಗೆ ಕೊಂಡೊಯ್ದಿದ್ದು ಬಳಿಕ ಕಂದಾಯ ಇಲಾಖೆ ಅಧಿಕಾರಿಗಳ ಮಧ್ಯಪ್ರವೇಶದೊಂದಿಗೆ ಅಂತ್ಯಸಂಸ್ಕಾರ ನಡೆಸಿರುವ ಘಟನೆ ತಾಲೂಕಿನ ತರಗನಹಳ್ಳಿಯಲ್ಲಿ ನಡೆದಿದೆ.



ವಿವರ: ತಾಲೂಕಿನ ತರಗನಹಳ್ಳಿ ಗ್ರಾಮದ ನಿವಾಸಿ ಕುಳ್ಳನಾಯಕ ಅವರ ಪುತ್ರ ಮಾದೇಶ(15) ಮೃತ ವಿಕಲಚೇತನ ಬಾಲಕ ಶುಕ್ರವಾರ ಮಧ್ಯರಾತ್ರಿ ಅನಾರೋಗ್ಯದಿಂದ ಮನೆಯಲ್ಲೇ ಸಾವನ್ನಪ್ಪಿದ್ದ. ಈತನ ಅಂತ್ಯಸಂಸ್ಕಾರಕ್ಕೆ ಸ್ಥಳೀಯರು ನೆರವಿಗೆ ಬಾರದ ಹಿನ್ನೆಲೆಯಲ್ಲಿ ತಂದೆ ಕುಳ್ಳನಾಯಕ ಮಗನ ಶವವನ್ನು ಸ್ಕೂಟರ್‌ನಲ್ಲಿಯೇ ಮೈಸೂರಿಗೆ ಕೊಂಡೊಯ್ದಿದ್ದಾನೆ ಎನ್ನಲಾಗಿದೆ.

ಈ ಕುರಿತು ಸುದ್ದಿಗಾರರೊಂದಿಗೆ ಮಾತನಾಡಿದ ಕುಳ್ಳನಾಯಕ, ವೃತ್ತಿಯಲ್ಲಿ ತರಕಾರಿ ವ್ಯಾಪಾರ ಮಾಡುತ್ತಿರುವ ನಾನು ಹಾಗೂ ನನ್ನ ಕುಟುಂಬದವರನ್ನು ನಮ್ಮ ಊರಿನ ನಮ್ಮದೇ ಸಮುದಾಯದ ವರ್ಗಗಳ ಹಿಂದಿನಿಂದಲೂ ಬಹಿಷ್ಕಾರಕ್ಕೆ ಒಳಪಡಿಸಿದ್ದಾರೆ. ಈ ಬಗ್ಗೆ ಪೋಲೀಸರಿಗೆ ದೂರು ನೀಡಿದ್ದರೂ ಸಮಸ್ಯೆ ಬಗೆಹರಿದಿರಲಿಲ್ಲ. ಶುಕ್ರವಾರ ರಾತ್ರಿ ನನ್ನ ಮಗ ಅನಾರೋಗ್ಯದಿಂದ ನಿಧನನಾಗಿದ್ದರಿಂದ ಕುಟುಂಬದವರು ಮೃತ ಬಾಲಕನ ಅಂತ್ಯಸಂಸ್ಕಾರಕ್ಕೆ ನೆರವು ನೀಡುವಂತೆ ಗ್ರಾಮಸ್ಥರನ್ನು ಶನಿವಾರ ಬೆಳಗ್ಗೆ ಕೇಳಿಕೊಂಡಿದ್ದೆವಾದರೂ ಬಹಿಷ್ಕಾರ ವಿಧಿಸಿರುವುದರಿಂದ ನೆರವು ನೀಡಲು ಸಾಧ್ಯವಿಲ್ಲ ಎಂದು ಸ್ಥಳೀಯರು ತಿಳಿಸಿದ್ದರಿಂದ ಅನಿವಾರ್ಯವಾಗಿ ಮೈಸೂರಿಗೆ ಮಗನ ಮೃತದೇಹವನ್ನು ಸ್ಕೂಟರಿನಲ್ಲಿಯೇ ಕೊಂಡೊಯ್ದಿದ್ದೆ. ಈ ಬಗ್ಗೆ ಮಾಹಿತಿ ಪಡೆದು ಎಡಿಸಿಯವರು ಮೊದಲು ವ್ಯವಸ್ಥಿತವಾದ ಅಂತ್ಯಸಂಸ್ಕಾರ ನಡೆಸುವಂತೆ ಸೂಚನೆ ನೀಡಿ ಅಲ್ಲಿಂದಲೇ ಪೊಲೀಸರು ಹಾಗೂ ಕಂದಾಯ ಇಲಾಖೆ ಅಧಿಕಾರಿಗಳಿಗೆ ಸೂಚನೆ ನೀಡಿದರು. ಬಳಿಕ ವಾಪಸ್ ಊರಿಗೆ ಮರಳಿದೆ ಎಂದು ಮಾಹಿತಿ ನೀಡಿದರು.

ಇನ್ನು ಈ ಬಗ್ಗೆ ಹಿರಿಯ ಅಧಿಕಾರಿಗಳ ಸೂಚನೆ ಮೇರೆಗೆ ಗ್ರಾಮಕ್ಕೆ ಧಾವಿಸಿದ ಕಂದಾಯ ಇಲಾಖೆ ರಾಜಸ್ವ ನಿರೀಕ್ಷಕ ಪ್ರಕಾಶ್ ನೇತೃತ್ವದ ಸಿಬ್ಬಂದಿ ಅಂತ್ಯ ಸಂಸ್ಕಾರಕ್ಕೆ ಅಗತ್ಯ ಸಿದ್ಧತೆ ಮಾಡುವ ಜೊತೆಗೆ ಗ್ರಾಮಸ್ಥರ ಮನವೊಲಿಸಿ ಅಂತ್ಯಸಂಸ್ಕಾರದಲ್ಲಿ ಭಾಗಿಯಾಗುವಂತೆ ನೋಡಿಕೊಂಡಿದ್ದಾರೆ.

ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಹಾಳು, ಅರಾಜಕತೆ ಸೃಷ್ಟಿ ಹಿನ್ನೆಲೆ

ಸಿಎಂ ರಾಜ್ಯದ ಜನರ ಜೀವಕ್ಕೆ ಗ್ಯಾರಂಟಿ ನೀಡಬೇಕಿದೆ

ಮಾಜಿ ಶಾಸಕ ಬಿ.ಹರ್ಷವರ್ಧನ್ ವಾಗ್ದಾಳಿ

ನಂಜನಗೂಡು, ಏ.20– ಕಾಂಗ್ರೆಸ್ ಸರ್ಕಾರ ಓಟಿಗಾಗಿ ಒಂದು ಸಮುದಾಯವನ್ನು ಅತಿಯಾಗಿ ಓಲೈಕೆ ಮಾಡುತ್ತಿರುವುದರಿಂದ ರಾಜ್ಯದಲ್ಲಿ ಕಾನೂನು–ಸುವ್ಯವಸ್ಥೆ ಹಾಳಾಗಿದ್ದು, ಅರಾಜಕತೆ ಸೃಷ್ಟಿಯಾಗಿದೆ. ಹೀಗಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ರಾಜ್ಯದ ಜನರ ಜೀವಕ್ಕೆ ಗ್ಯಾರಂಟಿ ನೀಡಬೇಕಾಗಿದೆ ಎಂದು ಮಾಜಿ ಶಾಸಕ ಬಿ.ಹರ್ಷವರ್ಧನ್ ವಾಗ್ದಾಳಿ ನಡೆಸಿದರು.



ತಾಲೂಕಿನ ಕಳಲೆ ಗ್ರಾಮದಲ್ಲಿ ಶನಿವಾರ ಕಳಲೆ ಮಹಾಶಕ್ತಿ ಕೇಂದ್ರ ವ್ಯಾಪ್ತಿಯ ಕಾರ್ಯಕರ್ತರ ಸಭೆ ಉದ್ಘಾಟಿಸಿ ಮಾತನಾಡಿದ ಅವರು, ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ಸರ್ಕಾರದಲ್ಲಿ ಸಾಮಾನ್ಯ ಜನರಿಗೆ ರಕ್ಷಣೆ ಇಲ್ಲದಂತಾಗಿದೆ. ಹುಬ್ಬಳ್ಳಿಯ ನಗರಸಭೆ ಸದಸ್ಯರ ಪುತ್ರಿ ನೇಹಾ ಹಿರೇಮಠ ಅವರನ್ನು ಕಿಡಿಗೇಡಿಯೊಬ್ಬ ಹಾಡಹಗಲೇ ಚಾಕುವಿನಿಂದ ಇರಿದು ಕೊಂದಿದ್ದಾನೆ. ಹಿಂದೂಗಳ ಮೇಲೆ ಪದೇ ಪದೇ ದಾಳಿ ನಡೆಯುತ್ತಿರುವುದರಿಂದ ರಾಜ್ಯದ ಜನರಲ್ಲಿ ಅನುಮಾನ ಮೂಡಿಸುತ್ತಿವೆ. ಮಗಳನ್ನು ಕಳೆದುಕೊಂಡವರನ್ನು ಸಂತೈಸಬೇಕಾದ ಮುಖ್ಯಮಂತ್ರಿ, ಉಪಮುಖ್ಯಮಂತ್ರಿಗಳು ಘಟನೆ ತಿರುಚಿ ದುಃಖದಲ್ಲಿರುವ ಕುಟುಂಬವನ್ನು ಘಾಸಿಗೊಳಿಸಿದ್ದಾರೆ. ಮತದಾರರು ಲೋಕಸಭಾ ಚುನಾವಣೆಯಲ್ಲಿ ಕಾಂಗ್ರೆಸ್‌ಗೆ ಸರಿಯಾದ ಪಾಠ ಕಲಿಸಬೇಕು ಎಂದರು.

ಕಳೆದ 10 ತಿಂಗಳ ಕಾಂಗ್ರೆಸ್ ಆಡಳಿತದಲ್ಲಿ ರಾಜ್ಯದಲ್ಲಿ ಅಭಿವೃದ್ಧಿ ಶೂನ್ಯವಾಗಿದೆ. ಗ್ಯಾರಂಟಿ ಯೋಜನೆಗಳಿಗೆ ಹಣ ಹೊಂದಿಸಲು ಸರ್ಕಾರ ವಿದ್ಯುತ್, ಆಸ್ತಿ ನೋಂದಾವಣೆ ಶುಲ್ಕ ಹಾಗೂ ಮದ್ಯದ ಬೆಲೆ ಏರಿಸಿದೆ. ಗೃಹಿಣಿಗೆ 2 ಸಾವಿರ ರೂ. ಕೊಟ್ಟು ಒಂದು ಕುಟುಂಬದಿಂದ ಸರಾಸರಿ 4 ಸಾವಿರ ವಸೂಲಿ ಮಾಡುತ್ತಿದೆ. ಚುನಾವಣೆ ನಂತರ ಮುಖ್ಯಮಂತ್ರಿ ಖುರ್ಚಿ ಮೇಲೆ ಡಿ.ಕೆ.ಶಿವಕುಮಾರ್ ಟವೆಲ್ ಹಾಕುವ ವರಿದ್ದು, ಅಧಿಕಾರಕ್ಕಾಗಿ ಗುಂಪುಗಾರಿಕೆ ಹೆಚ್ಚಾಗುತ್ತದೆ. 7 ವರ್ಷದ ಹಿಂದೆ ಶ್ರೀನಿವಾಸ ಪ್ರಸಾದ್ ಅವರನ್ನು ಸಚಿವ ಸಂಪುಟದಿಂದ ಕಿತ್ತೊಗೆದವರು ಚುನಾವಣಾ ಸಂದರ್ಭದಲ್ಲಿ ಆರೋಗ್ಯ ವಿಚಾರಿಸುವ ನೆಪದಲ್ಲಿ ಪ್ರಸಾದ್ ಮನೆಗೆ ಎಡತಾಕುತ್ತಿದ್ದಾರೆ. ಪ್ರಧಾನಿ ಮೋದಿ ಭಾಗವಹಿಸಿದ್ದ ಮೈಸೂರಿನ ಸಭೆಗೆ ಶ್ರೀನಿವಾಸ ಪ್ರಸಾದ್ ಅನಾರೋಗ್ಯದ ಕಾರಣದಿಂದ ಪಾಲ್ಗೊಳ್ಳಲು ಸಾಧ್ಯವಾಗಲಿಲ್ಲ. ಈಗ ಶ್ರೀನಿವಾಸ ಪ್ರಸಾದ್ ಆಸ್ಪತ್ರೆಗೆ ದಾಖಲಾಗಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಕಾಂಗ್ರೆಸ್‌ನವರು ಪ್ರಸಾದ್ ಬೆಂಬಲ ಪಡೆದಿರುವುದಾಗಿ ಅಪಪ್ರಚಾರ ಮಾಡುವುದನ್ನು ನಿಲ್ಲಿಸಬೇಕು. ಕಳೆದ 10 ವರ್ಷಗಳಲ್ಲಿ ಮೋದಿಯವರು ಉತ್ತಮ ಆಡಳಿತ ನೀಡಿದ್ದು, ಹತ್ತು ಹಲವು ಜನೋಪಯೋಗಿ ಯೋಜನೆಗಳನ್ನು ಜಾರಿಗೆ ತಂದಿದ್ದಾರೆ. ದೇಶದ ಅಭಿವೃದ್ಧಿಗಾಗಿ ಶ್ರಮಿಸುತ್ತಿರುವ ಬಿಜೆಪಿ ಅಭ್ಯರ್ಥಿ ಸರಳ ಸಜ್ಜನ ವ್ಯಕ್ತಿತ್ವದ ಬಾಲರಾಜ್ ಅವರಿಗೆ ಹೆಚ್ಚಿನ ಮತ ನೀಡಿ ಜಯಶೀಲರನ್ನಾಗಿ ಮಾಡುವ ಮೂಲಕ ಕೇಂದ್ರದ ಮೋದಿ ಸರ್ಕಾರಕ್ಕೆ ಬೆಂಬಲ ನೀಡಬೇಕು ಎಂದು ಮನವಿ ಮಾಡಿದರು.

ಕಾರ್ಯಕ್ರಮದಲ್ಲಿ ತಾಲೂಕು ಬಿಜೆಪಿ ಅಧ್ಯಕ್ಷ ಕೆಂಡಗಣ್ಣಪ್ಪ, ಚುನಾವಣಾ ಉಸ್ತುವಾರಿಗಳಾದ ಎಚ್.ಸಿ.ಅಶೋಕ್, ಸಿ.ಚಿಕ್ಕರಂಗನಾಯಕ, ಮುಖಂಡರಾದ ಹೊರಳವಾಡಿ ಮಹೇಶ್, ಹೆಮ್ಮರಗಾಲ ಸೋಮಣ್ಣ, ವಿನಯ್‌ಕುಮಾರ್, ಹೆಮ್ಮರಗಾಲ ಶಿವಣ್ಣ, ಶಿವಣ್ಣ, ರಾಜಣ್ಣ, ವಳಗೆರೆ ಪುಟ್ಟಸ್ವಾಮಿ, ಸಿದ್ದರಾಜು, ಮಹೇಶ್, ಮಲ್ಲಿಕಾರ್ಜುನ, ಮಣಿಕಂಠ, ವಿಷ್ಣುವರ್ಧನ್ ಉಪಸ್ಥಿತರಿದ್ದರು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ ಚಿತ್ರಮಂದಿರ	(ದೂ: 2521923)
ಮಗಧೀರ (ತೆ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಯುವ (ಕ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಸೂರ್ಯ (ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ರತ್ನ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಯುವ (ಕ)	4 ಪ್ರದರ್ಶನಗಳು
ರಾಜಕಮಲ್	
ರೂಬನ್ (ತ)	4 ಪ್ರದರ್ಶನಗಳು
ಸಂಗಂ	
ಅವತಾರ ಪುರುಷ 2 (ಕ)	4 ಪ್ರದರ್ಶನಗಳು
ಲಿಡೋ	
ಚಿರತೆ ಬಂತು ಚಿರತೆ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ಲಿಯೋ (ತ)	4 ಪ್ರದರ್ಶನಗಳು
ಪ್ರಭಾ	
ರತ್ನ (ಕ)	2 ಪ್ರದರ್ಶನಗಳು
ಲವ್ ಯೂ ಶಂಕರ (ಕ)	2 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್

ದೂ : 4240422/4241800

ಸ್ಕ್ರೀನ್ 1	ಕುಂಗ್ ಫೂ ಪಾಂಡ 4 (3ಡಿ) (ಇಂ): ಬೆ.11.40ಕ್ಕೆ, ಗಾಡ್ಜಿಲ್ಲಾ ಎಕ್ಸ್ ಕಾಂಗ್ ದಿ ನ್ಯೂ ಎಂಪೈರ್ (3ಡಿ) (ಇಂ): ಮ.1.45ಕ್ಕೆ, ದಾಸವರೇಣ್ಯ ಶ್ರೀ ವಿಜಯದಾಸರು (ಕ): ಸಂ.4.10ಕ್ಕೆ, ಆವೇಶಂ (ಮ): ರಾ.7ಕ್ಕೆ, ರಾ.10.05ಕ್ಕೆ.
ಸ್ಕ್ರೀನ್ 2	ಜೈ ಗಣೇಶ (ಮ): ಬೆ.10.50ಕ್ಕೆ, ರಾ.10.10ಕ್ಕೆ, O2 (ಕ): ಮ.1.20ಕ್ಕೆ, ಮೈದಾನ್ (ಹಿಂ): ಮ.3.35ಕ್ಕೆ, ವರ್ಷನ್‌ಗಲ್ಕು ಶೇಷಂ (ಮ): ರಾ.7ಕ್ಕೆ.
ಸ್ಕ್ರೀನ್ 3	ಅವತಾರ ಪುರುಷ 2 (ಕ): ಬೆ.10.45ಕ್ಕೆ, ಬಡೇ ಮಿಯಾನ್ ಚೋಟೆ ಮಿಯಾನ್ (ಹಿಂ): ಮ.1.10ಕ್ಕೆ, ಯುವ (ಕ): ಸಂ.4.15ಕ್ಕೆ, ರಾ.7.10ಕ್ಕೆ, ರಾ.10.05ಕ್ಕೆ.
ಸ್ಕ್ರೀನ್ 4	ದೋ ಔರ್ ದೋ ಪ್ಯಾರ್ (ಹಿಂ): ಬೆ.10.55ಕ್ಕೆ, ಸಂ.4.30ಕ್ಕೆ, ರಾ.7.15ಕ್ಕೆ, ರಾ.9.55ಕ್ಕೆ, ಮಂಜುಮ್ಮೆಲ್ ಬಾಯ್ಸ್ (ಮ): ಮ.1.45ಕ್ಕೆ.

ಐನಾಕ್ಸ್ ಮೂವೀಸ್

INOX LIVE THE MOVIE

ದೂ : 2533444 / 2433456

ಸ್ಕ್ರೀನ್ 1	ಗಾಡ್ಜಿಲ್ಲಾ ಎಕ್ಸ್ ಕಾಂಗ್ ದಿ ನ್ಯೂ ಎಂಪೈರ್ (3ಡಿ) (ಇಂ): ಬೆ.10.25ಕ್ಕೆ, ರಾ.10ಕ್ಕೆ, ಯುವ (ಕ): ಮ.1ಕ್ಕೆ, ಸಂ.4.15ಕ್ಕೆ, O2 (ಕ): ರಾ.7.30ಕ್ಕೆ.
ಸ್ಕ್ರೀನ್ 2	ಬಡೇ ಮಿಯಾನ್ ಚೋಟೆ ಮಿಯಾನ್ (ಹಿಂ): ಬೆ.10.45ಕ್ಕೆ, ಸಂ.5.55ಕ್ಕೆ, ಮೈದಾನ್ (ಹಿಂ): ಮ.2.10ಕ್ಕೆ, ಮಂಜುಮ್ಮೆಲ್ ಬಾಯ್ಸ್ (ಮ): ರಾ.9.20ಕ್ಕೆ.
ಸ್ಕ್ರೀನ್ 3	ಯುವ (ಕ): ಬೆ.10.10ಕ್ಕೆ, O2 (ಕ): ಮ.1.25ಕ್ಕೆ, ಪಾರಿಜಾತ ಪರ್ವಂ (ತೆ): ಮ.3.55ಕ್ಕೆ, ಆವೇಶಂ (ಮ): ಸಂ.6.50ಕ್ಕೆ, ಬಡೇ ಮಿಯಾನ್ ಚೋಟೆ ಮಿಯಾನ್ (ಹಿಂ): ರಾ.10.10ಕ್ಕೆ.
ಸ್ಕ್ರೀನ್ 4	ಮೈದಾನ್ (ಹಿಂ): ಬೆ.11.25ಕ್ಕೆ, ರಾ.9.50ಕ್ಕೆ, ವರ್ಷನ್‌ಗಲ್ಕು ಶೇಷಂ (ಮ): ಮ.3.10ಕ್ಕೆ, ಯುವ (ಕ): ಸಂ.6.35ಕ್ಕೆ.

ಮೈಸೂರು ವಿಷನ್ ಸಿನಿಮಾ

ದೂ : 0821–2973519

ಸ್ಕ್ರೀನ್ 1	ಪಾರ್ಕಿಂಗ್ (ಕ): ಬೆ.10.35ಕ್ಕೆ ಸಪ್ತಸಾಗರದಾಚೆ ಎಲ್ಲೋ 2 (ಕ): ಮ.1.10ಕ್ಕೆ, ಬ್ಯಾಡ್ ಮ್ಯಾನರ್ಸ್ (ಕ): ಸಂ.4ಕ್ಕೆ, ಅರ್ಧಂಬರ್ಧ ಪ್ರೇಮಕಥೆ (ತ): ಸಂ.6.35ಕ್ಕೆ, ಅನ್ನಪೂರ್ಣಿ (ತ): ರಾ.9.15ಕ್ಕೆ.
ಸ್ಕ್ರೀನ್ 2	ಅನಿಮಲ್ (ಹಿಂ): ಬೆ.10ಕ್ಕೆ, ಸಂ.6ಕ್ಕೆ, ರಾ.9.45ಕ್ಕೆ, ಸ್ಯಾಮ್ ಬಹದ್ದೂರ್ (ಹಿಂ): ಮ.1.45ಕ್ಕೆ.
ಸ್ಕ್ರೀನ್ 3	ಸ್ಯಾಮ್ ಬಹದ್ದೂರ್ (ಹಿಂ): ಬೆ.10.10ಕ್ಕೆ, ಸಂ.4.50ಕ್ಕೆ, ಅನಿಲಲ್ (ಹಿಂ): ಮ.1.05ಕ್ಕೆ, ರಾ.7.45ಕ್ಕೆ.
ಸ್ಕ್ರೀನ್ 4	ಸಪ್ತ ಸಾಗರದಾಚೆ ಎಲ್ಲೋ 2 (ತೆ): ಬೆ.10.45ಕ್ಕೆ, ಅನಿಮಲ್ (ಹಿಂ): ಮ.2.40ಕ್ಕೆ, ನೆಪೋಲಿಯನ್ (ಇಂ): ಸಂ.6.25ಕ್ಕೆ, ಸ್ಯಾಮ್ ಬಹದ್ದೂರ್ (ಹಿಂ): ರಾ.9.35ಕ್ಕೆ.

ಪಿವಿಆರ್ ಸಿನಿಮಾಸ್

ನೆಕ್ಸಸ್ ಸೆಂಟರ್‌ಸಿಟಿ ಮಾಲ್,
2ನೇ ಮಹಡಿ, ಮೊ.ನಂ: 8951357139

ದಿ ಫ್ಯಾಮಿಲಿ ಸ್ಟಾರ್ (ತೆ): ಬೆ.9.10ಕ್ಕೆ, ಮ.12.30ಕ್ಕೆ, ಮ.3.50ಕ್ಕೆ, ರಾ.7.10ಕ್ಕೆ, ರಾ.10.30ಕ್ಕೆ, ಯುವ (ಕ): ಬೆ.10.20ಕ್ಕೆ, ಬೆ.11.35ಕ್ಕೆ, ಮ.12.45ಕ್ಕೆ, ಮ.3.20ಕ್ಕೆ, ಸಂ.5.45ಕ್ಕೆ, ಸಂ.6.45ಕ್ಕೆ, ರಾ.10ಕ್ಕೆ, ಗಾಡ್ಜಿಲ್ಲಾ ಎಕ್ಸ್ ಕಾಂಗ್ ದಿ ನ್ಯೂ ಎಂಪೈರ್ (3ಡಿ) (ಇಂ): ಬೆ.10.45ಕ್ಕೆ, ಮ.1.25ಕ್ಕೆ, ಸಂ.6.50ಕ್ಕೆ, ರಾ.9.30ಕ್ಕೆ, ಅವತಾರ ಪುರುಷ 2 (ಕ): ಮ.12.40ಕ್ಕೆ, ಸಂ.6.35ಕ್ಕೆ, ಮ್ಯಾಟ್ನಿ (ಕ): ಮ.1.35ಕ್ಕೆ, ಭರ್ಜರಿ ಗಂಡು (ಕ): ಮ.2.50ಕ್ಕೆ, ದಿ ಫಸ್ಟ್ ಓಮನ್ (ಇಂ): ಸಂ.4ಕ್ಕೆ, ರಾ.9ಕ್ಕೆ, ಕ್ರೂವ್ (ಹಿಂ): ಸಂ.4.05ಕ್ಕೆ, ರಾ.9.15ಕ್ಕೆ, ಮಂಜುಮ್ಮೆಲ್ ಬಾಯ್ಸ್ (ಮ): ಸಂ.4.30ಕ್ಕೆ, ಮಾರಿಗೋಲ್ಡ್ (ಕ): ರಾ.7.25ಕ್ಕೆ, ಆಡುಜೀವಿತಂ (ಮ): ರಾ.10.15ಕ್ಕೆ.

ಗರುಡ ಮಾಲ್,

1ನೇ ಮಹಡಿ, ಮೊ.ನಂ: 9901373210

ಯುವ (ಕ): ಬೆ.9.30ಕ್ಕೆ, ಮ.12.25ಕ್ಕೆ, ಮ.3.40ಕ್ಕೆ, ಸಂ.6.30ಕ್ಕೆ, ರಾ.10.30ಕ್ಕೆ, ದಿ ಫ್ಯಾಮಿಲಿ ಸ್ಟಾರ್ (ತೆ): ಬೆ.9.50ಕ್ಕೆ, ಮ.12ಕ್ಕೆ, ಮ.3.20ಕ್ಕೆ, ಸಂ.6.40ಕ್ಕೆ, ರಾ.10ಕ್ಕೆ, ಗಾಡ್ಜಿಲ್ಲಾ ಎಕ್ಸ್ ಕಾಂಗ್ ದಿ ನ್ಯೂ ಎಂಪೈರ್ (3ಡಿ) (ಇಂ): ಮ.1.10ಕ್ಕೆ, ಮ.3.50ಕ್ಕೆ, ರಾ.9.45ಕ್ಕೆ, ಅವತಾರ ಪುರುಷ 2 (ಕ): ಮ.2ಕ್ಕೆ, ರಾ.7.35ಕ್ಕೆ, ಮ್ಯಾಟ್ನಿ (ಕ): ಸಂ.4.40ಕ್ಕೆ, ಆಡುಜೀವಿತಂ (ಮ): ಸಂ.6.55ಕ್ಕೆ, ರಾ.10.15ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಎಸ್‌ಆರ್‌ಹೆಚ್ ವಿರುದ್ಧ ಡೆಲ್ಲಿಗೆ ಸೋಲು

ನವದೆಹಲಿ, ಏ.20– ಟ್ರಾವಿಸ್ ಹೆಡ್, ಶಹಬಾಜ್ ಅಹಮದ್ ಅವರ ಸ್ಫೋಟಕ ಅರ್ಧಶತಕ ಹಾಗೂ ಟಿ.ನಟರಾಜನ್ ಮಾರಕ ದಾಳಿ ನೆರವಿನಿಂದ ಡೆಲ್ಲಿ ಕ್ಯಾಪಿಟಲ್ಸ್ ಎದುರು ಸನ್‌ರೈಸರ್ಸ್ ಹೈದರಾಬಾದ್ 67 ರನ್‌ಗಳ ಜಯ ಸಾಧಿಸಿದೆ.



ಇಲ್ಲಿನ ಅರುಣ್ ಜೇಟ್ಲಿ ಮೈದಾನದಲ್ಲಿ ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಹೈದರಾಬಾದ್ 20 ಓವರ್‌ಗಳಲ್ಲಿ 7 ವಿಕೆಟ್ ನಷ್ಟಕ್ಕೆ 266 ರನ್‌ಗಳ ಬೃಹತ್ ಮೊತ್ತ ದಾಖಲಿಸಿತು. ತಂಡದ ಪರ ಟ್ರಾವಿಸ್ ಹೆಡ್ 89, ಅಭಿಷೇಕ್ ಶರ್ಮಾ 46, ಕ್ಲಾಸೆನ್ 15, ನಿತೀಶ್ ರಾಣಾ 37, ಶಹಬ್ಬಾಜ್ ಅಹಮ್ಮದ್ 59, ಅಬ್ದುಲ್ ಸಮದ್ 13ರನ್ ಗಳಿಸಿದರು. ಡೆಲ್ಲಿ ಪರ ಕುಲದೀಪ್ ಯಾದವ್ 4, ಮುಖೇಶ್ ಕುಮಾರ್ ಹಾಗೂ ಅಕ್ಷರ್ ಪಟೇಲ್ ಒಂದೊಂದು ವಿಕೆಟ್ ಪಡೆದರು.

267 ರನ್‌ಗಳ ಗೆಲುವಿನ ಗುರಿ ಬೆನ್ನತ್ತಿದ ಡೆಲ್ಲಿ ಕ್ಯಾಪಿಟಲ್ಸ್ 19.1 ಓವರ್‌ಗಳಲ್ಲಿ 199 ರನ್‌ಗಳಿಗೆ ಆಲೌಟಾಗುವ ಮೂಲಕ ಸೋಲು ಅನುಭವಿಸಿತು. ತಂಡದ ಪರ ಜೇಕ್ ಫ್ರೇಸರ್ ಮೆಕ್‌ಗರ್ಕ್ 65, ಅಭಿಷೇಕ್ ಪೊರೆಲ್ 42, ಟ್ರಿಸ್ಟನ್ ಸ್ಟಬ್ಸ್ 10, ನಾಯಕ ರಿಷಬ್ ಪಂತ್ 44 ರನ್ ಗಳಿಸಿದರು. ಹೈದರಾಬಾದ್ ಪರ ಟಿ.ನಟರಾಜನ್ 4, ಮಯಾಂಕ್ ಮರ್ಕಂಡೆ, ನಿತಿಶ್ ರೆಡ್ಡಿ ತಲಾ 2, ವಾಷಿಂಗ್ಟನ್ ಸುಂದರ್, ಭುವನೇಶ್ವರ್ ಕುಮಾರ್ ತಲಾ ಒಂದೊಂದು ವಿಕೆಟ್ ಪಡೆದರು. ಟ್ರಾವಿಸ್ ಹೆಡ್ ಪಂದ್ಯಶ್ರೇಷ್ಠ ಪ್ರಶಸ್ತಿ ಪಡೆದರು.

1ನೇ ವರ್ಷದ ಪುಣ್ಯಸ್ಮರಣೆ



ಪೂಜ್ಯಶ್ರೀ ಡಿ.ಪಿ.ಅಣ್ಣೆಗೌಡ

ನಿಧನ: 21-04-2023

ನೀವು ನಮ್ಮನ್ನಗಲಿ ಇಂದಿಗೆ 1 ವರ್ಷ ಕಳೆದರು,
ಸದಾ ನಮ್ಮ ಮನದಲ್ಲಿ ಚಿರಸ್ಥಾಯಿಯಾಗಿ ನೆಲಸಿದ್ದಿರಿ.

ಸದಾ ನಿಮ್ಮ ನೆನಪಿನಲ್ಲಿರುವ

ಪತ್ನಿ ಶ್ರೀಮತಿ.ವಸಂತಮ್ಮ ಹಾಗೂ ಕುಟುಂಬಸ್ಥರು.
ಶ್ರೀಮತಿ ಲಕ್ಷ್ಮಿ–ಚಂದ್ರಶೇಖರ್, ಮೊಮ್ಮಕ್ಕಳಾದ ಸೃಜನ್, ನಿತೀಶ್,
ಶ್ರೀಮತಿ ಕೃತಿಕ–ಸೋಮಶೇಖರ್ ಮೊಮ್ಮಕ್ಕಳಾದ ವಿಶ್ಚಿತ, ನಿಶ್ಚಲ್ ಗೌಡ
ಶ್ರೀಮತಿ ಲತಾ–ನಾಗರಾಜ್, ಮೊಮ್ಮಕ್ಕಳಾದ ರಕ್ಷಿತ್, ಚಂದನ್ ಗೌಡ.

ಕಾಂಗ್ರೆಸ್ ಮುಖಂಡ ಪಾಲಹಳ್ಳಿ ಚಂದ್ರಶೇಖರ್ ಜೆಡಿಎಸ್‌ಗೆ ಸೇರ್ಪಡೆ



ಶ್ರೀರಂಗಪಟ್ಟಣ ತಾಲೂಕು ಕಾಂಗ್ರೆಸ್ ಮುಖಂಡ ಪಾಲಹಳ್ಳಿ ಪಿ.ಹೆಚ್. ಚಂದ್ರಶೇಖರ್ ಅವರ ನಿವಾಸಕ್ಕೆ ಮಂಡ್ಯ ಲೋಕಸಭಾ ಕ್ಷೇತ್ರದ ಮೈತ್ರಿ ಅಭ್ಯರ್ಥಿಯಾಗಿ ಸ್ಪರ್ಧಿಸಿರುವ ಮಾಜಿ ಮುಖ್ಯಮಂತ್ರಿ ಹೆಚ್.ಡಿ. ಕುಮಾರಸ್ವಾಮಿ ಅವರು ಭೇಟಿ ನೀಡಿದ್ದರು. ಈ ವೇಳೆ ಅವರನ್ನು ಅಭಿನಂದಿಸಿದ ಪಾಲಹಳ್ಳಿ ಪಿ.ಹೆಚ್. ಚಂದ್ರಶೇಖರ್ ಮತ್ತು ಅವರ ಬೆಂಬಲಿಗರು, ಇದೇ ವೇಳೆ ಕಾಂಗ್ರೆಸ್ ಪಕ್ಷ ತೊರೆದು ಜೆಡಿಎಸ್‌ಗೆ ಸೇರ್ಪಡೆಗೊಂಡರು. ಮಾಜಿ ಶಾಸಕ ರವೀಂದ್ರ ಶ್ರೀಕಂಠಯ್ಯ ರವರು ಈ ವೇಳೆ ಉಪಸ್ಥಿತರಿದ್ದರು.